ಪುಣ್ಯಾಭಿಸಾರ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
ನಂ. ೭, ಲ್ಯಾಂಗ್‌ಫೋರ್ಡ್ ರೋಡ್
ಬೆಂಗಳೂರು–೨೫

ಪು ಣ್ಯಾ ಭಿ ಸಾ ರ

"ಸುಖಾರ್ಥಂ ಸರ್ವಭೂತಾನಾಂ ಮತಾಃ
ಸರ್ವಾಃ ಪ್ರವೃತ್ತಯಃ ।
ಸುಖಂ ಚ ನವಿನಾಧರ್ಮಾತ್
ತಸ್ಮಾದ್ಧರ್ಮಪರೋ ಭವೇತ್ ॥"

ಪ್ರಥಮ ಮುದ್ರಣ
೧೯೭೪

ದ್ವಿತೀಯ ಮುದ್ರಣ
೧೯೮೪

— ಬೆಲೆ : ಹತ್ತು ರೂಪಾಯಿ —

ಮುದ್ರಕರು :
ಸಂಯುಕ್ತ ಕರ್ನಾಟಕ (ಜಾಬ್)
೨, ರೆಸಿಡೆನ್ಸಿ ರಸ್ತೆ, ಬೆಂಗಳೂರು-೨೫

" ಶ್ರೀಸದ್ಗುರುಪಾದಾರ್ಪಣಮಸ್ತು "

ಪು ಣ್ಯಾ ಭಿ ಸಾ ರ

ಮಲ್ಲಿಕಾ

ಲಕ್ಷ್ಮೀಪ್ರಕಾಶನ
ನಂ. ೭, ಲ್ಯಾಂಗ್‌ಫೋರ್ಡ್ ರೋಡ್
ಬೆಂಗಳೂರು-೨೫

ಅರಿಕೆ

ಈ ಪೌರಾಣಿಕ ನಾಟಕವನ್ನು
ಯಾರಾದರೂ ಪ್ರದರ್ಶಿಸುವುದಾದರೆ
ಲೇಖಕರ ಅನುಮತಿಯನ್ನು
ಪಡೆದುಕೊಳ್ಳತಕ್ಕದ್ದು.

ಮಲ್ಲಿಕಾ
1–10–1984

ಪು ಣ್ಯಾ ಭಿ ಸಾ ರ

ದೃಶ್ಯ–೧

(ವಿಯದ್ರಂಗದ ಮಧ್ಯರೇಖೆಯನ್ನು ಪ್ರಜ್ವಲಿಸುವ ಪ್ರೌಢಾರುಣ ಆಗಲೇ ದಾಟಿದ್ದಾನೆ. ನೆತ್ತಿಯುರಿಯುವಂತಹ ಅಗಾಧವಾದ ಬಿಸಿಲಿನ ಝಳ ಪೃಥ್ವಿಯಮೇಲೆ. ಭರ್ರನೆ ಬೀಸಿ ಬರುವ ಗಾಳಿಯೂ ಸಹ ಉಷ್ಣಭರಿತವೇ. ಆ ನಡು ಬೇಸಗೆಯ ಮಧ್ಯಾಹ್ನ ವಿರಾಮದಿಂದ ಪೌರವೀಥಿಗಳು ಸ್ತಬ್ಧ ಎಂದರೂ ಅಲ್ಲಲ್ಲಿ ವಿರಳವಾಗಿ ಪುರಪ್ರಜೆಗಳು ಕಂಡು ಬರುವುದುಂಟು. ಪಕ್ಷಿ ಸಂಕುಲ ಗಿಡುಮರಗಳ ತಂಪನ್ನಾಶ್ರಯಿಸಿ ವಿವಿಧಕಂಠಸ್ವರಗಳನ್ನು ಹರಿಯಬಿಡುತಿದ್ದುವು.

ದಟ್ಟಡವಿಯ ಪ್ರದೇಶದಿಂದ ದೌಡಾಯಿಸಿ ಬಂದ ವ್ಯಾಧನೊಬ್ಬ ಅತ್ಯಂತ ಉದ್ವೇಗದಿಂದ ಪೌರವೀಥಿಯನ್ನು ಪ್ರವೇಶಿಸುತ್ತಾನೆ. ಉಟ್ಟ ಬಟ್ಟೆ ಅಸ್ತವ್ಯಸ್ತ, ಕಟ್ಟಿದ ಮುಡಿ ಬಿಚ್ಚಿಹೋಗಿದೆ! ಮುಖಮೈಗಳಲ್ಲಿ ಹುಚ್ಚೆದ್ದು ಬಸಿಯುವ ಸ್ವೇದಧಾರೆ, ಬುಸಬುಸನೆ ಮೇಲೇರಿ ಬರುವ ಬಿಸಿಯುಸಿರು, ಭೀತಿಭಾವದಿಂದ ಕುಂದಿ ಕಂದಿದ ಮುಖ, ಪರಿತಾಪದಿಂದ ಶೀರ ಕಂಗೆಟ್ಟ ಬುದ್ಧಿಭಾವ ; ಇವು ಗಳನ್ನು ನೋಡಿದರೆ ಯಾರಿಗಾದರೂ ಏನೋ ಅನಾಹುತವಾಗಿದೆ ಎಂದು ಊಹಿಸಬಹುದಾದಂತಹ ಸ್ಪಷ್ಟ ಚಿತ್ರ. ಆಗ ಅದೇ ಸಮಯದಲ್ಲಿ ಅವನಿಗೆದು ರಾದ ಪ್ರಜೆ ಅಚ್ಚರಿಯಿಂದ ಅವನನ್ನು ತಡೆದು....)

ಪ್ರಜೆ—ಏನಾಯಿತು ? ಏಕೆ ಹೀಗೆ ಓಡಿ ಬರುತಿದ್ದಿ ?

ವ್ಯಾಧ—(ಎರಡು ಕೈಗಳಿಂದಲೂ ತಲೆ ಚಚ್ಚಿಕೊಂಡು ಆರ್ತಧ್ವನಿಯಲ್ಲಿ) **ಅಯ್ಯೋ, ಪ್ರಮಾದ !**

ಪ್ರಜೆ—(ಕಾತರಯುಕ್ತ ದನಿಯಲ್ಲಿ) ಏನು, ಏನು, ಸಮಾಚಾರ ಹೇಳು? ಏನಾಯ್ತು ? ಏಕಿಷ್ಟು ಗಾಬರಿ ?

ವ್ಯಾಧ—ಹಾ, ಆಗಬಾರದ್ದು ಆಗಿ ಹೋಯಿತು ! ಏನೆಂದು ಹೇಳಲಿ ? (ಅಸಹನೀಯವಾದ ಪರಿತಾಪದಿಂದ ರಂಗೊರೆದ ಕಣ್ಣುಗಳಲ್ಲಿ ಭಯಮಿಶ್ರಿತ ದಟ್ಟ ಛಾಯೆ ಮಿಂಚುವುದು)

ಪ್ರಜೆ—ಇಷ್ಟೇಕೆ ಉದ್ವೇಗ ? ಏನಾಗಿದೆ ಎಂಬುದನ್ನು ಹೇಳಬಾರದೆ ?

ವ್ಯಾಧ—ಅನ್ಯಾಯ....! (ಎದೆ ಬಡಿದುಕೊಳ್ಳುವನು)

ಪ್ರಜೆ—ಹೇಳಪ್ಪಾ, ಅದುದಾದರೂ ಏನು ? (ಅವನ ತೋಳನ್ನು ಹಿಡಿದು ಕೊಂಡು ಸಮಾಧಾನ ಮಾಡಿಸಲು ಪ್ರಯತ್ನಿಸುವನು)

(ಆ ವೇಳೆಗಾಗಲೇ ಅಲ್ಲಿ ಏಳೆಂಟು ಮಂದಿ ಮುಖಾಮುಖಿಯಾಗಿ ಕಲೆಯು ವರು. ಎಲ್ಲರ ಮುಖದಲ್ಲೂ ಕಾತರ-ಕುತೂಹಲಗಳ ಭಾವತರಂಗಗಳು ಅಲೆ ಅಲೆಯಾಗಿ ಕಾಣಿಸಿಕೊಳ್ಳುತ್ತವೆ. ಎಲ್ಲರೂ ವ್ಯಾಧನನ್ನು ಸುತ್ತುವರಿಯು ವರು)

ಒಬ್ಬ—(ವ್ಯಾಧನನ್ನು ಕುರಿತು) ಏಕೆ ಹೀಗಿದ್ದೀ, ಏನಾಯಿತು ಬೇಗನೆ ಹೇಳು ?

ವ್ಯಾಧ—(ಏನನ್ನೋ ಹೇಳಲು ಪ್ರಯತ್ನಿಸಿ ಸುಮ್ಮನಾಗುವನು. ಹೃದಯ ವ್ಯಾಪ್ತಿಗೆ ಮೀರಿ ಮಿಡಿದು ಭಯಭೀತಿಯ ಛಾಯೆ ಮುಖವನ್ನು ಆಚ್ಛಾದಿ ಸುವುದು)

ಇನ್ನೊಬ್ಬ—ಏನಿದು, ಬಾಯಿಬಿಟ್ಟು ಹೇಳು....!

ಮತ್ತೊಬ್ಬ—ಹೇಳಯ್ಯಾ, ಏಕಷ್ಟು ಗಾಬರಿ ?

(ಧ್ವನಿ ಉದ್ವೇಗದಿಂದ ಹೊರಬಿತ್ತು)

ವ್ಯಾಧ—ಅಯ್ಯೋ, ಬ್ರಹ್ಮದೇವ ನಮಗೀಕಷ್ಟ ಕೊಡಬಾರದಿತ್ತು. ಹಿರ ಣ್ಯಾಕ್ಷ ಪ್ರಭುಗಳನ್ನು ಒಂದು ಕಾಡುಹಂದಿ....ಊ....ಊ....

ಪ್ರಜೆ—ಹಂದಿ....? ಹಂದಿಯೇ ??

ಮತ್ತೊಬ್ಬ—ಅಯ್ಯೊ, ಹುಚ್ಚಪ್ಪಾ ! ಹಂದಿ ಏನು ಮಾಡೀತು ಪ್ರಭುಗಳಿಗೆ ?

(ದನಿ ತಿರಸ್ಕಾರದಿಂದ ಹೊಮ್ಮುವುದು)

ವ್ಯಾಧ—ಹಂದಿಯೇ ಮಾಡಿದ್ದು ಅನಾಹುತ! ಖಂಡಿತ ನನ್ನನ್ನು ನಂಬಿ! (ಸಂಕಟಪೂರ್ಣವಾದ ದನಿಯಲ್ಲಿ ಬಿತ್ತರಿಸುವನು)

ಮಗದೊಬ್ಬ—ಸರಿ....ಪೂರ್ತಿ ಹೇಳು ! ಹಂದಿ ಏನಾಯಿತು ?

ವ್ಯಾಧ—ಹಂದಿ ಏನಾಯಿತು ಅಂದರೆ ಏನು ಉತ್ತರಹೇಳಲಿ ? ನಮ್ಮ ಹಿರಣ್ಯಾಕ್ಷ ಪ್ರಭುಗಳನ್ನು ತಿವಿದೂ ತಿವಿದೂ....ಅಯ್ಯೊ, ಹೇಳಲಾರೆ!

(ಸಿಡಿದೊಡೆಯುವಂತಿದ್ದ ತಲೆಯನ್ನು ಎರಡೂ ಕೈಗಳಿಂದ ಅದುಮಿ ಹಿಡಿದುಕೊಳ್ಳುವನು)

ಪ್ರಜೆ—(ಆಶ್ಚರ್ಯ ಕುತೂಹಲಗಳ ಒಕ್ಕೂಟವಾಗಿ) ಪ್ರಭುಗಳಿಗೆ ಗಾಯವಾಗಿದೆಯೇ ?

ವ್ಯಾಧ—(ಕಂಪಿತವಾಣಿಯಲ್ಲಿ) ಗಾಯಪಡಿಸಿದ್ದರೆ ಏನು ಕಷ್ಟವಿತ್ತು ಸ್ವಾಮಿ ? ಸಾಯಿಸಿಯೇ ಬಿಟ್ಟಿದೆ ಹಂದಿ ! ಪ್ರಭುಗಳು....ಊ....ಊ....

ಒಬ್ಬ—(ಹೌಹಾರಿ) ನಿಜವಾಗಿ ?

ಎಲ್ಲರೂ—(ಉದ್ವೇಗದಿಂದ) ಅಯ್ಯೊ, ಇದೆಂತಹ ಸಮಾಚಾರ ? ಹಂದಿಯಿಂದ ಸಾವು ? ಆಶ್ಚರ್ಯ ! ಪರಮಾಶ್ಚರ್ಯ !

ವ್ಯಾಧ—ಹಾ ! ಪ್ರಭುಗಳು ಸತ್ತುಬಿದ್ದಿರುವುದನ್ನು ನನ್ನ ಸ್ವಂತ ಕಣ್ಣುಗಳಿಂದ ನೋಡಿ ಬಂದಿರುವೆ. (ದೀರ್ಘವಾದ ನಿಟ್ಟುಸಿರು ಬಿಡುವನು)

ಒಬ್ಬ—ಎಂತಹ ಪ್ರಮಾದ ! ಒಂದು ಯಃಕಶ್ಚಿತ ಹಂದಿ ಹಿರಣ್ಯಾಕ್ಷ ಪ್ರಭುಗಳಿಗೆ ಮಾರಕವಾಯಿತೆಂದರೆ ನಂಬುವುದೆಂತು ?

ಇನ್ನೊಬ್ಬ–ಬಹುಶಃ ಪೆಟ್ಟಾಗಿ ಮೂರ್ಛಿತರಾಗಿರಬಹುದೇನೋ. ಇವನು

ಸರಿಯಾಗಿ ನೋಡಿರಲಾರ.

ವ್ಯಾಧ—ಇಲ್ಲಪ್ಪಾ, ಎಲ್ಲರೂ ಹೋಗಿ ನೋಡಿ, ಅನುಮಾನವೇಕೆ ?

(ಆ ಮಾತು ಕೇಳಿ ಹೃದಯ—ಮಸ್ತಿಷ್ಕಗಳು ಏಕಕಾಲದಲ್ಲಿ ಸ್ತಬ್ಧಗೊಂಡಂತೆ ಎಲ್ಲರೂ ಗಂಭೀರಭಾವದಿಂದ ಪರಸ್ಪರ ಮುಖ ನೋಡಿಕೊಳ್ಳುವರು. ಒಂದು ಗಳಿಗೆ ಸದ್ದಿಲ್ಲದೆ ಉರುಳಿಹೋಯಿತೇನೋ, ಅನಂತರ ಆ ಭೀಕರ ಸುದ್ದಿ ಎಲ್ಲೆಡೆಯೂ ಕ್ಷಿಪ್ರವಾಗಿ ವಿಕಟವಾಗಿ ಕಾಡ್ಗಿಚ್ಚಿನಂತೆ ಹಬ್ಬಿಹೋಯಿತು! ಯಾರ ಬಾಯಿಯಲ್ಲಿ ನೋಡಿದರೂ ಹಾಹಾಕಾರ! ಅದೇ ವಿಚಾರ ವಿಮರ್ಶೆ! ಕಿಂಕರ್ತವ್ಯತಾ ತುಂಬಿದ ಚಿತ್ರಕಲ್ಪ!

ವ್ಯಾಧ ಅಲ್ಲಿಂದ ಅರಮನೆಯ ಕಡೆಗೆ ಯಥಾಸ್ಥಿತಿಯಲ್ಲಿ—ಭೀತಭಾವವೇ ಮೈವೆತ್ತು ಬಂದಂತೆ ಧಾವಿಸುವನು. ಅರಮನೆಯ ಆಸ್ಥಾನವನ್ನು ಮುಟ್ಟುವವರೆಗೂ ಬಹಿರ್ ವ್ಯಾಪಾರವಾವುದೂ ಅವನ ಗಮನಕ್ಕೆ ಬರಲಿಲ್ಲ. ಬಿರುಗಾಳಿಯಂತೆ ನುಗ್ಗಿದ ಅವನಿಗೆ ಹಿರಣ್ಯಕಶಿಪುವನ್ನು ಕಂಡೊಡನೆಯೆ ಗಂಟಲಾರಿ ವಾಗ್ಶಕ್ತಿ ಉಡುಗಿದಂತಾಯಿತು! ಒಡನೆ ತುಂಡುಗಡಿದ ಕದಳೀ ವೃಕ್ಷದಂತೆ ಕುಸಿದುಬಿದ್ದು ನಮುಸ್ಕರಿಸುವ ಕ್ರಮುವನ್ನು ಸಹ ಅಲ್ಲೇ ಪೂರೈಸಿದ. ಪ್ರಯತ್ನಿಸಿದರೂ ಅವನಿಂದ ಮಾತು ಹೊರಡಲಿಲ್ಲ. ಏನೆಂದು ಹೇಳಬೇಕೋ ಅದೂ ತಿಳಿಯಲಿಲ್ಲ. ರಾಕ್ಷಸರಾಜನು ಅವನ ಸ್ಥಿತಿಗತಿಯನ್ನು ತಾನೇ ಗಮನಿಸಿ ಸಖೇದಾಶ್ಚರ್ಯದಿಂದ ಪ್ರಶ್ನಿಸುವನು)

ಹಿರಣ್ಯಕಶಿಪು—ಏಕೆ ಗಾಬರಿಯಾಗಿದ್ದಿ, ಏನಾಯ್ತು ?

ವ್ಯಾಧ—ಮಹಾಪ್ರಭೋ (ತರತರ ನಡುಗುತ್ತ ಜೋರಾಗಿ ಅಳುವನು)

ಹಿರಣ್ಯಕಶಿಪು—(ಸಿಂಹಾಸನದಿಂದ ಸಿಡಿದೆದ್ದು) ಏನಾಯಿತು, ಬೇಗನೆ ಹೇಳು !

ವ್ಯಾಧ—(ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡು) ನಿಮ್ಮ ಮುಂದೆ ಏನು ಹೇಳಲಿ ಪ್ರಭೂ ! ನನಗೆ ಬಾಯೇ ಬರುವುದಿಲ್ಲ. ಆ ಹಂದಿಗೆ ನನ್ನ ಜೀವ ಏಕೆ ಬೇಡವಾಯಿತು ? ಅಯ್ಯೋ....!

ಹಿರಣ್ಯಕಶಿಪು –(ಕಾತರನಾಗಿ) ಈಗ ಆದದ್ದಾದರೂ ಏನು ? ಸರಿಯಾಗಿ ಹೇಳು !

ವ್ಯಾಧ—ಹೇಗೆ ಹೇಳಲಿ ಒಡೆಯಾ ?

(ಎದೆ ಚಚ್ಚಿಕೊಳ್ಳುತ್ತ ಕಂಬನಿಯನ್ನು ಸೂಸಿ ಜೋರಾಗಿ ಅಳುವನು)

ಹಿರಣ್ಯಕಶಿಪು—ಹಿರಣ್ಯಾಕ್ಷನೆಲ್ಲಿ ? ನಿನಗೇನಾಗಿದೆ ? ಏಕೆ ಹೀಗೆ ಬಡುಕೊಳ್ಳುತ್ತಿ ?

ವ್ಯಾಧ—ಹಿರಣ್ಯಾಕ್ಷ ಪ್ರಭುಗಳನ್ನು ಕಾಡುಹಂದಿ ಶಿವಿದೂ ಶಿವಿದೂ.... ಅಯ್ಯೋ ಹೇಳಲಾರೆ !

ಹಿರಣ್ಯಕಶಿಪು—ಹಂದಿಯೇ ? ಹಂದಿ ಏನು ಮಾಡೀತು ?

(ಅಟ್ಟಹಾಸದಿಂದ ನಗುವನು)

ವ್ಯಾಧ—ಮಹಾಪ್ರಭು ! ನನ್ನನ್ನು ನಂಬಿ ! ಆ ಕಾಡುಹಂದಿ ಅವರನ್ನು ಕೊಂದೇ ಬಿಟ್ಟದೆ !

ಹಿರಣ್ಯಕಶಿಪು—(ದಿಗ್ಭ್ರಾಂತನಾಗಿ) ಎಂಥ ಅಸಂಬದ್ಧ ? ನನ್ನ ತಮ್ಮನನ್ನು ಒಂದು ಹಂದಿ ಕೊಲ್ಲುವುದು ಸಾಧ್ಯವೇ ? ಹಾ ! ಇದೆಂತಹ ವಿಪರ್ಯಾಸ ?

ವ್ಯಾಧ—ಮಹಾಪ್ರಭೂ....! (ಮುಂದೆ ಮಾತು ಹೊರಡದೆ ಮುಸು ಮುಸು ಅಳುವನು)

ಹಿರಣ್ಯಕಶಿಪು—ನೀನು ನೋಡಿದೆಯೋ ಇಲ್ಲವೋ ? ಸರಿಯಾಗಿ ಬೊಗಳು !

ವ್ಯಾಧ—ನಿಮ್ಮ ಪಾದದಾಣೆ ಬುದ್ಧಿ ! ಅವರನ್ನು ಶಿವಿದೂ ಶಿವಿದೂ.... ಊ....ಊ....

ಹಿರಣ್ಯಕಶಿಪು—ಆಗ ನೀವೆಲ್ಲಾ ಎಲ್ಲಿ ಸತ್ತಿದ್ದಿರಿ ? ಹೇಗೆ ಇಂಥ ಅನಾಹುತ ಸಂಭವಿಸಿತು ?

ವ್ಯಾಧ—ಪ್ರಭೂ ! ನಾವೆಲ್ಲಾ ಹಿಂಬಾಲಿಸಿದೆವು. ಆದರೂ ಅದು ಎಲ್ಲರ

ಕಣ್ಣು ತಪ್ಪಿಸಿ ಪ್ರಭುಗಳನ್ನು ದೂರ ಸೆಳೆದುಕೊಂಡುಹೋಯಿತು!

ಹಿರಣ್ಯಕಶಿಪು—ಏನಾಯಿತು? ಎಲ್ಲಾ ಸರಿಯಾಗಿ ಹೇಳು!

ವ್ಯಾಧ—(ಗಡಗಡ ನಡುಗುತ್ತ) ಬೆಳಿಗ್ಗೆಯೆಲ್ಲಾ ಎಷ್ಟು ಶೋಧಿಸಿದರೂ ಸರಿಯಾದ ಬೇಟೆ ಸಿಗಲಿಲ್ಲ ಪ್ರಭುಗಳಿಗೆ. ಬರೀ ಹಕ್ಕಿಪಕ್ಕಿ ಮೊಲ ಜಿಂಕೆಗಳು ಮಾತ್ರ ಕಂಡು ಬಂದುದರಿಂದ ದೊಡ್ಡ ಬೇಟೆಯನ್ನು ಅರಸುತ್ತ ನಮ್ಮನ್ನು ಹಿಂದೆ ಬಿಟ್ಟು ಮುಂದೆ ನುಗ್ಗಿದರು. ಒಂದು ಬಹು ದೊಡ್ಡ ಹಂದಿ ಪೊದೆಯಲ್ಲಿ ಮಲಗಿ ಕೊಂಡುದುದನ್ನು ಕಂಡ ಪ್ರಭುಗಳು ಈಟಿಯಿಂದ ಜೋರಾಗಿ ಇರಿದರು. ಅದು ಭಯಂಕರವಾಗಿ ಕೊಬ್ಬಿ ಬೆಳೆದ ಮೃಗ. ನಾವೆಂದೂ ಅಂತಹ ಹಂದಿಯನ್ನು ನೋಡಿಯೇ ಇರಲಿಲ್ಲ. ಗಾಯಗೊಂಡ ಅದು ರೋಷದಿಂದ ಇತ್ತ ಕಡೆಯೇ ನುಗ್ಗಿ ಬಂತು! ಪ್ರಭುಗಳು ಮತ್ತೆ ಇರಿದರು. ನಾವೂ ಇರಿದೆವು. ಅದು ಸಾಯದೇ ತಪ್ಪಿಸಿಕೊಂಡು ಅರಣ್ಯವನ್ನು ಹೊಕ್ಕು ಕಣ್ಮರೆಯಾಯಿತು. ಪ್ರಭುಗಳು ಅಲ್ಲಿಗೆ ಸುಮ್ಮನಾಗಲಿಲ್ಲ. ಅದನ್ನು ಬೆನ್ನಟ್ಟಿ ಹೋದರು. ಅದು ದಟ್ಟಡವಿಯಾದುದರಿಂದ ನಾವು ಅದರ ಬೆಂಬಿಡಿದು ಹೋದರೂ ಹಾದಿ ತಪ್ಪಿದೆವು. ಅದರ ಜಾಡು ಬೇಗನೆ ಸಿಗಲಿಲ್ಲ. ಕೊನೆಗೆ ಪ್ರಭುಗಳ ಪ್ರಾಣಾಂತಕ ಚೀತ್ಕಾರ ಕೇಳಿ ಬಂದು ಆ ಸ್ಥಳಕ್ಕೆ ನಾವು ಧಾವಿಸಿದೆವು. ಆದರೆ ಆ ವೇಳೆಗೆ ಅನಾಹುತ ನಡೆದುಹೋಗಿತ್ತು! ಅಲ್ಲಿ ನಾವು ಕಂಡದ್ದು ಅವರ ಶವ! ನಿಮಗೆ ಮುಂದಾಗಿ ಸುದ್ದಿ ಕೊಡಲು ಓಡಿ ಬಂದೆ; ಜೀಯಾ ಕ್ಷಮಿಸಿ....!

(ಬಿಕ್ಕಿ ಬಿಕ್ಕಿ ಅಳುವನು)

ಹಿರಣ್ಯಕಶಿಪು—ಇಷ್ಟೊಂದು ಮಂದಿ ಇದ್ದೂ ಈ ಅನಾಹುತ? ಅದರಲ್ಲೂ ಒಂದು ಹಂದಿಯಿಂದ?

ವ್ಯಾಧ—ಅದು ಸಾಮಾನ್ಯ ಹಂದಿಯಲ್ಲ. ಅವರ ಮೈಯನ್ನು ಚೂರು ಚೂರು ಮಾಡಿಬಿಟ್ಟಿದೆ!

ಹಿರಣ್ಯಕಶಿಪು—ನೀನು ಸರಿಯಾಗಿ ಹಂದಿಯನ್ನು ನೋಡಿದೆಯಾ? ಅಥವಾ ಇನ್ನಾವುದಾದರೂ ಪ್ರಾಣಿಯೋ?

ವ್ಯಾಧ—ಹಂದಿಯೇ ಹೌದು ! ಇನ್ನಾವ ಪ್ರಾಣಿಯೂ ಅಲ್ಲ.

ಹಿರಣ್ಯಕಶಿಪು—ಅದನ್ನು ಕೊಲ್ಲಲಿಲ್ಲವೆಂದರೆ ಎಂತಹ ಆಶ್ಚರ್ಯ.

ವ್ಯಾಧ—ಪ್ರಭೂ....! ಅದು ಸಿಗಲೇ ಇಲ್ಲ. ಸಿಕ್ಕಿದ್ದರೆ ಪ್ರಭುಗಳು ಬಿಡುತ್ತಿದ್ದರೆ ?

(ಆ ವೇಳೆಗೆ ಕಾವಲುಗಾರರು ಪ್ರವೇಶಿಸುವರು)

ಕಾವಲುಗಾರ—(ಅಳುತ್ತ) ಮಹಾಪ್ರಭೂ, ಕ್ಷಮಿಸಬೇಕು! ಅರಣ್ಯ ದಿಂದ ಬೇಟೆಗಾರರು ಹಿರಣ್ಯಾಕ್ಷ ಪ್ರಭುಗಳ ಶವವನ್ನು ಹೊತ್ತು ತಂದಿದ್ದಾರೆ !

(ಹಿರಣ್ಯಕಶಿಪು ಮೂರ್ತಿಮತ್ತಾಗಿ ನೋಡುತ್ತ ನಿಲ್ಲುವನು. ಸ್ವಲ್ಪ ಸಮಯದೊಳಗಾಗಿ ಶವವನ್ನು ಹೊತ್ತವರು ಇತ್ತಲೆ ಬರುವರು)

ಹಿರಣ್ಯಕಶಿಪು—(ಸ್ವಗತ) ಹಂದಿ ಕೊಂದಿದೆಯೆಂದರೆ ಈಗಲೂ ನಂಬಿಕೆ ಮೂಡುವುದಿಲ್ಲ. ಬಹಳ ಅನ್ಯಾಯ....ನನ್ನ ಬಲಗೈ ಮುರಿದು ಹೋಯಿತು !

(ದಳವಾಯಿಗಳೂ, ಮಂತ್ರಿಗಳೂ, ಪುರಪ್ರಜೆಗಳೂ ಆಗಲೇ ಅಲ್ಲಿ ನೆರೆಯಲಾರಂಭಿಸಿದರು. ಕೇರಿಕೇರಿಗಳಿಂದಲೂ ಜನ ಓಡೋಡಿ ಬರುತ್ತಿದ್ದಾರೆ. ಎಲ್ಲಿ ನೋಡಿದರೂ ಗದ್ದಲವೋ ಗದ್ದಲ ! ಅದೇ ವಿಚಾರ ಗೋಷ್ಠಿ ! ವ್ಯರ್ಥಾಲಾಪ ! ನಿಡು ಸುಯ್ಲು)

ಅಮಾತ್ಯ—(ಹಿರಣ್ಯಕಶಿಪುವಿನ ಮುಂದೆ ಕಂಬನಿ ಸುರಿಸುತ್ತ) ನಮಗೆ ಅವರು ಬೇಟೆಗೆ ಹೋದದ್ದೇ ತಿಳಿಯದು. ತಿಳಿದಿದ್ದರೆ ನಾವೇ ಜೊತೆಗಿರಬಹುದಾಗಿತ್ತು.

ದಳವಾಯಿ – ಬೆಳಗ್ಗೆ ಶಿವಪೂಜೆ ಮುಗಿಸಿಯೇ ಹೊರಟಿದ್ದಾರೆ ಎಂದು ಕೇಳಿದೆ. ನಮಗದು ತಿಳಿಯಲಿಲ್ಲ. ಬರೀ ವ್ಯಾಧರೊಂದಿಗೆ ಹೋಗಬಾರದಿತ್ತು. ಅವರಿಗೆ ಇವೆಲ್ಲಾ ಲಕ್ಷ್ಯವೇ ಇಲ್ಲ. ಬೇಟೆ ಎಂದರೆ ನೀರು ಕುಡಿದಷ್ಟು ಸರಾಗ.

ಹಿರಣ್ಯಕಶಿಪು—(ದೂತನನ್ನು ಕುರಿತು) ನೀನು ಹೋಗಿ, ರಾಜಗುರುಗಳನ್ನು ಈಗಲೇ ಬರಮಾಡು.

(ಆ ಕೂಡಲೇ ರಾಜಪುರೋಹಿತರಿಗೆ ಕರೆಹೋಯಿತು. . ಅವರು ಸುದ್ದಿ ತಿಳಿದು ಭಾವಾತಿರೇಕದಿಂದ ಹೌಹಾರಿ ಅರಮನೆಗೆ ಧಾವಿಸಿ ಬಂದರು. ಮುಖ ಬಿಂಬದಲ್ಲಿ ಪ್ರೇತಕಳೆ ತಾಂಡವಾಡುತಿತ್ತು)

ಹಿರಣ್ಯಕಶಿಪು—ಗುರುಗಳೇ, ಇಂದು ಬಹಳ ದುರ್ದಿನ. ನನ್ನ ಶೋಕಕ್ಕೆ ಆಶ್ಚರ್ಯಕ್ಕೆ ಎಣೆಯೇ ಇಲ್ಲ. ಈ ವಿಚಾರದಲ್ಲಿ ನೀವು ಏನು ಹೇಳಬಲ್ಲಿರಿ? ಇದು ಸಂಬದ್ಧವೊ ಅಥವಾ ಅಸಂಬದ್ಧವೋ?

ರಾಜಗುರು—ರಾಕ್ಷಸೇಂದ್ರ, ಇಲ್ಲಿ ಕೇಳು. ಇದು ಅಸಂಬದ್ಧ. ಕಾಡು ಹಂದಿ ನಿನ್ನ ತಮ್ಮನನ್ನು ಕೊಲ್ಲಲಿಲ್ಲ. ಹಿರಣ್ಯಾಕ್ಷನಂತ ಶೂರಾಗ್ರೇಸರ ಒಂದು ಸಣ್ಣ ಪ್ರಾಣಿಯಿಂದ ಮರಣಹೊಂದುವುದೆಂದರೇನು?

ಹಿರಣ್ಯಕಶಿಪು—(ಉದ್ದೀಪ್ತದನಿಯಲ್ಲಿ) ಹಾಗಾದರೆ ಕಾರಣವೇನಿದ್ದೀತು?

ರಾಜಗುರು—(ಸಖೇದಾಶ್ಚರ್ಯ ವಿಸ್ತೃತನಯನಗಳಲ್ಲಿ ರಂಗನ್ನು ಸೂಸಿ) ಯೋಚಿಸಿ ನೋಡು! ಇದೆಂದಾದರೂ ಸಾಧ್ಯವೇ?

ಹಿರಣ್ಯಕಶಿಪು—ನನಗೂ ಅದೇ ಆಶ್ಚರ್ಯ....ಬಿಡಿಸಲಾರದ ಒಗಟು. ಆದರೆ ಅದನ್ನು ವ್ಯಾಧರೆಲ್ಲ ದೃಢವಾಗಿ ಸಮರ್ಥಿಸುತ್ತಾರೆ.

ರಾಜಗುರು—ಇರಬಹುದು. ಆದರೆ ಅದು ಖಂಡಿತ ಹಂದಿಯಲ್ಲ; ಹಂದಿಯ ರೂಪು ಧರಿಸಿ ಬಂದ ವಿಷ್ಣು! ಇದರಲ್ಲಿ ಸಂಶಯಬೇಡ.

ಹಿರಣ್ಯಕಶಿಪು—ಹಾ....! ವಿಷ್ಣುವೇ? ನೀವು ಅದನ್ನೆಂತು ಅಷ್ಟು ಖಚಿತವಾಗಿ ಹೇಳಬಲ್ಲಿರಿ?

ರಾಜಗುರು—(ದೃಢವಾದ ಕಂಠದಿಂದ) ಆ ಮಾಯಾವಿಯಿಂದಲ್ಲದೆ ನಿನ್ನ ತಮ್ಮನಿಗೆ ಖಂಡಿತ ಸಾವು ಬರುವುದು ಸಾಧ್ಯವಿಲ್ಲ.

ಹಿರಣ್ಯಕಶಿಪು—(ಕೋಪೋದ್ದೀಪ್ತನಾಗಿ ಕಣ್ಣುಗಳಲ್ಲಿ ಕಿಡಿಗಳನ್ನು ಕಾರುತ್ತ) ನಮ್ಮ ಕುಲ ವೈರಿಯನ್ನು ಎಲ್ಲಿದ್ದರೆ ತಾನೆ ಬಿಡುವೆ? ನೋಡೋಣ ಅವನು ಎಲ್ಲಿ ಅಡಗುತ್ತಾನೋ. (ಭ್ರೂ ಭಂಗಮಾಡಿ ಎರಡೂ ಕೈಗಳಿಂದ ಕಟ್ಟಿ

ಬಂಧನಗೈದು ರೋಷದಿಂದ ಭೂಮಿಯನ್ನು ಕಾಲುಗಳಿಂದ ಅಪ್ಪಳಿಸುತ್ತಾನೆ! ಅವನ ರುದ್ರಭೀಷಣತೆಯನ್ನು ನೋಡಿ ರಾಜಗುರುವಿನ ಎದೆ ತಲ್ಲಣಿಸಿ ಹೋಗುತ್ತದೆ. ಸ್ವಲ್ಪಹೊತ್ತು ಏನು ಹೇಳಲೂ ತೋರದೆ ಸುಮ್ಮನಾಗುವನು. ಕೆಲಸಮಯ ನಿಶ್ಶಬ್ದವಾಗಿ ಉರುಳಿಹೋಯಿತು. ಅನಂತರ....)

ರಾಜಗುರು—ಮಹಾರಾಜ, ಆ ಧೂರ್ತ ವಿಷ್ಣು ನಿನ್ನಂತಹ ಶೂರಾಧಿ ಶೂರನನ್ನು ಕೆಣಕಿದ್ದು ವಿಶೇಷವೇ. ಇದನ್ನು ತೀರ ಹುಡುಗಾಟವೆಂದು ಅವನು ಭಾವಿಸಿರಬಹುದು !

(ಆ ಮಾತು ಕೇಳಿ ಹಿರಣ್ಯಕಶಿಪುವಿನ ರಕ್ತ ಕೊತಕೊತ ಕುದಿಯಿತು. ಸಿಟ್ಟನಿಂದ ಭೀಕರವಾಗಿ ಹೂಂಕರಿಸಿ....)

ಹಿರಣ್ಯಕಶಿಪು—(ಅತ್ಯುಗ್ರನಾಗಿ ಬಿಗಿಮುಷ್ಟಿಯನ್ನು ಎತ್ತಿಹಿಡಿದು ಒಂದೇ ಬಾರಿಗೆ ಅಪ್ಪಳಿಸಿ ಬಿಡುವಂತೆ) ಗುರುಗಳೇ, ನಾನು ಎಂದಿದ್ದರೂ ನನ್ನ ಶತ್ರುವನ್ನು ಸುಮ್ಮನೆ ಬಿಡುವೆನೆ? ಇಂದೇ ಅವನ ಆಯುಸ್ಸು ಮುಗಿಯಿತು ಎಂದು ತಿಳಿದುಕೊಳ್ಳಿ !

ರಾಜಗುರು—ಅದು ತಿಳಿದೇ ಇದೆ. ಅವನು ತನ್ನ ಮರಣಹೋಮಕ್ಕೆ ತಾನೆ ಅಣಿಗೊಳಿಸಿದ್ದಾನೆ!

ಹಿರಣ್ಯಕಶಿಪು—ಆದರೆ, ಒಂದು ವಿಶೇಷ. ಅವನು ಹಂದಿಯ ರೂಪ ಧರಿಸಿ ಬರುವ ಕಾರಣವೇನಿತ್ತು ?

ರಾಜಗುರು—(ಫಕಫಕನೆ ನಕ್ಕು) ನಿನ್ನ ಉಗ್ರ ಭಯ ! ಅವನು ಬಹಳ ಬುದ್ಧಿವಂತ. ಅದರಿಂದಲೇ ಈ ಉಪಾಯ ! ನೀನವನನ್ನು ಕಾಡು ಹಂದಿ ಎಂದೇ ಭಾವಿಸಿದರೆ ಅವನ ಮೇಲೆ ವೈರತ್ವವೇ ಇಲ್ಲವಲ್ಲ? ಯೋಚಿಸಿನೋಡು, ಅವನು ಸುಮ್ಮನೆ ವೇಷ ತೊಟ್ಟಿಲ್ಲ. ಅವನೆಂದೂ ನಿನ್ನ ಮುಂದೆ ಸ್ವರೂಪ ದಿಂದ ಬರಲಾರ. ಮೋಸ...! ಅವನಲ್ಲಿರುವುದೇ ಅಷ್ಟೆಟೆ ಮೋಸ !

ಹಿರಣ್ಯಕಶಿಪು—(ವಿಷ್ಣುವನ್ನು ಉದ್ದೇಶಿಸಿ) ರಣಹೇಡಿ ! ಮೋಸಗಾರ ! ಕ್ಷುದ್ರ ಹಂದಿ ! ನೀನು ಎಲ್ಲಿದ್ದರೆ ತಾನೇ ನನ್ನಿಂದ ತಪ್ಪಿಸಿಕೊಳ್ಳಬಲ್ಲೆ? ತಿಳಿ

ದಿರು, ನಾನೇ ನಿನಗೆ ಘೋರ ಮೃತ್ಯು !

ರಾಜಗುರು—ಏನೇ ಬರಲಿ, ಅವನು ಎಲ್ಲೇ ಅಡಗಿರಲಿ, ಈ ಬ್ರಹ್ಮಾಂಡ ವನ್ನೇ ಅಡಿಮೇಲು ಮಾಡಿ ಅವನ ಸರ್ವನಾಶ ಮಾಡಲೇಬೇಕು. ಅದೇ ನಿನ್ನ ಜೀವನದ ಉದ್ದೇಶವಾಗಲಿ.

ಹಿರಣ್ಯಕಶಿಪು—(ರೋಷ ಭೀಷಣನಾಗಿ ತನ್ನ ಭುಜಗಳನ್ನು ತಾನೇ ತಟ್ಟಿ) ಗುರುಗಳೇ, ನನ್ನ ಶಕ್ತಿ ಸಾಮರ್ಥ್ಯ....

(ಮುಂದೆ ಮಾತಾಡಗೊಡದೆ ರಾಜಗುರು ನಡುವೆ ಬಾಯಿ ಹಾಕುವನು)

ರಾಜಗುರು—ಕ್ಷಮಿಸು ಮಹಾರಾಜ ! ಅವನು ಮಹಾ ಮಾಯಾವಿ. ಯಾವ ರೂಪದಲ್ಲಾದರೂ ಬಂದಾನು ! ಅವನ ಮುಂದೆ ಶಕ್ತಿ ಪ್ರದರ್ಶನಕ್ಕಿಂತ ಯುಕ್ತಿಪ್ರದರ್ಶನ ಒಳ್ಳೆಯದು. ಶಕ್ತಿ ಸಾಮರ್ಥ್ಯಗಳೊಂದಿಗೆ ಯುಕ್ತಿಯನ್ನು ಆರ್ಜಿಸು. ಯುಕ್ತಿಯನ್ನರಿಯದೆ ಅವನನ್ನು ಬಗ್ಗುಬಡಿಯುವುದು ಕಷ್ಟ.

ಹಿರಣ್ಯಕಶಿಪು—ಯುಕ್ತಿಯೇ ?

(ಅಟ್ಟಹಾಸದಿಂದ ನಗುವನು)

ರಾಜಗುರು—ನೀನು ನಗುತ್ತಿ....ನನಗೆ ಭಯಭೀತಿ....ಕಳವಳ.

ಹಿರಣ್ಯಕಶಿಪು—ಅದೇಕೆ....?

ರಾಜಗುರು—ನಿನ್ನ ಮೇಲೂ ಮೋಸದ ಬಲೆ ಬೀಸಿದರೆ ಏನು ಗತಿ ?

ಹಿರಣ್ಯಕಶಿಪು—(ಗಟ್ಟಿಯಾಗಿ ಹೂಂಕರಿಸಿ) ನನ್ನ ಮೇಲೆ ಮೋಸದ ಬಲೆ? ಅವನು ಎಲ್ಲಿದ್ದಾನೆ....ಅವನ ನೆಲೆಯಾವುದು ಅಷ್ಟು ತಿಳಿದುಕೊಳ್ಳಿ ಸಾಕು.

ರಾಜಗುರು—(ಸ್ವಗತ) ಅವನ ನಿವಾಸ ವೈಕುಂಠ. ಆದರೆ ಅವನ ನೆಲೆ ಯನ್ನು ಅರಿತವರಾರು ? (ಪ್ರಕಾಶ) ಮಹಾರಾಜಾ ! ಇಲ್ಲಿ ಕೇಳು, ಹಿರಣ್ಯಾಕ್ಷ ಬಹಳ ದಕ್ಷ. ಅವನ ಭುಜಬಲದಿಂದ ರಾಜ್ಯ ವಿಸ್ತೃತಗೊಂಡಿತು. ಶತ್ರು ಗಳನ್ನು ಗೆದ್ದು ಯುದ್ಧದಲ್ಲಿ ಎಲ್ಲರಿಗೂ ಮೇಲುಗೈ ಎನಿಸಿಕೊಂಡಿದ್ದ. ಅವನನ್ನು ಯುದ್ಧರಂಗದಲ್ಲಿ ಎದುರಿಸುವುದು ಎಂದಿಗೂ ಸಾಧ್ಯವಿಲ್ಲವೆಂಬುದನ್ನು ಅರಿತ

ವಿಷ್ಣು ಈ ಧೂರ್ತ ಕ್ರಮ ಕೈಕೊಂಡಿದ್ದಾನೆ. ನಿಮ್ಮಿಬ್ಬರಲ್ಲಿ ಒಬ್ಬನನ್ನು ಮೊದಲು ಕೊಲ್ಲುವುದು ಅವನ ಉದ್ದೇಶ; ಅನಂತರ ಇನ್ನೊಬ್ಬನನ್ನು ಕೊಲ್ಲುವುದು ಸುಲಭ. ಮುಂದೆ ಅವನು ಮಾರಕಾಸ್ತ್ರ ತೊಡುವುದು ನಿನ್ನ ಮೇಲೆ. ಆದ್ದರಿಂದ ಹೆಜ್ಜೆಹೆಜ್ಜೆಯಲ್ಲಿಯೂ ಎಚ್ಚರಿರು! ಹೇಗಾದರೂ ಅವನನ್ನು ಮೊದಲು ಕೊಂದರೆ ನಿನಗೆ ಉಳಿಗಾಲ. ಅಂದರೆ ಸಮಯವರಿತು ಸೂಕ್ತವರಿತು ಕ್ರಮವರಿತು ಮುಂದುವರಿಯಬೇಕು. ಇಲ್ಲದಿದ್ದಲ್ಲಿ ರಾಕ್ಷಸಕುಲಕ್ಕೇ ವಿನಾಶ ಖಂಡಿತ. ಹಾಗೆಂದು ಖಂಡಿತ ದುಡುಕಬೇಡ. ಅವನು ಎಷ್ಟು ಎಚ್ಚರಿಕೆಯಿಂದ ನಿನ್ನ ತಮ್ಮನನ್ನು ದೂರಕ್ಕೆ ಒಂಟಿಯಾಗಿ ಕರೆದೊಯ್ದು ಹೇಗೆ ಕೊಲೆಗೈದನೋ, ಹಾಗೆಯೇ ಒಂದು ಅತ್ಯಂತ ಸೂಕ್ಷ್ಮವಾದ ಮತ್ತು ನಿಗೂಢವಾದ ಕ್ರಮದಲ್ಲೇ ಹೋಗಬೇಕು. ಇಲ್ಲದಿದ್ದಲ್ಲಿ ಬಹಳ ಕಷ್ಟ; ರಾಜಾ ಎಚ್ಚರಿರು!

ಹಿರಣ್ಯಕಶಿಪು—ಛೀ! ಎಂತಹ ಅಸಹ್ಯ! ನನ್ನ ತಮ್ಮನಂತಹ ಶೂರಾಗ್ರೇಸರನ್ನು ಕೊಲ್ಲಲು ಹಂದಿಯ ರೂಪತಾಳಿ ಬಂದನೇ ರಣಹೇಡಿ! ಅವನು ದೇವಕುಲಕ್ಕೆ ಹೇಗೆ ನಾಯಕನಾಗಬಲ್ಲ? ಹಂದಿ! ತುಚ್ಛ ಹಂದಿ....!

(ಕೊರಳು ಸೀಳುವಂತೆ ಘರ್ಜಿಸುವನು. ಕೋಪ-ತಾಪಗಳಿಂದ ಆಪಾದ ಮಸ್ತಕವೂ ಕಂಪಿಸುವುದು)

ರಾಜಗುರು—ಮಹಾರಾಜ! ಹಿರಣ್ಯಾಕ್ಷನ ಅಕಾಲಮರಣ ಇಡೀ ರಾಕ್ಷಸ ಕುಲಕ್ಕೆ ಅಗಾಧವಾದ ನಷ್ಟ. ಅದು ನಿನಗೂ ಗೊತ್ತು. ಮೇಲಾಗಿ, ಅವನು ಪುತ್ರಹೀನ, ಅವನ ವಂಶ ನಿರ್ವಂಶವಾಯಿತು. ನಿನಗೂ ಈವರೆಗೆ ಸಂತಾನವಿಲ್ಲ ಮುಂದೆ ನಿನ್ನ ವಂಶ ನಿನ್ನಿಂದಲೇ ನಡೆಯತಕ್ಕದ್ದು. ಇನ್ನು ಮೇಲೆ ನೀನು ಹೆಜ್ಜೆಹೆಜ್ಜೆಯನ್ನೂ ಹದವರಿತು ಮುಂದಿಡುವುದನ್ನು ಖಂಡಿತ ಮರೆಯಬಾರದು. ರಾಕ್ಷಸಕುಲೋದ್ಧಾರಕ್ಕಾಗಿ, ನಿನ್ನ ವಂಶೋದ್ಧಾರಕ್ಕಾಗಿ ನೀನು ನಿನ್ನನ್ನು ಸರ್ವತ್ರ ಕಾಪಾಡಿಕೊಳ್ಳಬೇಕು; ಯಾವತ್ತೂ ದುಡುಕಬಾರದು.

(ಆ ಮಾತು ಅಂತಸ್ಥಲವನ್ನು ಮುಟ್ಟಿತು. ಹಿರಣ್ಯಕಶಿಪು ಸ್ವಲ್ಪಹೊತ್ತು ಮಾತಾಡದೆ ಕುಳಿತ. ತಾಪ-ಪರಿತಾಪಗಳಿಂದ ಎದೆ ಎರಿಳಿಯುತಿತ್ತು)

ರಾಜಗುರು—ದೇವತೆಗಳು ನಿನ್ನ ಸರ್ವೋಚ್ಚ ಕೀರ್ತಿ ಕಳಶವನ್ನು ಮುರಿಯುವುದಕ್ಕಾಗಿ ಹಗಲಿರುಳೂ ಕಾದಿದ್ದಾರೆ.

ಹಿರಣ್ಯಕಶಿಪು—ನಿಮ್ಮ ಉಪದೇಶವನ್ನು ಕೇಳಲೇಬೇಕು, ಕೇಳುತ್ತಿರುವೆ. ಆದರೆ ಆ ಹುಲುದೇವತೆಗಳಿಗೆ ಕಿಂಚಿತ್ತೂ ಬೆದರುವವನಲ್ಲ.

ರಾಜಗುರು—(ಕೆಮ್ಮಿ ಗಂಟಲನ್ನು ಸರಿಪಡಿಸಿಕೊಂಡು) ಮಹಾರಾಜ, ಅದು ಗೊತ್ತು. ಅದಕ್ಕಾಗಿಯೇ ಈ ನನ್ನ ಉಪದೇಶ. ನೀನು ಯಾವತ್ತೂ ನನ್ನ ಉಪದೇಶವನ್ನು ನಿರ್ಲಕ್ಷಿಸಬಾರದು.

ಹಿರಣ್ಯಕಶಿಪು—(ದಂಷ್ಟ್ರ ಘರ್ಷಣಗೈದು ಅತ್ಯಂತ ಕರ್ಕಶ ದನಿಯಲ್ಲಿ) ಆ ನೀಚ ಎದುರಿಗೆ ಒಂದು ಯುದ್ಧ ಹೂಡಿದ್ದರೆ ಅದರ ರೀತಿಯೇ ಬೇರೆಯಾಗುತಿತ್ತು.

ರಾಜಗುರು—ದೇವತೆಗಳೇ ಅಷ್ಟು—ಬಹಳ ಕೃತ್ರಿಮ. ಅದರ ಸುಳಿವು ಕಿಂಚಿತ್ ಲಭಿಸಿದ್ದರೂ ನೀನು ತಮ್ಮನನ್ನು ಕಳೆದುಕೊಳ್ಳುತ್ತಿರಲಿಲ್ಲ. ಅವನೇ ವಿಷ್ಣುವನ್ನು ಧ್ವಂಸಗೊಳಿಸುತಿದ್ದ.

(ಹಿರಣ್ಯಕಶಿಪುವಿನ ಚಿತ್ತ ಉತ್ಕ್ಷಿಪ್ತವಾಗಿತ್ತು. ಮುಖ—ಕಣ್ಣುಗಳು ಕೆಂಪಡರಿ ಇನ್ನಷ್ಟು ಉಗ್ರವಾಗಿ ಕಾಣಿಸುತಿದ್ದ. ಮೈನವಿರು ನಿಮಿರಿ ನಿಂತಿದ್ದುವು. ಬಿಸಿಯುಸಿರು ಶಿದಿಯಂತೆ ಏರಿ ಇಳಿಯುತಿತ್ತು)

ರಾಜಗುರು—(ಚಿಂತಾಭಾರದಿಂದ) ದುರ್ಘಟ ಕಾಲ ಒದಗುವುದನ್ನು ಮುಂದಾಗಿ ಅರಿಯುವಂತಿದ್ದರೆ ಈ ಜೀವನದಲ್ಲಿ ಜಂಜಡವೇ ಇರುವುದಿಲ್ಲ. ಆದ್ದರಿಂದ ಹದವರಿತು ಹೆಜ್ಜೆ ಮುಂದಿಡುವುದು ಒಳ್ಳೆಯದು. ಈಗ ಸಮಯ ಸಾಧನೆಯಲ್ಲೇ ಇರುವುದು ಸ್ವಾರಸ್ಯ.

(ಹಿರಣ್ಯಕಶಿಪು ಸ್ವಲ್ಪ ಸಮಯ ಏನೂ ಹೇಳಲಿಲ್ಲ. ಅಂತರ್ನಿಹಿತ ಕೋಪದ ಕಾವು ಒಡಲ ಬಳ್ಳಿಯನ್ನು ಸುಡುತ್ತಲೇ ಇತ್ತು. ಚಿತ್ತ ಕಲ್ಪ ಶತ್ರು ಮರ್ದನವನ್ನು ಕುರಿತು ಪರ್ಯಾಲೋಚನೆಯಲ್ಲಿ ತೊಡಗಿ ಸಂಭಾಷಣೆಗೆ ಸ್ವಲ್ಪ ಸಮಯ ವಿರಾಮವನ್ನು ಕಲ್ಪಿಸಿಕೊಟ್ಟಿತು)

ರಾಜಗುರು—ರಾಕ್ಷಸೇಂದ್ರಾ, ಕೆಲವು ಕಾಲ ಅರಣ್ಯದಲ್ಲಿ ರಾಕ್ಷಸರನ್ನು ಕಾವಲಿಟ್ಟು ವಿಷ್ಣುವಿನ ಚಲನವಲನವನ್ನು ಗಮನಿಸುವುದು ಒಳ್ಳೆಯದು.

ಹಿರಣ್ಯಕಶಿಪು—ಬರೀ ಅರಣ್ಯದಲ್ಲಿ ಮಾತ್ರವೇನು ? ಇಡೀ ಬ್ರಹ್ಮಾಂಡವನ್ನೇ ಶೋಧಿಸಿಬಿಡುವೆ !

ರಾಜಗುರು—ಅದು ಸರಿಯೆ, ನಾನು ಹೇಳುತ್ತಿರುವುದು ಎಲ್ಲಿ ಹಂದಿ ಕಾಣಿಸಿತೋ ಅಲ್ಲಿ.

ಹಿರಣ್ಯಕಶಿಪು—ಅದು ಸೂಕ್ತ ಗುರುಗಳೇ.

(ಅದೇ ವೇಳೆಗೆ ದೂತರು ಒಳಗಡೆ ಪ್ರವೇಶಿಸುವರು. ದುಃಖಖಿನ್ನ ಮುಖ ಮಂಡಲಗಳು ಅಶ್ರುಲಿಪ್ತವಾಗಿದ್ದವು)

ದೂತ—(ಕೈಮುಗಿದುಕೊಂಡು) ಮಹಾ ಪ್ರಭೂ, ಶವ ಸಂಸ್ಕಾರಕ್ಕೆ ಸಕಲವೂ ಸಿದ್ಧವಾಗಿದೆ.

(ಹೊರಗಡೆ ಪ್ರಾಂಗಣದಲ್ಲಿ ಸದ್ದು ಗದ್ದಲ ಕೇಳಿ ಬರುವುದು. ಹಿರಣ್ಯಕಶಿಪು ರಾಜಗುರುಗಳೊಂದಿಗೆ ಹೊರಡುವನು. ದೂತರು ಹಿಂಬಾಲಿಸುವರು)

(ಪರದೆಯು ಬೀಳುವುದು)

ದೃಶ್ಯ–೨

(ಮರುಭೂಮಿಯಾದ ಉತ್ತಪ್ತ ಹೃದಯ ಸಮಸ್ತ ಆರ್ದ್ರತೆಯನ್ನು ಒಂದೇ ಬಾರಿಗೆ ಹೀರಿಬಿಡುವಂತೆ ಹಿರಣ್ಯಕಶಿಪುವಿನ ಮಾನಸಿಕ ಸ್ವಾಸ್ಥ್ಯವನ್ನೆಲ್ಲಾ ಹೀರಿಬಿಟ್ಟಿತ್ತು ಸೋದರನ ದುರ್ಮರಣ ಉರುಳುವ ಒಂದೊಂದು ಗಳಿಗೆಯೂ ರೋಷದಗ್ಧ ಚಿತ್ತಕ್ಕೆ ಅಸಹನೆಯ ಕೂರಲುಗನ್ನು ಒಡ್ಡುವುದು; ತಲೆ ಚಿಟ್ಟು ಹಿಡಿಸುವಷ್ಟು ಆಲೋಚನೆಗಳ ಧಾಳಿ; ನಿರಾಸೆಯ ಹಿಂಸೆ; ಹೀಗೆ ನಾನಾ ಕಾರಣಗಳಿಂದ ಬಗೆ ಕದಡಿ ಬಗ್ಗಡವಾಗುತ್ತಲೇ ಇತ್ತು. ರೋಷಬದ್ಧನಾದ ಹಿರಣ್ಯಕಶಿಪು ಬದ್ಧ ವೈರಿಯೂ ಆಗಿ ವಿಷ್ಣುವನ್ನು ಎಲ್ಲಿದ್ದರೂ ಬಿಡದೆ ಪತ್ತೆ ಹಚ್ಚಿ ವರದಿಮಾಡಲು ದಶದಿಕ್ಕುಗಳಲ್ಲೂ ರಾಕ್ಷಸೋತ್ತಮರನ್ನು ಕಟ್ಟುನಿಟ್ಟಾಗಿ ನಿಯಮಿಸಿದ್ದಾನೆ. ರಾಕ್ಷಸರು ರಾಜಾಜ್ಞೆಯನ್ನು ಶಿರಸಾವಹಿಸಿ ತಮ್ಮ ತಮ್ಮ ತಂಡಗಳೊಡನೆ ಹೊರಟು ಭೂಮ್ಯಾಕಾಶಗಳೆರಡರಲ್ಲೂ ಅವ್ಯಾಹತವಾಗಿ ಪರಿಶೋಧನೆಯ ಸುಂಟರಗಾಳಿಯನ್ನು ಬೀಸಿದರು. ಆದರೇನು? ಎಲ್ಲಿಯೂ, ಯಾರಿಗೂ ವಿಷ್ಣುವಿನ ನೆಲೆಯಾಗಲೀ ಸುಳಿವಾಗಲೀ ಪತ್ತೆಯಾಗಲಿಲ್ಲ. ತನ್ನ ಉಗ್ರವಿಷದಿಂದ ತಾನೇ ಉರಿಯುವ ಕಾಳೋಗರದಂತಾಯಿತು ಹಿರಣ್ಯಕಶಿಪುವಿನ ಪರಿಸ್ಥಿತಿ. ಸಭಾಂಗಣದಲ್ಲಿ ಶತಪಥ ಸುತ್ತುತಿದ್ದ ಹಿವಣ್ಯಕಶಿಪು ಛಿನಭಿನ್ನವಾದ ಮಾನಸ ಪಟಲವನ್ನು ಕ್ರೋಢೀಕರಿಸಲು ಪ್ರಯತ್ನಿಸುತ್ತ ನಿರಾಸೆಯ ನಿಟ್ಟುಸಿರು ಬಿಟ್ಟ. ಒಡಲು ಪರಿತಾಪದಿಂದ ಊಳಿಡುತಿತ್ತು ಶೃಗಾಲಗಳ ವಿಕಟ ನಾದವನ್ನೂ ಮೀರಿ. ಕಾಲಿಂದ ದಢನೆ ನೆಲವನ್ನು ಧೀಂಕಿಡುವಂತೆ ಅಪ್ಪಳಿಸಿ....)

ಹಿರಣ್ಯಕಶಿಪು—ಯಾರಲ್ಲಿ?

(ಹೊರಬಾಗಿಲಲ್ಲಿದ್ದ ದೂತನು ಒಳಗಡೆ ಬಂದು ಕೈಮುಗಿದುಕೊಂಡು)

ದೂತ—ಅಪ್ಪಣೆಯಾಗಲಿ ಬುದ್ಧಿ.

ಹಿರಣ್ಯಕಶಿಪು—ಹೋಗು! ಈಗಲೇ ಗುರುಗಳನ್ನು ಇಲ್ಲಿಗೆ ಬರಹೇಳು!

ದೂತ—ಆಯಿತು ಬುದ್ಧಿ.

(ಆವನು ಕೂಡಲೇ ಅಲ್ಲಿಂದ ನಿರ್ಗಮಿಸುವನು)

(ಹಿರಣ್ಯಕಶಿಪು ಗುರುಗಳ ಪ್ರತೀಕ್ಷೆಯಲ್ಲೇ ಹೊತ್ತು ಕಳೆಯುವನು, ಗಳಿಗೆ ಗಳಿಗೆಗಳೂ ದೀರ್ಘಾತಿದೀರ್ಘವಾಗಿ ಉರುಳಿದಂತೆ ಭಾಸವಾಗಿ ಹೃದಯ ಕುಂಡ ಚಿಂತಾವ್ಯಾಕುಲತೆಯಿಂದ ಆಲೋಡಿತವಾಯಿತು. ಮನಸ್ಸು ದಿಕ್ಕೆಟ್ಟು ಬೇಸತ್ತು ಸಿಂಹಾಸನದ ಮೇಲೆ ಸುಮ್ಮನೆ ಕೈಕಟ್ಟಿ ಗುರುಗಳಿಗಾಗಿ ಕಾದು ಕುಳಿತಿರುವಾಗಲೇ ರಾಜಗುರು ಆತುರಾತುರವಾಗಿ ಆಸ್ಥಾನವನ್ನು ಪ್ರವೇಶಿಸುವನು. ಅವನ ಪ್ರಥಮ ನೋಟಕ್ಕೆ ಧಗಧಗಿಸುವ ಅಗ್ನಿಶಿಖೆಯೇ ಮಂಡಿಸಿದಂತಿತ್ತು ಸಿಂಹಾಸನದ ಮೇಲೆ. ರಾಜಗುರು ಕಿಂಚಿತ್ ತಲ್ಲಣಿಸಿದರೂ ನಂತರ ಸುಧಾರಿಸಿಕೊಂಡಂತೆ ತಾನೇ ಮಾತು ತೆಗೆದು....)

ರಾಜಗುರು—ನಾನೇ ಬಂದು ನಿನ್ನನ್ನು ನೋಡುವ ಉದ್ದೇಶ ಹೊಂದಿದ್ದೆ ಅಷ್ಟರಲ್ಲೇ ಕರೆ ಬಂತು. ನಿನ್ನನ್ನು ನೋಡಿದರೆ ತುಂಬ ಅಸಮಾಧಾನವಾದಂತಿದೆ, ಅಷ್ಟೊಂದು ನಿರಾಶೆಯಾದರೂ ಏಕೆ? ಎಲ್ಲಕ್ಕೂ ಕಾಲ ಪಕ್ವವಾಗಲೇಬೇಕು, ಎಂಬುದನ್ನು ನೀನು ಮನಗಾಣು.

ಹಿರಣ್ಯಕಶಿಪು—ತಾಳ್ಮೆ ಎಂಬುದು ಯಾರಿಗೂ ಕಟ್ಟಿಟ್ಟ ಬುತ್ತಿಯಲ್ಲ. ಆಗಲೇ ಎಷ್ಟು ಕಾಲ ವ್ಯಯವಾಯಿತು?

ರಾಜಗುರು—ನಿನಗೆ ಹಿಂದೆಯೇ ಹೇಳಿರುವೆ. ವಿಷ್ಣು ಮಹಾಕಳ್ಳ! ಮಾಯಾವಿ! ಅವನನ್ನು ಹಿಡಿಯಬೇಕೆಂದರೆ ಮೋಸ-ಕುತಂತ್ರಗಳೇ ಸರಿಯಾದ ಆಯುಧ.

ಹಿರಣ್ಯಕಶಿಪು—(ಆಸ್ಥಾನವೇ ಅದರುವಂತೆ ಗುಡುಗಿದ) ಎಲ್ಲಿಯ ಮಾತು? ವಿಷ್ಣು ಕಣ್ಣಿಗೆ ಕಂಡರಷ್ಟೆ, ಎಲ್ಲಾ ಮೋಸ-ಕುತಂತ್ರಗಳ ಬಳಕೆ? ನನಗೆ ನಿಮ್ಮ ಸಲಹೆ ವ್ಯರ್ಥಾಲಾಪದಂತೆ ತೋರುತ್ತೆ!

ರಾಜಗುರು—(ಬೆಚ್ಚಿ) ಮಹಾರಾಜಾ, ಶಾಂತನಾಗು. ದುಡುಕುವುದರಿಂದ ಪ್ರಯೋಜನವಿಲ್ಲ. ದುಡುಕಿದರೆ ನಿನ್ನ ಜೀವಕ್ಕೇ ಅಪಾಯ. ರಾಕ್ಷಸ ಕುಲಕ್ಕೆ ಕಿರೀಟಪ್ರಾಯನಾದ ನಿನ್ನ ಅಗತ್ಯ ಬಹಳವಿದೆ ನಮಗೆ.

ಹಿರಣ್ಯಕಶಿಪು—(ಸ್ವಲ್ಪ ಶಾಂತನಾಗಿ) ಈಗ ವಿಷ್ಣುವನ್ನು ಹಿಡಿಯುವುದಕ್ಕೆ ಏನುಪಾಯ?

ರಾಜಗುರು—ರಾಕ್ಷಸೇಂದ್ರಾ, ಸಮಯ ಸಾಧನೆ ಒಳ್ಳೆಯದು. ವಿಷ್ಣು ಪುಣ್ಯಕ್ಷೇತ್ರಗಳಲ್ಲಿ ಅಡಗಿಕೊಂಡಿರುವ ಸಂಭವವುಂಟು. ಎಲ್ಲಾ ಕಡೆಗಳಲ್ಲಿ ಕಣ್ಣಿನ ಮೇಲೆ ಕಣ್ಣಿಟ್ಟರೆ ಸಿಕ್ಕಿಯಾನು.

ಹಿರಣ್ಯಕಶಿಪು—ಇದುವರೆಗೂ ಸಿಗಲಿಲ್ಲ. ನನಗೀಗ ಬೇಸತ್ತುಹೋಗಿದೆ.

ರಾಜಗುರು—ನೀನು ಅವನ ಅನ್ವೇಷಣೆಯಲ್ಲಿ ತೊಡಗಿದ್ದಿ ಎಂಬುದು ಬಹಳ ಗೋಪ್ಯವಾಗಿರಲಿ. ಅದರ ಸುಳಿವು ಸಿಕ್ಕಿರುವುದರಿಂದ ಅವನು ಬಹಳ ಎಚ್ಚರ ವಹಿಸುತ್ತಾನೆ. ಆದ್ದರಿಂದಲೇ ಅವನು ಅದೃಶ್ಯ ಮತ್ತು ಅಶಕ್ಯ.

ಹಿರಣ್ಯಕಶಿಪು—ನಾನು ಈ ಅಸಹನೀಯ ಪರಿಸ್ಥಿತಿಯನ್ನು ಎದುರಿಸಲಾರೆ. ಕೊನೆಯ ಪಕ್ಷ ಆ ಹಂದಿಯಾದರೂ ದೃಷ್ಟಿಗೆ ಬಿದ್ದಿದ್ದರೆ....?

(ಕಟಕಟನೆ ಹಲ್ಲುಗಳನ್ನು ಕಡಿದು ಕೋಪದ ಬುಗ್ಗೆಯನ್ನು ಸೂಸುವನು)

ರಾಜಗುರು—(ತಿರಸ್ಕಾರದಿಂದ) ಆಗ ಅವನು ಹಂದಿ! ಈಗ ಇನ್ನೇನಾಗಿದ್ದಾನೊ...ಅವನನ್ನು ಹೀಗೇ ಎಂದು ಊಹಿಸುವುದು ಕಷ್ಟ.

(ಸ್ವಲ್ಪ ಹೊತ್ತು ಇಬ್ಬರೂ ಮೌನಗತಿಯಲ್ಲಿ ಯೋಚಿಸುವರು. ಹೊತ್ತು ನಿರಾತಂಕವಾಗಿ ಉರುಳಿಹೋಯಿತು. ಅನಂತರ ದೀರ್ಘವಾದ ಬಿಸಿಯುಸಿರು ಬಿಟ್ಟು ಹಿರಣ್ಯಕಶಿಪು ಒಡಲರೋಷವನ್ನು ಹೊರ ಕಕ್ಕುವನು.)

ಹಿರಣ್ಯಕಶಿಪು—ನಾನೆಷ್ಟು ಪ್ರಯತ್ನಪಟ್ಟೆನೋ ಅಷ್ಟೂ ವ್ಯರ್ಥ ವಾಯಿತು. ಇಷ್ಟೊಂದು ಬೇಸ್ತು ಬೀಳುವೆ ಎಂದು ನಾನು ಭಾವಿಸಿರಲಿಲ್ಲ. ವಿಷ್ಣು-ಆ ಕ್ಷುದ್ರಹಂದಿ ನನ್ನಂತಹ ಲೋಕೇಶ್ವರನೊಡನೆ ಕಣ್ಣುಮುಚ್ಚಾಲೆ ಯಾಡುತ್ತಾನೆಂದರೆ ವಿಶೇಷವೇ ಗುರುಗಳೇ! ಇದಕ್ಕೇನು ಕ್ರಮ ಕೈಕೊಳ್ಳ ಬೇಕೋ ನಾನರಿಯೆ. ಒಂದೊಂದುಗಳಿಗೆಯನ್ನು ಕಳೆಯುವುದು ಸಹ ನನಗೆ ಬಲು ಹಿಂಸ್ರಕಾರಕ.

ರಾಜಗುರು—ಮಹಾರಾಜ, ಅವಸರಿಸಬಾರದು. (ಸ್ವಲ್ಪ ಹೊತ್ತು ಯೋಚಿಸಿ) ಓ....ಹೀಗೊಂದು ಉಪಾಯವಿದೆ. ಕೆಲವೊಮ್ಮೆ ಬ್ರಾಹ್ಮಣರು ನಡೆಸುವ ಯಜ್ಞಯಾಗಾದಿಗಳಲ್ಲಿ ಸಿಗುವ ಸಂಭವವುಂಟು. ಅವರಿಂದ ಹವಿಸ್ಸನ್ನು ಸ್ವೀಕರಿಸುತ್ತಾನೆ ಶ್ರೀವಿಷ್ಣು.

ಹಿರಣ್ಯಕಶಿಪು—ಹಾಗಾದರೆ ಅಲ್ಲೆಲ್ಲ ಕಾವಲಿಡುವೆ.

ರಾಜಗುರು—ಅದು ಲೇಸು. ಆದರೆ....(ಸ್ವಲ್ಪ ಆಲೋಚನಾಸಕ್ತನಾಗಿ ಮಾತನ್ನು ಅಷ್ಟಕ್ಕೆ ತುಂಡುಗಡಿದು ಗಂಭೀರಭಾವ ತಾಳುವನು)

ಹಿರಣ್ಯಕಶಿಪು—ಆದರೆ, ಏನು? ಏಕೆ ಅಷ್ಟಕ್ಕೆ ಸುಮ್ಮನಾದಿರಿ?

ರಾಜಗುರು—ಅವನು ಎಲ್ಲಾ ಯಜ್ಞಯಾಗಾದಿಗಳಲ್ಲಿ ಪ್ರತ್ಯಕ್ಷನಾಗಲಾರ. ಕೆಲವು ಮುಖ್ಯವಾದವುಗಳಲ್ಲಿ ಪ್ರತ್ಯಕ್ಷನಾಗುವ ಸಂಭವವುಂಟು.

ಹಿರಣ್ಯಕಶಿಪು—ಸರಿ, ಅದೇನು? ಇದೇನು? ಎಲ್ಲಾ ಕಡೆಯೂ ಕಣ್ಣಿಟ್ಟರಾಯಿತು. ನನ್ನ ರಕ್ತ ಕುದಿಯುತ್ತಿದೆ. ನಾನೀಗ ತಾಳಿಕೊಳ್ಳುವ ಸ್ಥಿತಿಯಲ್ಲೇ ಇಲ್ಲ. ಅವನನ್ನು ಕೊಂದ ಮೇಲೆಯೇ ನನ್ನ ಮನಸ್ಸಿಗೆ ಪೂರ್ಣ ಶಾಂತಿ ದೊರೆಯಬೇಕಾದರೆ.

ರಾಜಗುರು—ಅಷ್ಟು ಮಾತ್ರವೇನು? ವಿಷ್ಣುವಿನ ವಿನಾಶದಿಂದ ರಾಕ್ಷಸ ಕುಲಕೋಟಿಯ ಉದ್ಧಾರವೇ ಆಗುತ್ತದೆ. ಅದಕ್ಕಾಗಿ ಪಣತೊಟ್ಟಿದ್ದೀಯೆ; ಅದರ ಸಾಧನೆ ನಿನ್ನ ಮೊದಲ ಗುರಿಯಾದರೂ ಮುಖ್ಯವಾಗಿ ಯಾವ ಕ್ರಮ ಕೈಕೊಳ್ಳಬೇಕೋ ಅದನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸು ಕೋಪ—ತಾಪ ಗಳಿಂದ ಯಾವುದೂ ಬಗೆಹರಿಯಲಾರದು.

ಹಿರಣ್ಯಕಶಿಪು—ಏನು ಮಾಡಲಿ ? ನನಗಿದು ಮಾನಸಿಕ ಹಿಂಸೆಯಾಗಿದೆ. ಆ ರಣಹೇಡಿ ಕಣ್ಣಿಗೇ ಬೀಳುವುದಿಲ್ಲವಲ್ಲ ?

(ಮುಖಭಾವದಲ್ಲಿ ತೀವ್ರತರವಾದ ಅಸಮಾಧಾನ ಒಡೆದು ಮೂಡುವುದು)

ರಾಜಗುರು—ಮಹಾರಾಜ, ಸಾವಧಾನ. ಸುಮ್ಮನೆ ತಲೆ ಕೆಡಿಸಿಕೊಳ್ಳುವುದರಿಂದ ಪ್ರಯೋಜನವಿಲ್ಲ. ನಾನು ಆಗಲೇ ಹೇಳಿದಂತೆ ಕಾಲಪಕ್ವವಾಗಲೇಬೇಕು. ಅದಿಲ್ಲದೆ ಯಾವುದೂ ಲಭ್ಯವಿಲ್ಲ.

ಹಿರಣ್ಯಕಶಿಪು—ನಿಮ್ಮದು ಇಬ್ಬಗೆಯ ನೀತಿ. ಹಾಗೆನ್ನುವವರೂ ನೀವೇ. ಹೀಗೆನ್ನುವವರೂ ನೀವೇ.

ರಾಜಗುರು—ಇನ್ನೇನು ಮಾಡಲಿ ? ನಿನ್ನ ರಾಜತ್ವ ಬಹುಕಾಲ ಉಳಿಯಬೇಕು. ನಿನ್ನ ಕ್ಷೇಮ ನಮಗೆ ಸೇರಿದ್ದು. ನಿನ್ನ ಪ್ರಚಂಡ ಹುರುಪು ದುರ್ವಿಧಿಯ ಪಾಶಕ್ಕೆ ಸಿಕ್ಕಬಾರದು.

ಹಿರಣ್ಯಕಶಿಪು—ಗುರುಗಳೇ, ಇದುವರೆಗೆ ರಾಕ್ಷಸರು ವಿಷ್ಣುವನ್ನು ಶೋಧಿಸುವುದರಲ್ಲಿ ನಿಷ್ಫಲರಾಗಿದ್ದಾರೆ. ಇನ್ನು ನಾನೇ ವೇಷ ಮರೆಸಿಕೊಂಡು ವಿಷ್ಣುವನ್ನು ಅರಸುವೆ.

ರಾಜಗುರು—ಆಗಬಹುದು ಆದರೆ ಬಹಳ ಎಚ್ಚರದಿಂದಿರಬೇಕು.

(ಹಿರಣ್ಯಕಶಿಪು ಮಾತಾಡಲಿಲ್ಲ. 'ಹೌದು' ಎಂಬಂತೆ ತಲೆದೂಗುವನು)

ರಾಜಗುರು—ಮಹಾರಾಜ, ಅಪ್ಪಣೆಯಾದರೆ ನಾನಿನ್ನು ಹೊರಡುವೆ.

ಹಿರಣ್ಯಕಶಿಪು—ಆಗಬಹುದು.

(ರಾಜಗುರು ಅಲ್ಲಿಂದ ನಿರ್ಗಮಿಸಿದ ಮೇಲೆ ಹಿರಣ್ಯಕಶಿಪು ಅಂತಃಪುರಕ್ಕೆ ಹೋಗುತ್ತಾನೆ. ಅವನ ಪ್ರತೀಕ್ಷೆಯಲ್ಲೇ ಇದ್ದ ಮಡದಿಯ ಮುಖಬಿಂಬ ಅರಳಿ ಹೂವಾಯಿತು. ಆದರೂ ಅವನ ಗಂಭೀರ ಮುಖಭಾವವನ್ನು ನೋಡಿ ಸ್ವಲ್ಪ ಹಿಂಜರಿದಂತೆ....)

ರಾಣಿ—ಪ್ರಭುಗಳು ಆವುದೋ ತುರ್ತುಕಾರ್ಯ ಕೈಕೊಂಡಂತಿದೆ ?

ಹಿರಣ್ಯಕಶಿಪು—ಹೌದು, ಅರ್ಧಾಂಗಿ.

ರಾಣಿ—ಏನೆಂಬುದನ್ನು ನಾನು ತಿಳಿಯಬಹುದೆ?

ಹಿರಣ್ಯಕಶಿಪು—ನನ್ನ ಕಡುವೈರಿ ವಿಷ್ಣುವನ್ನು ಧ್ವಂಸಗೊಳಿಸದೆ ಬೇರಾವ ಕೆಲಸವನ್ನು ನಾನು ಕೈಕೊಳ್ಳುವಂತಿಲ್ಲ. ಅವನನ್ನು ಮುಗಿಸುವ ಕೆಲಸ ಮೊದಲು.

(ಪರಮ ಸಾಧ್ವೀಮಣಿಯಾದ ಸತಿಯ ಒಡಲು ಅತ್ಯಂತ ಪರಿತಾಪದಿಂದ ತುಂಬಿಹೋಯಿತು. ಆದರೂ ಅದನ್ನು ತೋರಗೊಡದೆ ಸಾವಧಾನದಿಂದ...)

ರಾಣಿ—ಅದಕ್ಕಾಗಿ ಈಗಲೇ ಏಕಷ್ಟು ಕಾತರ? ಸ್ವಲ್ಪ ನಿಧಾನಿಸಿ. ಏನಾಗಬೇಕೋ ಅದು ಆಗಿಯೇ ತೀರುತ್ತೆ.

ಹಿರಣ್ಯಕಶಿಪು—(ಅಟ್ಟಹಾಸದಿಂದ) ನಿನ್ನದು ಸ್ತ್ರೀ ಸುಲಭ ಭಾವನೆ! ವಿಷ್ಣು ಅಷ್ಟು ಸಾಮಾನ್ಯನಲ್ಲ ತಿಳಿಯಿತೆ? ಅವನ ಪತ್ತೆಗಾಗಿ ಇಡೀ ರಾಕ್ಷಸದಳ ವನ್ನು ನೇಮಿಸಿದರೂ ಇದುವರೆಗೆ ಅವನ ಸುಳಿವು ಹತ್ತಲಿಲ್ಲ. ಇನ್ನು ಅವನ ಅನ್ವೇಶಣೆಗೆ ನಾನೇ ಹೊರಡಬೇಕು!

ರಾಣಿ—ನೀವು ಹೊರಡುವುದೆಂದರೆ ರಾಜ್ಯಭಾರವನ್ನು ಹೊರುವವರಾರು?

ಹಿರಣ್ಯಕಶಿಪು—ಅದರ ಯೋಚನೆಯೇಕೆ? ಅದು ಹೇಗೂ ನಡೆಯುತ್ತೆ.

ರಾಣಿ—ವಿಷ್ಣುವನ್ನು ಕೆಣಕುವುದೆಂದರೆ ಸಾಮಾನ್ಯವೇ? ನಿಮ್ಮ ಮಾತು ಕೇಳಿ ನನ್ನ ಎದೆ ನಡುಗುತ್ತದೆ.

(ನಲ್ನುಡಿ ತೀವ್ರ ಸಂತಾಪದಿಂದ ಕೂಡಿ ಎದೆಯಾಳದಿಂದ ತಿಳಿನೀರಿನ ಚಿಲುಮೆಯಂತೆ ಹರಿದು ಬಂತು. ಸಹೃದಯಳಾದ ಅವಳಿಗೆ ಅಂದಿಂದಿಗೂ ದೇವ ಲೋಕದ ಒಡೆಯನಾದ ಶ್ರೀವಿಷ್ಣುವೆಂದರೆ ಅಪಾರವಾದ ಭಯ-ಭಕ್ತಿ. ಆದರೇನು? ಅವನ್ನು ರಾಕ್ಷಸರಾಜನಾದ ಪತಿಯ ಮುಂದೆ ಕಿಂಚಿತ್ ಪ್ರದರ್ಶಿಸುವಂತಿಲ್ಲ. ತನ್ನ ಆಶೋತ್ತರವನ್ನೆಲ್ಲ ತನ್ನಲ್ಲಿಯೇ ಹುಗಿದಿಟ್ಟುಕೊಂಡು ಪತಿಯ ಮನೋಭಾವಕ್ಕೆ ಅನುಗುಣವಾಗಿ ನಡೆಯುವ ಪತಿವ್ರತಾಧರ್ಮ ಅವಳನ್ನು ಕಾಪಾಡಿತ್ತು. ಮೇಲಾಗಿ, ಶ್ರೀವಿಷ್ಣುವನ್ನು ಕೆಣಕಹೋಗಿ ಹಿರಣ್ಯಾಕ್ಷನಂತೆ ತನ್ನ ಪತಿಯು ಎಲ್ಲಿ

ಸಂಕಷ್ಟಕ್ಕೆ ಸಿಗುವನೋ ಎಂಬ ಸ್ತ್ರೀಸಹಜವಾದ ಅಳುಕು ಬೇರೆ. ಕ್ಷಣ ಮಾತ್ರ ದಲ್ಲಿ ಮುಖಬಿಂಬ ಪರಿಮ್ಲಾನವಾಗಿ ನೋವಿನ ಛಾಯೆ ಮಿಂಚುಗಣ್ಣುಗಳಲ್ಲಿ ಇಣುಕಾಡಿತು)

ಹಿರಣ್ಯಕಶಿಪು—(ಶೀಘ್ರಾತುರತೆಯಿಂದ) ಈಗಲೇ ನನ್ನ ವೇಶಭೂಷಣ ಗಳನ್ನು ಬದಲಿಸಬೇಕು. ನನ್ನ ಸಾಮಾನ್ಯ ಉಡುಪುಗಳನ್ನು ತಾ.

(ಅವನು ರಾಜಯೋಗ್ಯವಾದ ವೇಷ ಭೂಷಣಗಳನ್ನು ಕಳಚಿ ಹಾಕುವನು. ಅಷ್ಟರಲ್ಲಿ ಅವಳು ಶೀರ ಸಾಮಾನ್ಯವಾದ ಉಡುಪನ್ನು ತಂದು ಅವನಿಗೆ ತೊಟ್ಟು ಕೊಳ್ಳಲು ಸಹಾಯಹಸ್ತ ನೀಡುವಳು. ಅವನು ಮರುಕ್ಷಣ ದಲ್ಲಿಯೇ ಹೊರಡಲು ಸಿದ್ಧನಾಗುವನು)

ರಾಣಿ—ಇಷ್ಟೊಂದು ಪ್ರಬಲವಾದ ರಾಕ್ಷಸ ಸೈನ್ಯವಿರುವಾಗ ನೀವೇ ಸ್ವತಃ ಅನ್ವೇಶಣಾಕಾರ್ಯ ಕೈಕೊಳ್ಳುವುದು ಶೀರ ಅನಾವಶ್ಯಕ ಶ್ರಮ. ಇನ್ನೂ ಕೆಲವು ದಿವಸ ಕಾದು ನೋಡಬಹುದಾಗಿತ್ತು.

ಹಿರಣ್ಯಕಶಿಪು—ಸರಿ....ಕಾದು ನೋಡುವುದೆಂದರೆ ಹಿರಣ್ಯಾಕ್ಷನಿಗಾದ ಗತಿಯೇ ನನಗೂ, ತಿಳಿದಿರು!

ರಾಣಿ—(ಅತೀವ ಸಂಕಟದಿಂದ) ನೀವು ಹೀಗೆ ಏಕಾಂಗಿಯಾಗಿ ಪಯಣಿ ಸುವುದು ಮತ್ತೂ ಅಪಾಯವಲ್ಲವೇ? ಸೈನ್ಯವನ್ನೇಕೆ ತೆಗೆದುಕೊಂಡು ಹೋಗ ಬಾರದು....?

ಹಿರಣ್ಯಕಶಿಪು—ಈವರೆಗೆ ನಾನು ನಡೆಸಿದ್ದೇನು? ಅದರಿಂದೇನಾದರೂ ಪ್ರಯೋಜನವಾಯಿತೇ?

ರಾಣಿ—ನೀವು ಮುಂಗೋಪಿಗಳು. ಏಕಾಂಗಿಯಾಗಿ ದುಡುಕಿದರೆ ಕಷ್ಟ. ನನಗದು ತುಂಬ ಭಯವನ್ನುಂಟುಮಾಡಿದೆ.

ಹಿರಣ್ಯಕಶಿಪು—(ವಿಕಟಾಟ್ಟಹಾಸದಿಂದ ನಕ್ಕು ತೋಳುಗಳನ್ನು ಚಪ್ಪರಿಸಿಕೊಳ್ಳುತ್ತ) ನನ್ನನ್ನು ಏನೆಂದು ನೀನು ಪರಿಭಾವಿಸಿದ್ದಿ? ನೂರು ಮಂದಿ ವಿಷ್ಣುಗಳು ಮೈಗೂಡಿಕೊಂಡರೂ ಒಂದೇ ಬಾರಿಗೆ ಮುಗಿಸಿಬಿಡುವೆ! ವೀರ ಪತ್ನಿಯಾದ ನಿನಗೆ ಆ ಭಯವಾದರೂ ಏಕೆ?

ರಾಣಿ—ಸ್ವಾಮಿ, ನೀವು ವೀರರೆಂಬುದನ್ನು ಬಲ್ಲೆ. ಆದರೆ ವಿಷ್ಣುವಿನೊಂದಿಗೆ ಹೋರಾಟ ಸುಲಭವಲ್ಲ. ಅದನ್ನಿಷ್ಟು ಖಂಡಿತ ವಿಚಾರಮಾಡಿರಿ....

ಹಿರಣ್ಯಕಶಿಪು—(ಮುಂದೆ ಮಾತಾಡಗೊಡಿಸದೆ ತಿರಸ್ಕಾರದಿಂದ) ಸಾಕು, ಸುಮ್ಮನಿರು ! ಬಹಳ ಚೆನ್ನಾಗಿದೆ. ಹಹಹ್ಹ !

(ಬಿರುಗಾಳಿಯಂತೆ ಅಲ್ಲಿಂದ ಹೊರಟೇಬಿಟ್ಟ ಹಿರಣ್ಯಕಶಿಪು. ದಡದಡನೆ ಮೆಟ್ಟಲಿಳಿದ ಬಗೆ ಎದೆಯನ್ನು ತಲ್ಲಣಿಸುವಂತಿತ್ತು. ಅವನು ಕಣ್ಮರೆಯಾಗುವವರೆಗೂ ನಿಟ್ಟಿಸಿ ನೋಡುತ್ತಿದ್ದ ರಾಣಿಯು ಅತ್ಯಂತ ಖಿನ್ನಮುಖಿಯಾಗಿ ತಲೆಬಾಗುವಳು, ವಿಷಾದವೇ ಮೈಗೂಡಿ ಬಂದಂತೆ)

ಹಿರಣ್ಯಕಶಿಪು—(ಹೆಬ್ಬಾಗಿಲು ದಾಟುವ ಮುನ್ನ ಪ್ರಹರಿಯನ್ನು ಕುರಿತು) ಪ್ರಹರೀ, ಇಲ್ಲಿ ಯಾವ ಗಳಿಗೆಯಲ್ಲೇ ಆಗಲಿ ವಿಷ್ಣುವಿನ ಸುಳಿವು ಕಂಡು ಬಂದರೆ ತಕ್ಷಣ ನನಗೆ ವರದಿ ಮಾಡಬೇಕು ಮತ್ತು ದಳವಾಯಿಗೂ ಸಹ.

ಪ್ರಹರಿ—ಆಗಲಿ, ಮಹಾಪ್ರಭೋ !

ಹಿರಣ್ಯಕಶಿಪು—ಎಚ್ಚರಿಕೆ ! ನಾನಿಲ್ಲದಾಗ ಶತ್ರುಗಳು ಒಳನುಗ್ಗಿಯಾರು!

ಪ್ರಹರಿ—ಅಪ್ಪಣೆ ಒಡೆಯಾ !

(ಒಡನೆ ಪ್ರಹರಿಯು ಭಯಭಕ್ತಿಯಿಂದ ಮೈಬಾಗಿ ಕರದ್ವಯಗಳನ್ನು ಜೋಡಿಸಿ ಬೀಳ್ಕೊಡುವನು. ಒಡೆಯನ ನಾನಾ ವೇಷಭೂಷಣಗಳು ಹೊಸದೇನೂ ಅಲ್ಲವಾದ್ದರಿಂದ ಇಲ್ಲಿ ಉಲ್ಲೇಖಿಸಬಹುದಾದಂತಹ ಯಾವ ವಿಶೇಷ ಭಾವನೆಯೂ ಅವನಿಗೆ ಮೂಡಲಿಲ್ಲ ಆಗಿನ ಸಂದರ್ಭದಲ್ಲಿ. ಪ್ರಭು ಕಣ್ಮರೆಯಾಗುವವರೆಗೂ ಸುಮ್ಮನೆ ನಿಶ್ಶೇಷಭಾವನೆಯಿಂದ ನೋಡಿತು ನೋಟ)

ಪ್ರಹರಿ—(ಸ್ವಗತ) ರಾಕ್ಷಸ ಸೈನ್ಯ ಅದೇನು ಮಣ್ಣು ಮುಕ್ಕುತ್ತಿದೆಯೋ ಏನೋ. ವೀರಾಧಿವೀರರಿದ್ದು, ಪೂರ್ಣ ಅನುಭವಿಗಳಿದ್ದು ವಿಷ್ಣುವನ್ನು ಅರಸಲು ಸ್ವತಃ ಹೊರಡಬೇಕಾಯಿತು ಒಡೆಯ. ಹಿರಣ್ಯಾಕ್ಷನಂಥ ತಮ್ಮನನ್ನು ಕಳೆದುಕೊಂಡ ಹೊಟ್ಟೆಯುರಿ ಸಾಮಾನ್ಯಕ್ಕೆ ಹಿಂಗುವುದುಂಟೆ? ವಿಷ್ಣುವಿನ ಕುಲ ನಾಶ

ವಾಗದ ಹೊರತು ಪ್ರಭುವಿಗೆ ನೆಮ್ಮದಿ ಬರುವುದಿಲ್ಲ. ಅವನು ಹಠ ತೊಟ್ಟವನೇ
ಸಾಧಿಸದೆ ಬಿಡ ಎಂಬುದನ್ನರಿತೇ ಕಳ್ಳವಿಷ್ಣು ತಲೆ ಮರೆಸಿಕೊಂಡಿದ್ದಾನೆ. ಅಂತು
ಇನ್ನೆಷ್ಟು ಕಾಲವೋ ಈ ಹಗರಣ ? ಒಮ್ಮೆ ಅವನು ಸಿಕ್ಕಿದ್ದರೆ ಶತ್ರು ಎಂಬ
ಹೆಸರೇ ಅಳಿಸಿ ರಾಕ್ಷಸರು ನೆಮ್ಮದಿಯಿಂದ ಬಾಳುತ್ತಿದ್ದರು. ಪ್ರಭುಗಳಿಗೂ
ವಿಶ್ರಾಂತಿ ದೊರೆಯುತಿತ್ತು. ಈಗ ಹಗಲಿರುಳೂ ಕಣ್ಣಿನಮೇಲೆ ಕಣ್ಣಿಡ
ಬೇಕಾದ ಪರಿಸ್ಥಿತಿ. ಇನ್ನು ರಾಜ್ಯಕೋಶಗಳ ಗತಿಯೇನು ?

(ಅದೇ ವೇಳೆಗೆ ಇನ್ನೊಬ್ಬ ಪ್ರಹರಿ ಪ್ರವೇಶಿಸುವನು)

ಎರಡನೆ ಪ್ರಹರಿ—ಏನಯ್ಯಾ, ನಿನ್ನೊಳಗೇ ಏನೇನೋ ವಿಚಾರ
ಸಂಕೀರ್ಣ ನಡೆಸಿರುವೆ ?

ಮೊದಲನೆ ಪ್ರಹರಿ—ನೀನೇ ಸುಲಭವಾಗಿ ಊಹಿಸಬಹುದು. ಇಂದಿನ
ಕಠಿಣ ಪರಿಸ್ಥಿತಿ–ಪ್ರಭುಗಳ ಅಲೆದಾಟ ಇವನ್ನು ಬಿಟ್ಟರೆ ಇನ್ನೇನಿದೆ ಹೇಳು ?

ಎರಡನೆ ಪ್ರಹರಿ—ಓಹೋಹೋ ! ಪರವಾಗಿಲ್ಲ. ದೊಡ್ಡ ವಿಚಾರ ಬ್ರಹ್ಮ
ನಾಗಿದ್ದಿ ? ನೀನು ಯಾವಾಗ ಇಷ್ಟು ಬುದ್ಧಿವಂತನಾದದ್ದು !

(ಇಬ್ಬರೂ ಗಹಗಹಿಸಿ ನಗುವರು)

(ಹಿರಣ್ಯಕಶಿಪುವಿನ ಮಹಾ ಕಾರ್ಯಸಾಧನೆ ಏಕತ್ರ ನಡೆಯತೊಡಗಿತು
ಅನುಮಾನ ಕಂಡೆಡೆಗೆಲ್ಲಾ ಧಾಳಿ ಇಡುವುದೇ ಅವನ ದಿನಚರಿ. ಭಗವದ್ಭಕ್ತರು
ಅರವಟ್ಟಿಗೆ ಇಟ್ಟಿರುವೆಡೆಗಳಲ್ಲಿ, ಯಜ್ಞ ಯಾಗಾದಿಗಳು ನಡೆಯುವ ತಾಣದಲ್ಲಿ
ಕಣ್ಣಿನಮೇಲೆ ಕಣ್ಣಿಡುವನು. ನಾಲ್ಕು ಮಂದಿ ಕೂಡಿದೆಡೆ ಸಂಭಾಷಣೆಯನ್ನು
ಆಲೈಸುವನು. ಎಲ್ಲಾದರೂ, ಯಾರ ಬಾಯಿಂದಲಾದರೂ ವಿಷ್ಣುವಿನ ವಿಚಾರ
ತಿಳಿದು ಬಂದೀತೇ ಎಂಬ ಆಶಯದಿಂದ. ಆದರೆ ಅವನಿಗೆ ಎಲ್ಲೆಲ್ಲಿಯೂ
ಕಾದಿದ್ದುದು ನಿರಾಸೆಯೇ, ಅಲೆದಲೆದು ಬೇಸತ್ತರೂ ಅವನು ಹಿಂಜರಿಯಲಿಲ್ಲ
ಮಾತ್ರ.

ಒಂದುಕಡೆ ಯಾವುದೋ ಯಾಗವನ್ನು ನಡೆಸಲು ಪುರೋಹಿತರನ್ನು
ಮುಂದಿಟ್ಟುಕೊಂಡು ಬೃಹದ್ ಸಂಖ್ಯೆಯಲ್ಲಿ ಭಕ್ತರು ಕಲೆತಿದ್ದಾರೆ. ಯಾಗವನ್ನು

ನಡೆಸುವ ವಿಪ್ರವರ್ಯರ ಮಂತ್ರೋಚ್ಚಾರಣೆಯಲ್ಲಿ ಶ್ರೀ ವಿಷ್ಣುವಿನ ನಾಮಸ್ಮರಣೆ ಭಕ್ತಿಪೂರ್ವಕವಾಗಿ ಪದೇ ಪದೇ ಕೇಳಿಬರುವುದು. ಧ್ಯಾನಮುಗ್ಧರಾಗಿ ಮೈಮರೆತ ಮಂದಿಯನ್ನು ನೋಡಿದರೆ ಕಾಲಮಾನವೇ ಮಂತ್ರಮುಗ್ಧವಾದಂತೆ ಕಂಡು ಬರುತ್ತದೆ. ಅದೇ ಸಮಯಕ್ಕೆ ಅಲ್ಲಿಗೆ ಬಂದ ಹಿರಣ್ಯಕಶಿಪು ಒಂದು ಗಳಿಗೆ ಒಡಲಕಿಚ್ಚನ್ನು ಪ್ರಯತ್ನಪೂರ್ವಕವಾಗಿ ಅದುಮಿ ಸುಮ್ಮನೆ ನಿಲ್ಲುವನು. ಅಲ್ಲಿ ಎಷ್ಟು ಹೊತ್ತು ಕಾದು ನಿಂತರೂ ವಿಷ್ಣು ದೃಷ್ಟಿಗೆ ಬೀಳಲಿಲ್ಲ. ಆದರೆ, ಅಲ್ಲಿ ಕದ್ದಡಗಿರಬಹುದೆಂಬ ಅನುಮಾನ ಮಾತ್ರ ದೃಢವಾಗಿ ಮೂಡಿತು. ತರುವಾಯ ಅವನು ಆ ಯಾಜ್ಞಿಕನ ಮುಂದೆ ಹೋಗಿ ನಿಲ್ಲುತ್ತಾನೆ)

ಹಿರಣ್ಯಕಶಿಪು—ಇಲ್ಲಿ ನೀವೇನು ಮಾಡುತ್ತಿರುವಿರಿ?

(ಯಾಜ್ಞಿಕ ಅವನನ್ನು ಕುತೂಹಲಭರಿತ ದೃಷ್ಟಿಯಿಂದ ನೋಡುವನು. ಅವನ ಪ್ರಶ್ನೆ ವಿಚಿತ್ರವಾಗಿ ತೋರಿದರೂ ಅನುಮಾನವೇನೂ ಮೂಡಲಿಲ್ಲ)

ಯಾಜ್ಞಿಕ—ನಾವು ಯಾಗ ನಡೆಸುತ್ತಿದ್ದೇವೆ.

(ನುಡಿ ಸಮಾಧಾನದಿಂದ ಹೊರಬಿತ್ತು)

ಹಿರಣ್ಯಕಶಿಪು—ಏತಕ್ಕಾಗಿ?

ಯಾಜ್ಞಿಕ—ಲೋಕ ಕಲ್ಯಾಣಕ್ಕಾಗಿ.

ಹಿರಣ್ಯಕಶಿಪು—ನೀವು ಯಾರನ್ನು ಕುರಿತು ಆರಾಧಿಸುತ್ತಿದ್ದೀರಿ?

(ಉತ್ತರವನ್ನು ಅತ್ಯಂತ ಆಸಕ್ತಿಯಿಂದ ನಿರೀಕ್ಷಿಸುವನು)

ಯಾಜ್ಞಿಕ—ಶ್ರೀ ಮಹಾ ವಿಷ್ಣುವನ್ನು ಕುರಿತು.

ಹಿರಣ್ಯಕಶಿಪು—ವಿಷ್ಣು ಇಲ್ಲಿದ್ದಾನೆಯೇ?

(ಆ ಪ್ರಶ್ನೆ ಇನ್ನಷ್ಟು ಆಶ್ಚರ್ಯ ಮೂಡಿಸಿತು. ಆದರೂ, ಸಹಜಭಾವದಿಂದ....)

ಯಾಜ್ಞಿಕ—ಇದ್ದಾನೆ.

ಹಿರಣ್ಯಕಶಿಪು—ಎಲ್ಲಿದ್ದಾನೆ?

ಯಾಜ್ಞಿಕ—ಎಲ್ಲಿದ್ದಾನೆ ಎಂದರೆ ತೋರುವುದು ಕಷ್ಟ; ಇಲ್ಲ ಅಂಬೋಣವೇ ತಪ್ಪಾಗುತ್ತದೆ.

ಹಿರಣ್ಯಕಶಿಪು—ಅವನು ನಿಮ್ಮ ಕಣ್ಣಿಗೆ ಕಾಣಸಿಗುವನೇ?

ಯಾಜ್ಞಿಕ—ನಿನ್ನ ಪ್ರಶ್ನೆ ಬಹಳ ವಿಚಿತ್ರವಾಗಿದೆ.

ಹಿರಣ್ಯಕಶಿಪು—ಅಂದರೆ.... ಅವನಿರುವಿಗೆ ಗುರುತಾದರೂ ಏನು?

ಯಾಜ್ಞಿಕ—(ಸ್ವಲ್ಪ ಯೋಚಿಸಿ ಯಜ್ಞವೇದಿಕೆಯ ಕಡೆಗೆ ಬೆರಳುತೋರಿ) ಈ ಯಜ್ಞಕುಂಡವನ್ನು ನೀನು ನೋಡುತ್ತಿರವೆಯಷ್ಟೆ?

ಹಿರಣ್ಯಕಶಿಪು—ಹೌದು ನೋಡುತ್ತಿವೆ.

ಯಾಜ್ಞಿಕ—ನಿನಗೆ ಅದರಲ್ಲಿ ಏನಾದರೂ ವಿಶೇಷ ಕಾಣಿಸುತ್ತದೆಯೋ?

ಹಿರಣ್ಯಕಶಿಪು—(ಉದಾಸೀನದಿಂದ) ಅದು ಬೆಂಕಿಯಷ್ಟೆ? ಅದರಲ್ಲೇನಿದೆ ವಿಶೇಷ?

ಯಾಜ್ಞಿಕ—ಆ ಉಜ್ವಲವಾದ ಹೊಳಪು....?

ಹಿರಣ್ಯಕಶಿಪು—ಅದೂ ಸಹ ಸರ್ವೇಸಾಮಾನ್ಯ. ಅಗ್ನಿ ಜ್ವಲಿಸಿಯೇ ತೀರುತ್ತೆ. ಜ್ವಲಿಸುವುದು ಅದರ ಗುಣ.

ಯಾಜ್ಞಿಕ—ಅದರೂ ಯಜ್ಞ ಕುಂಡದಲ್ಲಿ ಕಾಣಿಸುವ ಕಳೆಯೇ ಬೇರೆ. ಅದನ್ನು ಗುರುತಿಸಿದಲ್ಲಿ ಯಾರಾದರೂ ವಿಷ್ಣುವನ್ನು ಕಾಣಬಹುದು.

ಹಿರಣ್ಯಕಶಿಪು—ಹಾಗಾದರೆ ವಿಷ್ಣು ಇರುವುದು ಖಚಿತ?

ಯಾಜ್ಞಿಕ—ಹೌದಪ್ಪಾ, ಅದರಲ್ಲಿ ಅನುಮಾನವೇಕೆ?

ಹಿರಣ್ಯಕಶಿಪು—ಸರಿ; ಇಲ್ಲಿಯೇ ಅವನನ್ನು ಧ್ವಂಶಗೊಳಿಸುವೆ!

(ಅಬ್ಬರಿಸಿ ನಿಜರೂಪ ತಾಳಿದ ಹಿರಣ್ಯಕಶಿಪು ಚಂಗನೆ ಯಜ್ಞವೇದಿಕೆಯನ್ನೇರಿ ತುಳಿದು ನಾಶಗೊಳಿಸಿ, ಪೂಜಾಸಾಮುಗ್ರಿಗಳನ್ನು ಚೆಲ್ಲಿ ಈಡಾಡಿ ಎಲ್ಲವನ್ನೂ ಧ್ವಂಶಗೊಳಿಸಿ, ಯಾಜ್ಞಿಕರನ್ನೂ ವಿಪ್ರರನ್ನೂ ಹೊಡೆದೋಡಿಸಿ ಕೈಗೆ

ಸಿಕ್ಕಿದವರನ್ನು ಕೊಂದು ಯಜ್ಞಕುಂಡಕ್ಕೆ ಒಗೆದು ಯಜ್ಞವಾಟದಲ್ಲಿ ಒಂದು ಸಾಮುಗ್ರಿಯನ್ನೂ ಬಿಡದಂತೆ ನಿರ್ನಾಮಗೊಳಿಸುವನು! ಅನೇಕರು ಪ್ರಾಣ ವುಳಿದರೆ ಸಾಕೆಂದು ಎದ್ದು ಬಿದ್ದು ಓಡಿಹೋದರು.

ಹಿರಣ್ಯಕಶಿಪು ವಿಷ್ಣುವನ್ನು ಕೊಂದ ಹೆಮ್ಮೆಯಿಂದ ಮುಂದಕ್ಕೆ ಹೊರಡುತ್ತಾನೆ. ಅನಂತರ ನಡೆದ ಇಂತಹ ಘಟನೆಗಳಿಗೆ ಲೆಕ್ಕವೇ ಇಲ್ಲ. ಅವನ ಕೋಪ ತಾಪಕ್ಕೆ ಸಿಕ್ಕಿ ಭಗವದ್ಭಕ್ತರು ಬೆದರಿ ತಲ್ಲಣಿಸಿ ಹೋದರು. ಅವನಿಗಾದರೋ ವಿಷ್ಣುವನ್ನು ಗೆದ್ದನೆಂಬ ಗರ್ವ-ಹೆಮ್ಮೆ! ಆದರೂ ಅವನಲ್ಲಿ ಒಂದು ಅನುಮಾನ ಉಳಿದಿತ್ತು. ಅವನು ಎಷ್ಟೆಷ್ಟು ಪುಣ್ಯಕ್ಷೇತ್ರಗಳ ಮೇಲೆ ಧಾಳಿ ಮಾಡಿದನೋ ಅಲ್ಲೆಲ್ಲಾ ಕೈಗೆ ಸಿಕ್ಕಿ ಪ್ರಾಣ ಕಳೆದುಕೊಂಡವರು ಬಡಜನರೇ ಹೊರತು ವಿಷ್ಣುವಲ್ಲ. ಅವನು ಕೈಗೆ ಸಿಗುವುದಿರಲಿ, ಕಣ್ಣಿಗೂ ಸಹ ಕಾಣ ಸಿಗಲಿಲ್ಲ. ಅಂದಮೇಲೆ ಅದನ್ನು ಖಚಿತಪಡಿಸಿಕೊಳ್ಳುವ ಅವಶ್ಯಕತೆ ತೋರಿತು. ವೇಶ ಮರೆಸಿಕೊಂಡು ಒಬ್ಬ ಬಡಗಿಯಲ್ಲಿಗೆ ಹೋಗುವನು)

ಹಿರಣ್ಯಕಶಿಪು—ಎಲೈ ಬಡಗಿ, ನೀನು ಈಚೆಗೆ ವಿಷ್ಣುವನ್ನು ಎಲ್ಲಿಯಾದರೂ ನೋಡಿದ್ದುಂಟೆ?

(ಬಡಗಿಯು ಅತ್ಯಂತ ಅನುಮಾನ ತುಂಬಿದ ದೃಷ್ಟಿಯಿಂದ ಅವನನ್ನು ನೋಡುತ್ತಾನೆ. ಸ್ವಲ್ಪಹೊತ್ತು ಏನು ಹೇಳಲೂ ತೋರಲಿಲ್ಲ. ಹಿರಣ್ಯಕಶಿಪು ಎಸಗಿದ ವಿಷ್ಣುವಿನ ಮೇಲಿನ ಧಾಳಿ ಕಣ್ಮುಂದೆ ಸುಳಿದಳಿಯುತ್ತದೆ)

ಹಿರಣ್ಯಕಶಿಪು—ಅಯ್ಯಾ ನಿನ್ನನ್ನೆ ಕೇಳಿದ್ದು? ಅರ್ಥವಾಗಲಿಲ್ಲವೇ?

ಬಡಗಿ—(ಸ್ವಗತ)ಇವನನ್ನು ಈಗಲೇ ನಿವಾರಿಸದಿದ್ದಲ್ಲಿ ನನಗೇ ಅಪಾಯು. (ಪ್ರಕಾಶ) ಅವನನ್ನು ಈಗಷ್ಟೇ ನೋಡಿದೆನಲ್ಲಾ;ಅದೋ ಆ ದಿಕ್ಕಿನಲ್ಲಿ ಹೋದ.

ಹಿರಣ್ಯಕಶಿಪು—ಹೇಗೆ ಹೋದ? ನಡೆದುಕೊಂಡೋ ಅಥವಾ ...?

ಬಡಗಿ—ನಡೆದುಕೊಂಡೇ ಹೋದ. ಈಗಲೇಹೋದರೆ ಸಿಕ್ಕಿಯಾನು.

(ಹಿರಣ್ಯಕಶಿಪುವಿಗೆ ಸ್ವಲ್ಪ ಸಂಶಯ ಮೂಡಿದರೂ ಇನ್ನಷ್ಟು ಯೋಚಿ

ಸುವ ಸಹನೆ ಮಾತ್ರ ಉಳಿಯಲಿಲ್ಲ. ಅವನು ತೋರಿದ ದಿಕ್ಕನ್ನು ಹಿಡಿದು ಹುಡುಕುತ್ತ ಹೋಗುವನು. ಅಲ್ಲಿ, ಆ ದಿಶೆಯಲ್ಲಿ ಎಷ್ಟು ಹುಡುಕಿದರೂ ವಿಷ್ಣು ದೃಗ್ಗೋಚರಿಸಲಿಲ್ಲ)

ಹಿರಣ್ಯಕಶಿಪು—(ವಿಷ್ಣುವನ್ನು ಕುರಿತು) ಎಲಾ ದುಷ್ಟ ಮಾಯಾವಿ! ನಿನ್ನನ್ನು ನಾಶಗೊಳಿಸಿದೆ ಎಂದೇ ಪರಿಭಾವಿಸಿದ್ದೆ! ನೀನು ಇನ್ನೂ ಬದುಕಿರುವೆಯಾ? ಆಗಲಿ, ನೋಡುವೆ! ಹೀಗೆ ಎಷ್ಟು ಕಾಲ ಅಡಗಿಕೊಡಿರಲು ಸಾಧ್ಯ? ತಿಳಿದಿರು, ಎಂದಾದರೂ ನಿನಗೆ ನನ್ನಿಂದಲೇ ಮೃತ್ಯು! ನನ್ನ ತಮ್ಮನನ್ನು ಕೊಂದ ವೈರಿ ಎಲ್ಲಿದ್ದರೂ ಬಿಡೆ!

(ಕೋಪೋದ್ದೀಪ್ತನಾಗಿ ಹಲ್ಲುಗಳನ್ನು ಕಟಕಟನೆ ಕಡಿದು ಕಣ್ಣುಗಳಲ್ಲಿ ಕೋಪದ ಕಿಡಿಗಳನ್ನು ಕಾರುವನು. ಸ್ವಲ್ಪದೂರ ಹೋದಮೇಲೆ ಎದುರಾಗಿ ಮಹರ್ಷಿಯೊಬ್ಬ ಕಂಡುಬಂದು ಮನದಲ್ಲಿ ಕಿಂಚಿತ್ ಆಶಾಭಾವ ಮೂಡಿತು. ಅವನ ಸಮೀಪಕ್ಕೆ ತಾನೇ ಹೋಗಿ....)

ಹಿರಣ್ಯಕಶಿಪು—(ಸೌಮ್ಯಭಾವದಿಂದ) ಮಹರ್ಷಿಗಳೇ, ತಾವು ಯಾವ ಕಡೆಯಿಂದ ಬರುತಿದ್ದೀರಿ?

ಮಹರ್ಷಿ—ನಾನು ಹೇಮಕೂಟದಿಂದ ಬರುತ್ತಿರುವೆ.

ಹಿರಣ್ಯಕಶಿಪು—ನೀವು ವಿಷ್ಣುವನ್ನು ಕಂಡಿದ್ದೀರಾ?

ಮಹರ್ಷಿ—ಇಲ್ಲ ಮಗೂ!

ಹಿರಣ್ಯಕಶಿಪು—ಅವನು ಬದುಕಿದ್ದಾನೆಯೋ?

ಮಹರ್ಷಿ—(ಮುಗುಳು ನಕ್ಕು) ಹೌದು. ಅವನಿಂದಲೇ ಈ ಲೋಕ ನಿಯಂತ್ರಣ.

ಹಿರಣ್ಯಕಶಿಪು—(ಉಕ್ಕಿಬಂದ ಸಿಟ್ಟನ್ನು ತಡೆದುಕೊಂಡು) ಅವನನ್ನು ಕಾಣುವುದೆಂತು? ಎಲ್ಲಿ ದೊರೆಯುತ್ತಾನೆ?

ಮಹರ್ಷಿ—ಅಯ್ಯೋ, ವಿಷ್ಣು–ಬ್ರಹ್ಮಾದಿಗಳು ಅಷ್ಟು ಸುಲಭರೆ? ಅನ್ನ

ಆಹಾರಾದಿಗಳನ್ನು ತೊರೆದು ತದೇಕ ಚಿಂತನೆಯಿಂದ ಅಗಾಧವಾದ ತಪಸ್ಸು ಮಾಡಬೇಕು.

ಹಿರಣ್ಯಕಶಿಪು—ಹಾಗೊ....?

(ಹಿರಣ್ಯಕಶಿಪು ಬಹಳ ಕಷ್ಟದಿಂದ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಂಡ. ಆ ಮಹರ್ಷಿಯನ್ನು ಒಮ್ಮೆಗೇ ಕೀರಿಸಿಬಿಡುವ ಮನಸ್ಸಾಗಿತ್ತು. ಆದರೆ ಅವನು ತನ್ನ ಕುಲದೈವ ಬ್ರಹ್ಮನ ಹೆಸರನ್ನೂ ವಿಷ್ಣುವಿನ ಹೆಸರಿನೊಂದಿಗೆ ಕೂಡಿಸಿ ಗೆದ್ದ. ಆ ಒಂದು ಮಾತಿಗಾಗಿ ಅವನ ಜೀವ ಉಳಿಯಿತು)

ಹಿರಣ್ಯಕಶಿಪುವು ವಿಷ್ಣುವಿಗಾಗಿ ದಿಶೆದಿಶೆಗಳನ್ನೂ ಸುತ್ತಿ ಅಂಡಲೆದು ಬೇಸತ್ತು ಹಿಂದಿರುಗಿ ಅರಮನೆಗೆ ಬರುವನು. ಮನಃಪ್ರಾಣಗಳಲ್ಲಿ ತೀವ್ರ ಆಯಾಸ–ನಿರಾಸೆಗಳು ಮನೆಮಾಡಿದ್ದುವು. ಹೆಬ್ಬಾಗಿಲಿನ ಬಳಿ ಕಾದಿದ್ದ ದೂತನನ್ನು ಕುರಿತು ತರಾತುರಿಯಲ್ಲಿ....)

ಹಿರಣ್ಯಕಶಿಪು—ನೀನು ಈಗಲೇಹೋಗಿ ಗುರುಗಳನ್ನು ಬರಹೇಳು ; ತಡಮಾಡಬಾರದು.

ದೂತ—ಆಗಲಿ, ಎನ್ನೊಡೆಯಾ.

(ದೂತ ಅಡ್ಡಬಿದ್ದು ಆಕ್ಷಣವೇ ಅಲ್ಲಿಂದ ನಿಷ್ಕ್ರಮಿಸುವನು. ಎಣೆಯಿಲ್ಲದ ಅವನ ಪಟುತ್ವ ವಿದ್ಯುತ್ತಿನ ಕ್ಷಣಸ್ಥಾಯೀ ಪ್ರಭೆಯಂತೆ ಮನವನ್ನು ಕಿಂಚಿತ್ ಅರಳಿಸಿತು. ಹಿರಣ್ಯಕಶಿಪು ಅಂತಃಪುರಕ್ಕೆ ಹೋಗಿ ಮಡದಿಯನ್ನು ಕಾಣುವನು)

ರಾಣಿ––(ಬಹಳ ನೊಂದುಕೊಂಡಂತೆ ತಗ್ಗಿದ ದನಿಯಲ್ಲಿ) ನೀವು ದೈಹಿಕ ಶ್ರಮ ಮತ್ತು ಉದ್ವಿಗ್ನತೆಗಳಿಂದ ಬಹಳ ದಣಿದಂತೆ ಕಾಣುತ್ತೀರಿ. ಆದರೂ ನಿಮ್ಮ ದರ್ಶನದಿಂದ ನನ್ನ ಮಾನಸಿಕ ಕ್ಷೋಭೆ ನಿವಾರಣೆಯಾಯಿತು. ನಿಮಗಿದು ಮಹತ್ವವಲ್ಲದಿರಬಹುದು. ಆದರೆ ನನ್ನ ಭಾಗಕ್ಕೆ ಅದೇ ಸರ್ವಸ್ವ.

(ಸತಿಯ ಮಾತಿಗೆ ಗಮನಕೊಡುವಷ್ಟು ತಾಳ್ಮೆ ಆತನಲ್ಲಿ ಉಳಿದಿರಲಿಲ್ಲ. ನಿತ್ಯಕರ್ಮಗಳನ್ನು ಆತುರಾತುರವಾಗಿ ಮುಗಿಸಿ ಆಸ್ಥಾನದ ಕಡೆ ನಡೆಯುವನು.

ಅದೇ ವೇಳೆಗೆ ಸರಿಯಾಗಿ ರಾಜಗುರುಗಳು ದೂತನೊಡನೆ ಪ್ರವೇಶಿಸುವರು. ದೂತನು ಅಲ್ಲಿಂದ ಹೊರಹೋಗಿ ಕಾದು ನಿಲ್ಲುವನು)

ರಾಜಗುರು—ಎಲೈ ರಾಕ್ಷಸೇಂದ್ರಾ, ದೇಶ ಪರ್ಯಟನವನ್ನು ಕೈಕೊಂಡು ದಣಿದಿರುವಾಗ ತರಾತುರಿಯೇಕೆ ? ಸ್ವಲ್ಪ ಸಮಯವಾದರೂ ಸಮಾಧಾನದಿಂದ ಕಳೆಯಬಾರದೇ ?

ಹಿರಣ್ಯಕಶಿಪು—(ತೀವ್ರ ಅಸಮಾಧಾನದಿಂದ ಕೈಕೈ ಒದರಿ) ಸಿರಾಸೆ ಎಂಬುದು ನನ್ನನ್ನು ಹಿರಿದು ತಿನ್ನುತ್ತಿದೆ ಏನು ಮಾಡುವುದೋ ಬಗೆ ಹರಿಯದು.

ರಾಜಗುರು—ಮಹಾರಾಜ, ಆತುರ ಪಡದಿರು. ಅದಕ್ಕಿಂತ ಮಿಗಿಲಾಗಿ ನೀನು ನಿನ್ನನ್ನು ರಕ್ಷಿಸಿಕೊಳ್ಳುವ ಹೊಣೆ ಹೊರಬೇಕು. ವಿಷ್ಣು ಯಾವ ಗಳಿಗೆಯಲ್ಲಿ, ಯಾವ ರೂಪದಲ್ಲಿ ಬಂದೆರಗುವನೋ ಊಹಿಸುವುದು ಕಷ್ಟ. ನೀನು ಮೊದಲು ನಿನ್ನ ರಕ್ಷೆಯನ್ನು ಭದ್ರಪಡಿಸಿಕೊ ಅನಂತರ ಇನ್ನೆಲ್ಲಾ ಸಮಾಚಾರ.

ಹಿರಣ್ಯಕಶಿಪು—ಅಂದರೆ ?

ರಾಜಗುರು– ಅಯ್ಯಾ, ಅವನಿಂದ ನಿನಗೆ ದುರ್ಮರಣ ಸಂಭವಿಸದಂತೆ ಬ್ರಹ್ಮರಕ್ಷೆ ಮಾಡಿಕೊಂಡರೆ ಮಾತ್ರ ವಿಷ್ಣುವನ್ನು ಜಯಿಸುವುದು ಸಾಧ್ಯ ನಿನಗೆ.

ಹಿರಣ್ಯಕಶಿಪು—ಅದಕ್ಕೇನುಪಾಯ....?

ರಾಜಗುರು—ಬ್ರಹ್ಮದೇವನನ್ನು ಕುರಿತು ತಪಸ್ಸುಮಾಡು. ಅವನನ್ನು ಬಿಟ್ಟು ನಿನಗಿನ್ನಾರು ರಕ್ಷೆ ನೀಡಬಲ್ಲರು ?

ಹಿರಣ್ಯಕಶಿಪು– ಸರಿ; ಅದುವೇ ಸರಿಯಾದ ಕ್ರಮ. ಅವನ ದಿವ್ಯ ವರದಿಂದಲೇ ನಾವು ಅಗಾಧವಾದ ಶಕ್ತಿಯನ್ನು ಪಡೆದುಕೊಂಡದ್ದು. ಅವನ ವರವೇ ನನಗೆ ವಜ್ರಬಲ.

ರಾಜಗುರು—ಇನ್ನೊಮ್ಮೆ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ವರವನ್ನು ಪಡೆದುಕೊಳ್ಳುವುದು ಒಳ್ಳೆಯದು.

ಹಿರಣ್ಯಕಶಿಪು—ನಿಮ್ಮ ಸಲಹೆಗೆ ಧನ್ಯವಾದಗಳು. ನಾನು ಖಂಡಿತ ಕಠಿಣ

ತಪಸ್ಸನ್ನಾಚರಿಸಿ ಬ್ರಹ್ಮನಿಂದ ವರವನ್ನು ಪಡೆದುಕೊಳ್ಳುವೆ.

ರಾಜಗುರು—ಮಹಾರಾಜ, ನಿನಗೆ ಮಂಗಳವಾಗಲಿ.

(ಹಿರಣ್ಯಕಶಿಪುವಿನಿಂದ ಅಪ್ಪಣೆ ಪಡೆದುಕೊಂಡು ರಾಜಗುರು ಅಲ್ಲಿಂದ ನಿರ್ಗಮಿಸುವನು. ಹಿರಣ್ಯಕಶಿಪು ತಪಸ್ಸಿಗೆ ಹೊರಡುವ ಮುನ್ನ ಮತ್ತೊಮ್ಮೆ ಪುಣ್ಯಕ್ಷೇತ್ರಗಳ ಮೇಲೆ ಧಾಳಿಮಾಡಿ ಒಡಲ ಕಿಚ್ಚಿಗೆ ತಣ್ಪೆರೆದುಕೊಳ್ಳುವುದನ್ನು ಮರೆಯುಲಿಲ್ಲ. ವಿಷ್ಣುವಿನ ಹೆಸರೆತ್ತಿದವರನ್ನು ಕೊಂದುಬಿಡಲು ರಾಕ್ಷಸರಿಗೆ ಕಟ್ಟಪ್ಪಣೆ ಮಾಡಿ ತಾನು ತಪಸ್ಸಿಗೆ ಹೊರಡಲು ಅಣಿಯಾಗುವನು. ರಾಣಿಯು ಅವನ ಹಣೆಗೆ ತಿಲಕವನಿಟ್ಟು ಕೊರಳಿಗೆ ಹಾರವನ್ನು ಹಾಕಿ ಬೀಳ್ಕೊಡುತ್ತ....)

ರಾಣಿ—ಪ್ರಭೂ, ನೀವು ಬ್ರಹ್ಮದೇವನಲ್ಲಿ ಪುತ್ರಸಂತಾನವಿಲ್ಲದ ನಮಗೆ ಪುತ್ರಭಾಗ್ಯವನ್ನು ಪಡೆದುಕೊಂಡು ಬನ್ನಿ.

ಹಿರಣ್ಯಕಶಿಪು—ಓಹೋ,ಇದುವರೆಗೂ ಅದು ನೆನಪಿಗೆ ಬಂದೇ ಇರಲಿಲ್ಲ.

(ತುಟಿಗಳಲ್ಲಿ ತರಲಹಾಸ ಅರಳುವುದು)

ರಾಣಿ—ನಿಮಗೆ ಅಷ್ಟೆಲ್ಲಾ ಯೋಚಿಸುವಷ್ಟು ಸಮಯ-ಸಹನೆ ಎಂದಾದರೂ ಇದ್ದುದುಂಟೇ?

ಹಿರಣ್ಯಕಶಿಪು—(ಹೆಮ್ಮೆಯಿಂದ) 'ಲೋಕೇಶ್ವರ' ಅನ್ನಿಸಿಕೊಳ್ಳುವುದು ಅಷ್ಟು ಸುಲಭವಲ್ಲ.

(ರಾಣಿಯ ಚಿತ್ತಕಲ್ಪ ಸುಖ-ದುಃಖಗಳನ್ನು ಒಮ್ಮೆಗೇ ಹೀರಿದಂತೆ ಗಂಭೀರಭಾವ ತಳೆಯಿತು. ಸುಮ್ಮನೆ ಕಾಲ್ಮುಟ್ಟಿ ನಮಸ್ಕರಿಸಿ ಬೀಳ್ಕೊಡುವಳು.

ಹಿರಣ್ಯಕಶಿಪು ಗೊಂಡಾರಣ್ಯವನ್ನು ಸೇರಿ ಉಗ್ರ ತಪಸ್ಸುಮಾಡಿ ಬ್ರಹ್ಮದೇವನನ್ನು ಮೆಚ್ಚಿಸುವನು. ಬ್ರಹ್ಮದೇವನು ಅವನ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗಿ....)

ಬ್ರಹ್ಮದೇವ—ಮಗೂ, ನಿನ್ನ ತಪಸ್ಸಿಗೆ ಮೆಚ್ಚಿರುವೆ. ನಿನಗೆ ಯಾವ ವರಬೇಕೋ ಬೇಡಿಕೋ.

ಹಿರಣ್ಯಕಶಿಪು—(ನಮಸ್ಕರಿಸಿ ಎರಡೂ ಕೈಗಳನ್ನು ಭಕ್ತಿಯಿಂದ ಜೋಡಿಸಿಕೊಂಡು) ಸ್ವಾಮಿಾ, ನಿನಗೆ ಅನಂತ ನಮಸ್ಕಾರ. ನಮ್ಮ ಕುಲದೈವವಾಗಿ ಇದುವರೆವಿಗೂ ನನ್ನನ್ನು ಕಾಪಾಡಿಕೊಂಡು ಬಂದಿರುವೆ. ಇನ್ನು ಮುಂದೆಯೂ ಇದೇ ರೀತಿ ಕಾಪಾಡಿಕೊಂಡು ಬರುವ ಭರವಸೆಕೊಟ್ಟರೆ ಸಾಕು.

ಬ್ರಹ್ಮದೇವ—ನಿನ್ನ ಮನದಭಿಲಾಷೆಯಾದರೂ ಏನು?

ಹಿರಣ್ಯಕಶಿಪು—ನಾನು ದಿಗ್ವಿಜಯಿಯಾಗಿ ನನ್ನ ಕುಲಕ್ಕೆ ಕೀರ್ತಿಪ್ರಾಯನಾಗಬೇಕು.

ಬ್ರಹ್ಮದೇವ—(ಮುಗುಳುನಗೆ ಬೀರಿ)ನೀನು ಹೇಗೂ ಕುಲ ತಿಲಕನಷ್ಟೆ?

ಹಿರಣ್ಯಕಶಿಪು—ಸ್ವಾಮಿಾ, ಮಹಾಪ್ರಭೂ! ನಾನು ಕುಲತಿಲಕನಾದರೂ ನಿನ್ನ ಅಭಯ ಹಸ್ತವಿಲ್ಲದಿದ್ದರೆ ವ್ಯರ್ಥ; ನಿಷ್ಪ್ರಯೋಜನ.

ಬ್ರಹ್ಮದೇವ—ಅಯ್ಯಾ ಹಿರಣ್ಯಕಶಿಪು. ನಿನ್ನ ಬೇಡಿಕೆ ಏನೆಂಬುದನ್ನು ತಿಳಿಸು.

ಹಿರಣ್ಯಕಶಿಪು—(ತನ್ನಲ್ಲಿಯೇ ಸ್ವಲ್ಪಹೊತ್ತು ಯೋಚಿಸಿ) ಸ್ವಾಮಿಾ, ನನ್ನ ಸ್ವಾರ್ಥಕ್ಕೆ, ದುರಾಸೆಗೆ ನಿನ್ನ ಕ್ಷಮೆಯಿರಲಿ. ಏಕೆಂದರೆ ಬಲಿಷ್ಠನೂ ನಿಷ್ಠಾವಂತನೂ, ಏಕ ಮಾತ್ರ ಸೋದರನೂ ಆದ ಹಿರಣ್ಯಾಕ್ಷನನ್ನು ಕಳೆದುಕೊಂಡು ಚಿಂತಾಬ್ಧಿಯಲ್ಲಿ ಮುಳುಗಿ ತೀರ ದುರ್ಬಲನಾಗಿರುವೆ. ನನ್ನ ಕ್ಷೇಮಾಕಾಂಕ್ಷಿಯಾದ ನೀನದನ್ನು ತಿಳಿದಿರುವೆಯಾದ್ದರಿಂದ ಹೆಚ್ಚಿಗೆ ಹೇಳುವ ಅವಶ್ಯಕವಿಲ್ಲ. ನನ್ನ ಮನಸ್ಸು ಕದಡಿ ಬಗ್ಗಡವಾಗಿದೆ. ಅದಕ್ಕೆ ಶಾಂತಿಯನ್ನು ಪಡೆಯಬೇಕಾದರೆ ನನ್ನ ವೈರಿಯನ್ನು ಬಗ್ಗುಬಡಿಯುವಷ್ಟು ನಾನು ಸಬಲನಾಗಬೇಕು. ಅದಕ್ಕೆಂದೇ ನಾನು ನಿನ್ನನ್ನು ಕುರಿತು ಕಠಿಣ ತಪಸ್ಸನ್ನುಗೈದಿರುವೆ. ಬ್ರಹ್ಮದೇವಾ, ನನ್ನನ್ನು ಅನುಗ್ರಹಿಸು.

(ಹಿರಣ್ಯಕಶಿಪು ಪುನಃ ಭಯಭಕ್ತಿಯಿಂದ ಅಡ್ಡಬೀಳುವನು)

ಬ್ರಹ್ಮದೇವ—ಆಗಲಿ, ನಿನಗಾವ ವರಬೇಕೆಂಬುದನ್ನು ಈಗಲೇ ವಿಷದೀಕರಿಸು.

ಹಿರಣ್ಯಕಶಿಪು—ಸ್ವಾಮಿಾ, ದೇವದಾನವರುಗಳಿಂದಲೂ, ಮನುಷ್ಯ ಮೃಗಾದಿಗಳಿಂದಲೂ ನನಗೆ ಸಾವು ಸಂಭವಿಸಕೂಡದು. ಹಗಲಾಗಲೀ, ಇರುಳಾಗಲೀ ಅಥವಾ ಯಾವ ಆಯುಧದಿಂದಾಗಲೀ, ನನಗೆ ಮೃತ್ಯುಉಂಟಾಗಬಾರದು. ನಾಸು ಲೋಕಕ್ಕೆ ಒಡೆಯನಾಗಿರುವಂತೆ ನನಗೆ ನಿನ್ನ ಅನುಗ್ರಹವನ್ನು ದಯಪಾಲಿಸು.

ಬ್ರಹ್ಮದೇವ—(ನಸುನಕ್ಕು) ಸರಿ ; ಇನ್ನೇನು ಬೇಕು ?

ಹಿರಣ್ಯಕಶಿಪು—(ದೈನ್ಯತೆಯಿಂದ) ಇನ್ನೇನು ಕೇಳಲಿ ನನ್ನೊಡೆಯಾ ?

(ಅವನು ತಪಸ್ಸಿಗೆ ಹೊರಡುವಾಗ ರಾಣಿಯು 'ಪುತ್ರ ಸಂಪ್ರಾಪ್ತಿಗಾಗಿ ಬ್ರಹ್ಮದೇವನಲ್ಲಿ ವರನನ್ನು ಬೇಡಿಕೊಳ್ಳಿ' ಎಂದು ಹೇಳಿಕೊಂಡಿದ್ದ ವಿಚಾರವು ಸ್ಮರಣೆಯಿಂದ ಅಳಿಸಿಯೇ ಹೋಗಿದ್ದುದರಿಂದ ಹಿರಣ್ಯಕಶಿಪು ಸಹಜವಾಗಿ ಸುಮ್ಮನಾದ)

ಬ್ರಹ್ಮದೇವ–ನಿನ್ನ ರಾಣಿಯ ಪುತ್ರಾಭಿಲಾಷೆಯನ್ನು ಮರೆತುಬಿಡುವುದೇ?

ಹಿರಣ್ಯಕಶಿಪು—(ಬ್ರಹ್ಮಗಂಧಿಯಿಂದ ಪ್ರಮತ್ತವಾಗಿದ್ದ ಮಸ್ತಿಷ್ಕದಲ್ಲಿ ಒಮ್ಮೆಲೇ ವಿದ್ಯುತ್ ಸಂಚಾರವಾದಂತಾಗಿ ರಕ್ತದ ಕಣಕಣಗಳೂ ಉತ್ತೇಜಿತವಾದುವು. ತಕ್ಷಣ ತಲೆಬಾಗಿ ಕೈಮುಗಿದುಕೊಂಡು) ದೇವಾ, ನನ್ನ ಮರೆವಿಗೆ ಕ್ಷಮೆಯಿರಲಿ. ನಾನು ಖಂಡಿತ ಅಲಕ್ಷಿಸಲಿಲ್ಲ. ದಯಮಾಡಿ ಅನುಗ್ರಹಿಸು. ನನಗೆ ವಂಶೋದ್ಧಾರಕನಾದ ಪುತ್ರರತ್ನವನ್ನು ದಯಪಾಲಿಸು.

ಬ್ರಹ್ಮದೇವ—ತಥಾಸ್ತು.

(ಮರುಕ್ಷಣದಲ್ಲಿ ಬ್ರಹ್ಮದೇವನು ಅಂತರ್ಧಾನನಾಗುವನು. ಹಿರಣ್ಯಕಶಿಪು ಅತ್ಯಂತ ಸಂತುಷ್ಟನಾಗಿ ವಿಜಯೋಲ್ಲಾಸದಿಂದ ರಾಜಧಾನಿಗೆ ಹಿಂದಿರುಗಿದಾಗ ಪುರಪ್ರಜೆಗಳು ಅತ್ಯುತ್ಸಾಹದಿಂದ ಎದುರುಗೊಂಡರು. ಪುರಪ್ರವೇಶದ್ವಾರದಲ್ಲಿ ಮಂಗಳ ವಾದ್ಯಗಳು ಕಿವಿ ಗಡಚಿಕ್ಕುವಂತೆ ಮೊಳಗಿದವು. ತಮ್ಮ ದೊರೆ ಬ್ರಹ್ಮದೇವನಿಂದ ಅನುಗ್ರಹೀತನಾದನೆಂದು ರಾಕ್ಷಸಕುಲಕ್ಕೆ ಸಂಭ್ರಮವೋ ಸಂಭ್ರಮ. ನೆಲಧಿಂಕಿಡುವಂತೆ ಅತ್ತಿತ್ತ ಕುಣಿದಾಡುತ್ತ ಜಯಘೋಷ ಮಾಡಿದರು.

ಮಡದಿಯು ಪಲ್ಲಕ್ಕಿಯಿಂದಿಳಿದು ಪತಿಯ ಪಾದಗಳಿಗೆ ನಮಸ್ಕರಿಸಿ ಆನಂದೋತ್ಸಾಹದಿಂದ ಹೂಮಾಲೆಯಿಕ್ಕಿ ಸ್ವಾಗತಿಸಿದಳು. ಹೃದಯಕರಂಡ ಸಂಭ್ರಮ ಕೋಲಾಹಲದಿಂದ ತುಂಬಿ ಬಿರಿಯುವಂತಾಯಿತು ಬಾಯಲ್ಲಿ ಮಾತುಗಳೇ ಹೊರಡದಾದುವು. ಮೆರವಣಿಗೆ ಅರಮನೆಯನ್ನು ಮುಟ್ಟಿದಮೇಲೆ ರಾಣಿಯು ಲಜ್ಜೆಸಂಕೋಚಗಳಿಂದ....)

ರಾಣಿ—ಪ್ರಭೂ, ಬ್ರಹ್ಮದೇವನಲ್ಲಿ ನೀವು ಪುತ್ರಯಾಚನೆ ಮಾಡಿದಿರಾ?

ಹಿರಣ್ಯಕಶಿಪು—ಶುಭೆ, ನಾನದನ್ನು ಮರೆತಿದ್ದರೂ ಬ್ರಹ್ಮದೇವ ಮರೆಯಲಿಲ್ಲ.

ರಾಣಿ—ಅಂದರೆ ವರಪ್ರಧಾನ ಮಾಡಿದರೆ?

ಹಿರಣ್ಯಕಶಿಪು—ಹೌದು, ಅದು ನಿನ್ನ ಭಾಗ್ಯ.

ರಾಣಿ—ನಾವು ಧನ್ಯರಾದೆವು.

ಹಿರಣ್ಯಕಶಿಪು—ಇಲ್ಲಿ ಕೇಳು! ಈ ವೀರಾಧಿವೀರ ಹಿರಣ್ಯಕಶಿಪುವಿನ ಪಟ್ಟದರಾಣಿ ಎಂದಮೇಲೆ ಸಾಮಾನ್ಯವೇ? ಪುತ್ರಸಂತಾನವಿರಲಿ, ಇಲ್ಲದಿರಲಿ ಧನ್ಯತೆ ಎಂಬುದು ನಿನ್ನ ಕಾಲ ಕಸವಾಗಿದೆ?

ರಾಣಿ—ಬ್ರಹ್ಮದೇವನ ಅನುಗ್ರಹದಿಂದ.

ಹಿರಣ್ಯಕಶಿಪು—(ಅಟ್ಟಹಾಸದಿಂದ) ಎಲ್ಲಿ ತೋಳ್ಬಲವುಂಟೋ ಅಲ್ಲಿ ಬ್ರಹ್ಮನ ಅನುಗ್ರಹವುಂಟು! ಈ ತೋಳ್ಬಲವೇ ಇಲ್ಲದಿದ್ದಲ್ಲಿ ಬ್ರಹ್ಮ ತಾನೇ ಏನು ಮಾಡಿಯಾನು?

(ಆ ಮಾತಿಗೆ ಉತ್ತರಿಸುವ ಸಾಹಸ ಮಾಡಲಿಲ್ಲ ರಾಣಿ)

(ಕಾಲಾವಧಿಯಲ್ಲಿ ಬ್ರಹ್ಮದೇವನ ವರದಿಂದ ಹಿರಣ್ಯಕಶಿಪುವಿನ ಪುತ್ರನಾಗಿ ಪ್ರಹ್ಲಾದನು ಸಂಜನಿಸಿ ರಾಜದಂಪತಿಗಳಿಗೆ ಉಂಟಾದ ಆನಂದಕ್ಕೆ ಪಾರವೇ ಇರಲಿಲ್ಲ. ಅರಮನೆಯಲ್ಲಿ–ಸಡಗರ ಸಂಭ್ರಮಗಳು ನಲಿದಾಡಿದುವು. ಪುರಪ್ರಜೆಗಳೂ ಅದರಲ್ಲಿ ಸಮಭಾಗಿಗಳಾಗಿ ರಾಜ್ಯದಾದ್ಯಂತ ಆನಂದೋತ್ಸಾಹಗಳಾದುವು)

(ಪರದೆ ಬೀಳುವುದು)

ದೃಶ್ಯ–೩

(ಐದು ವರ್ಷಗಳ ತರುವಾಯ)

(ಹಿರಣ್ಯಕಶಿಪುವಿನ ಆಸ್ಥಾನ. ಸಿಂಹಾಸನದ ಮೇಲೆ ಮಂಡಿಸಿದ ಹಿರಣ್ಯಕಶಿಪು ಅಮಾತ್ಯರುಗಳೊಡನೆ ಮಾತುಕತೆಯಲ್ಲಿ ನಿಮಗ್ನನಾಗಿದ್ದ. ರಾಜಕೀಯ ಪರಿಸ್ಥಿತಿ ಚರ್ಚೆಗೆ ವಸ್ತುವಾದರೂ ಮನಸ್ಸು ಹರಿದಾಡುತಿದ್ದುದು ಭವಿಷ್ಯದ ಹೆಗ್ಗತ್ತಿಯ ಅಲುಗಿನ ಮೇಲೆ)

ಹಿರಣ್ಯಕಶಿಪು—ಅಮಾತ್ಯರೆ, ನಮ್ಮ ರಾಜ್ಯದ ಪರಿಸ್ಥಿತಿಯನ್ನು ಸುಭದ್ರವಾದ ತಳಹದಿಯ ಮೇಲೆ ರೂಪಿಸಬೇಕೆಂಬುದೇ ನಮ್ಮ ಇಚ್ಛೆ. ಸುತ್ತಮುತ್ತ ದೇವತೆಗಳ ಕಾಟ ಇರುವುದರಿಂದ ಹಗಲಿರುಳೂ ಎಚ್ಚರಿಕೆ ವಹಿಸಬೇಕು. ಸ್ವಲ್ಪ ಎಚ್ಚರ ತಪ್ಪಿದರೂ ನಮ್ಮ ಆಶೋತ್ತರಗಳು ಬುಡಮೇಲಾಗುತ್ತವೆ.

ಅಮಾತ್ಯ—ತಮ್ಮ ಅಪ್ಪಣೆಯನ್ನು ಶಿರಸಾವಹಿಸುತ್ತೇವೆ ಮಹಾಪ್ರಭೂ!

ಹಿರಣ್ಯಕಶಿಪು—ಪ್ರಹ್ಲಾದನಿಗೆ ಸರಿಯಾದ ವಿದ್ಯಾಭ್ಯಾಸ ಮಾಡಿಸಬೇಕು. ಅಂತಹ ಪ್ರಕಾಂಡ ಪಂಡಿತರು ಯಾರಿದ್ದಾರೆ ನಮ್ಮಲ್ಲಿ?

ಅಮಾತ್ಯ—ಮಹಾಪ್ರಭೋ, ಚಂಡಾಮರ್ಕರೆಂಬ ಪಂಡಿತೋತ್ತಮರಿದ್ದಾರೆ. ಅವರ ಆಶ್ರಮ ನಮ್ಮ ರಾಜಧಾನಿಯಲ್ಲೇ ಉಂಟು. ಅವರು ಸಕಲ ವಿದ್ಯಾಪಾರಂಗತರು.

ಹಿರಣ್ಯಕಶಿಪು—ನಾನು ಸದಾ ರಾಜಕಾರಣದಲ್ಲಿ ಮತ್ತು ಶತ್ರು ಬೇಟೆ

ಯಲ್ಲಿ ತೊಡಗಿರುವುದರಿಂದ ಪ್ರಹ್ಲಾದನನ್ನು ಗಮನಿಸಲು ಬಿಡುವು ಸಹ ದೊರೆಯುವುದಿಲ್ಲ. ಅವನಿಂದಲೇ ನಮ್ಮ ವಂಶ ಸರ್ವತ್ರ ಬೆಳಗಬೇಕು.

ಅಮಾತ್ಯ—ಹೌದು ; ಮಹಾಸ್ವಾಮಿ.

ಹಿರಣ್ಯಕಶಿಪು—ಹಾಗಾದರೆ ಚಂಡಾಮರ್ಕರು ಪ್ರಹ್ಲಾದನಿಗೆ ಸರಿಯಾದ ಗುರುಗಳಾಗಬಲ್ಲರೇ ?

ಅಮಾತ್ಯ—ಮಹಾ ಪ್ರಭೂ, ನಮ್ಮ ಮಕ್ಕಳೆಲ್ಲಾ ಅವರ ಗುರುಕುಲದಲ್ಲಿಯೇ ವ್ಯಾಸಂಗ ಮಾಡುತಿದ್ದಾರೆ. ಎಲ್ಲಾ ಮಕ್ಕಳಿಗೂ ಸಮರ್ಪಕವಾಗಿ ವಿದ್ಯೆ ಹತ್ತುತ್ತಿದೆ.

ಹಿರಣ್ಯಕಶಿಪು—ಸರಿ ; ಈಗಲೇ ಅವರನ್ನು ಬರಮಾಡು.

ಅಮಾತ್ಯ—(ಬಾಗಿಲ ಕಡೆ ತಿರುಗಿ) ಯಾರಲ್ಲಿ ?

(ದೂತ ಒಳಗಡೆ ಪ್ರವೇಶಿಸಿ ನಮಸ್ಕರಿಸುವನು)

ದೂತ—ಅಪ್ಪಣೆಯಾಗಲಿ ಪ್ರಭೂ.

ಅಮಾತ್ಯ—ಈಗಲೇ ಆಶ್ರಮಕ್ಕೆ ಹೋಗಿ ಚಂಡಾಮರ್ಕರನ್ನು ಕರೆದುಕೊಂಡು ಬಾ.

ದೂತ—ಆಗಲಿ ಬುದ್ಧಿ.

(ಅವನು ಆಕ್ಷಣವೇ ಅಲ್ಲಿಂದ ನಿರ್ಗಮಿಸುವನು)

ಹಿರಣ್ಯಕಶಿಪು—ಚಂಡಾಮರ್ಕರು ಉತ್ತಮ ವಂಶೀಕರೇ ?

ಅಮಾತ್ಯ—ಹೌದು ; ಮಹಾಸ್ವಾಮಿ.

ಹಿರಣ್ಯಕಶಿಪು—ಅವರ ಗುರುಕುಲದಲ್ಲಿ ಎಷ್ಟು ಮಂದಿ ಬಾಲಕರಿದ್ದಾರೆ?

ಅಮಾತ್ಯ—ಅವರೊಂದಿಗೆ ಏಳೆಂಟು ಮಂದಿ ಇದ್ದಾರೆ. ಹೊರಗಡೆಯಿಂದ ಬಂದುಹೋಗುವವರು ಬಹಳ ಮಂದಿ ಇದ್ದಾರೆ.

ಹಿರಣ್ಯಕಶಿಪು—ಹಾಗಾದರೆ ಒಳ್ಳಿತು. ಇವನನ್ನು ಅವರೊಂದಿಗೆ ಬಿಡುವುದೇ ಸರಿ.

(ಆ ವೇಳೆಗೆ ಚಂಡಾಮರ್ಕರು ದೂತನೊಂದಿಗೆ ಪ್ರವೇಶಿಸುವರು)

ಚಂಡಾಮರ್ಕ—(ನಮಸ್ಕರಿಸಿ) ಮಹಾಪ್ರಭೂ, ಬರುವುದು ತಡವಾಗಿದ್ದರೆ ಕ್ಷಮೆ ಇರಲಿ.

(ಬೆದರಿದ ಜಿಂಕೆಯಂತೆ ಮೈಮುದಡಿ ನಿಲ್ಲುವರು)

ಹಿರಣ್ಯಕಶಿಪು—ಹೀಗೆ ಬನ್ನಿ, ಕುಳಿತುಕೊಳ್ಳಿ.

(ಅಮಾತ್ಯನು ಅವರ ಕಡೆ ಕಣ್ಣು ಮಿಸುಗಿ ಕುಳಿತುಕೊಳ್ಳಲು ಸೂಚನೆ ನೀಡುವನು. ಅದರಂತೆಯೇ ಚಂಡಾಮರ್ಕರು ಸನಿಹದಲ್ಲಿದ್ದ ಆಸನದ ಮೇಲೆ ಕುಳಿತು ಅಪ್ಪಣೆಯ ನಿರೀಕ್ಷೆಯಲ್ಲಿ ಮೈಯೆಲ್ಲಾ ಮನಸ್ಸಾಗುವರು)

ಹಿರಣ್ಯಕಶಿಪು—ಚಂಡಾಮರ್ಕರೆ, ನನ್ನ ಮಗನಾದ ಪ್ರಹ್ಲಾದನಿಗೆ ವಿದ್ಯಾಭ್ಯಾಸ ಕ್ರಮ ಕೈಕೊಳ್ಳಬೇಕು. ಅವನನ್ನು ಸಕಲ ವಿದ್ಯಾಪಾರಂಗತನನ್ನಾಗಿ ಮಾಡಬೇಕೆಂಬುದು ನನ್ನ ಅಭಿಲಾಷೆ. ಅವನು ನನ್ನಂತೆಯೇ ಲೋಕೇಶ್ವರನಾಗತಕ್ಕ ಯೋಗ್ಯತೆಯನ್ನು ಪಡೆಯಬೇಕಾದರೆ ಮೊದಲು ರಾಜಕಾರಣದಲ್ಲಿ ನುರಿತು ಅನಂತರ ರಾಜ್ಯಭಾರವೇನೆಂಬುದನ್ನು ಅರಿತುಕೊಳ್ಳಬೇಕು. ಆದ್ದರಿಂದ ಅವನಿಗೆ ಆ ವಿಚಾರದಲ್ಲಿ ಸರಿಯಾದ ಶಿಕ್ಷಣ ದೊರೆಯಬೇಕು. ನೀವೇ ಅದಕ್ಕೆ ಸರಿಯಾದ ಗುರುಗಳೆಂದು ನಮಗೆ ತಿಳಿದು ಬಂದುದರಿಂದ ನಿಮ್ಮನ್ನು ಇಲ್ಲಿಗೆ ಬರಮಾಡಿಕೊಳ್ಳಲಾಯ್ತು. ಈಗ ನೀವೇನು ಹೇಳುವಿರಿ?

ಚಂಡಾಮರ್ಕ—ಅಪ್ಪಣೆ ಮಹಾಪ್ರಭೋ !

ಹಿರಣ್ಯಕಶಿಪು—ನಮ್ಮ ದಳವಾಯಿಗಳ ಮತ್ತು ಅಮಾತ್ಯರ ಮಕ್ಕಳೂ ತಮ್ಮ ಗುರುಕುಲದಲ್ಲಿದ್ದಾರೆಂದು ಕೇಳಿಬಲ್ಲೆ.

ಚಂಡಾಮರ್ಕ—ಹೌದು, ಮಹಾರಾಜ.

ಹಿರಣ್ಯಕಶಿಪು—ಅವರು ಹೇಗಿದ್ದಾರೆ....? ತಮ್ಮ ಗುರುಕುಲಕ್ಕೆ ಹೊಂದಿಕೊಂಡಿದ್ದಾರೆಯೇ? ಚೆನ್ನಾಗಿ ಕಲಿಯುವ ಆಸಕ್ತಿ ತೋರುತ್ತಿದ್ದಾರೆಯೇ?

ಚಂಡಾಮರ್ಕ—ಹೌದು ಮಹಾಸ್ವಾಮಿ.

ಅಮಾತ್ಯ---ಚಂಡಾಮರ್ಕರೇ, ತಾವು ನಮ್ಮ ಮಕ್ಕಳಿಗೆ ತೆಗೆದು ಕೊಂಡಷ್ಟು ಆಸ್ಥೆ ರಾಜಕುಮಾರನಿಗೂ ತೆಗೆದುಕೊಂಡಲ್ಲಿ ಅದು ತೀರ ಕಡಿಮೆ ಯಾಗುತ್ತದೆ. ತಾವು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ರಾಜಕುಮಾರನ ಬಗ್ಗೆ ಆಸ್ಥೆ ವಹಿಸಿರಿ. ಅಂದರೆ ಕ್ಷಿಪ್ರಪರಿಣಾಮಕಾರಿಯಾಗಿರಬೇಕು ತಮ್ಮ ಸರ್ವಾಂಗೀಣ ಬೋಧನೆ.

ಚಂಡಾಮರ್ಕ---ಆಗಬಹದು.

ಹಿರಣ್ಯಕಶಿಪು---ನನ್ನ ಮಗನನ್ನೂ ನಿಮ್ಮ ಗುರುಕುಲಕ್ಕೆ ಒಪ್ಪಿಸಿ ಬಿಡುವೆ. ಅವನ ಸಂಪೂರ್ಣಭಾರ ನಿಮ್ಮದು ಇನ್ನುಮೇಲೆ.

ಚಂಡಾಮರ್ಕ---ಆ ಬಗ್ಗೆ ತಾವು ಯಾವ ಚಿಂತೆಯನ್ನೂ ಇಟ್ಟುಕೊಳ್ಳ ಬಾರದು ನಾನು ಸರಿಯಾದ ವ್ಯವಸ್ಥೆ ಮಾಡುವೆ, ಮಹಾಪ್ರಭೂ !

ಹಿರಣ್ಯಕಶಿಪು---ರಾಜಕುಮಾರನನ್ನು ಸಾಮಾನ್ಯರ ಕೈಗೊಪ್ಪಿಸುವುದ ರಿಂದ ರಾಜ್ಯದ ಭವಿಷ್ಯಕ್ಕೇ ಕುತ್ತು ಎಂಬುದನ್ನು ನೀವು ಬಲ್ಲಿರಷ್ಟೆ ?

ಚಂಡಾಮರ್ಕ---ಹೌದು ಮಹಾಸ್ವಾಮಿ.

ಹಿರಣ್ಯಕಶಿಪು---ಚಂಡಾಮರ್ಕರೇ, ಎಚ್ಚರಿಕೆ ! ನಿಮ್ಮ ಬೋಧೆ ಹುಡು ಗಾಟವಾಗಬಾರದು !

(ಆ ಗಳಿಗೆಯಲ್ಲಿ ನಡುಗಿ ಹೋದರು ಚಂಡಾಮರ್ಕರು. ನನ್ನಿಂದಾಗದು ಎಂದು ಹೇಳುವ ಸಾಮರ್ಥ್ಯವೂ ಇಲ್ಲ. ಒಪ್ಪಿಕೊಂಡರೂ ಕಷ್ಟ ಎಂಬಂತಹ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡು ಆತಂಕಿತವಾಯಿತು ಚಿತ್ತಕಲ್ಪ)

ಚಂಡಾಮರ್ಕ---(ಎರಡು ಕೈಗಳನ್ನೂ ಜೋಡಿಸಿಕೊಂಡು ನಡುಗುತ್ತ) ಸ್ವಾಮಿ, ಮಹಾಪ್ರಭೂ ! ನನ್ನಲ್ಲಿರುವ ಸಕಲ ವಿದ್ಯೆಯನ್ನು ನಿರ್ವಂಚನೆ ಯಿಂದ ನಿಮ್ಮ ಕುಮಾರನಿಗೆ ಧಾರೆಯೆರೆಯುವೆ. ತಾವು ಪರಾಮರ್ಶಿಸಬಹುದು.

ಹಿರಣ್ಯಕಶಿಪು---ಎಲೈ ದೂತ ! ಇಲ್ಲಿ ಬಾ.

(ಹೆಬ್ಬಾಗಿಲಲ್ಲಿ ಪಹರೆಯಲ್ಲಿದ್ದ ದೂತ ಒಳಬಂದು ತಲೆಬಾಗಿ ಕೈಜೋಡಿಸಿ

ನಿಲ್ಲುವನು)

ಹಿರಣ್ಯಕಶಿಪು—ಅಂತಃಪುರಕ್ಕೆ ಹೋಗಿ ಪ್ರಹ್ಲಾದಕುಮಾರನನ್ನು ಕರೆದುಕೊಂಡು ಬಾ.

(ದೂತನು ಕೂಡಲೇ ಒಳಹೋಗಿ ರಾಜಕುಮಾರನನ್ನು ಕರೆತರುವನು)

ಪ್ರಹ್ಲಾದ—(ತಂದೆಯ ಸನಿಹಕ್ಕೈತಂದು) ಏನಪ್ಪಾ ?

ಹಿರಣ್ಯಕಶಿಪು—ನಿನಗೆ ಆಗಲೇ ಹೇಳಿದೆನಷ್ಟೆ, ಗುರುಕುಲಕ್ಕೆ ಸೇರಬೇಕು ಎಂದು.

ಪ್ರಹ್ಲಾದ—ಹೌದು ಅಪ್ಪಾಜಿ.

ಹಿರಣ್ಯಕಶಿಪು—ಇಂದಿನಿಂದ ಇವರು ನಿನ್ನ ಗುರುಗಳು. ಇವರಿಗೆ ನಮಸ್ಕರಿಸು.

ಪ್ರಹ್ಲಾದ—(ಕೈ ಜೋಡಿಸಿಕೊಂಡು ಅತ್ಯಂತ ವಿನಮ್ರತೆಯಿಂದ) ನಮಸ್ಕಾರ ಗುರುಗಳೇ !

ಚಂಡಾಮರ್ಕ—(ಪ್ರೀತಿಯಿಂದ ತಲೆಯನ್ನು ನೇವರಿಸಿ) ಮಗೂ, ನಮ್ಮ ಗುರುಕುಲದಲ್ಲಿ ನೀನು ಇರಬಲ್ಲೆಯಾ ?

ಪ್ರಹ್ಲಾದ—ಇರಬಲ್ಲೆ ಗುರುಗಳೇ !

ಹಿರಣ್ಯಕಶಿಪು—ಗುರುಗಳಿಂದ ಚೆನ್ನಾಗಿ ಪಾಠವನ್ನು ಕಲಿಯುತ್ತೀಯಷ್ಟೆ?

ಪ್ರಹ್ಲಾದ—ಹೌದು ತಂದೆಯೇ !

ಹಿರಣ್ಯಕಶಿಪು—ನೀನು ಈಗಲೇ ಅವರೊಂದಿಗೆ ಹೋಗಬೇಕು ತಿಳಿಯಿತೇ?

ಪ್ರಹ್ಲಾದ—ಆಗಬಹುದು.

(ಸುಂದರವಾದ ಮುಖದಲ್ಲಿ ಎಳೆಯ ನಗು ಅರಳುವುದು)

ಚಂಡಾಮರ್ಕ—ಪ್ರಭುಗಳೇ ! ಈ ದಿನ ವಿದ್ಯಾಭ್ಯಾಸಕ್ಕೆ ಬಹಳ ಪ್ರಶಸ್ತವಾದುದು. ಇಂದೇ ಅಕ್ಷರಾಭ್ಯಾಸ ಮಾಡಿಸುವೆ. ತಾವು ಕಳಿಸಿ ಕೊಡೋಣವಾಗಲಿ.

ಹಿರಣ್ಯಕಶಿಪು—ಆಗಬಹುದು, ಚಂಡಾಮರ್ಕರೇ.

ಚಂಡಾಮರ್ಕ—ಮಗೂ, ಪ್ರಹ್ಲಾದ ! ಅಂತಃಪುರಕ್ಕೆ ಹೋಗಿ ಮಹಾರಾಣಿಯವರಿಗೆ ಹೇಳಿ ಬಾಪ್ಪಾ.

ಪ್ರಹ್ಲಾದ—(ಉತ್ಸಾಹದಿಂದ) ಆಯಿತು ಗುರುಗಳೇ.

(ಆ ಕೂಡಲೇ ಪ್ರಹ್ಲಾದ ಒಳಹೋಗುವನು ; ಮೈಮನಗಳು ಉತ್ಸಾಹ ಪೂರ್ಣವಾಗಿದ್ದುವು)

ಚಂಡಾಮರ್ಕ—(ಅಂತಃಪುರದಿಂದ ಪ್ರಹ್ಲಾದನು ಹಿಂದಿರುಗಿ ಬಂದೊಡನೆಯೇ ಹಿರಣ್ಯಕಶಿಪುವಿಗೆ ಕೈ ಜೋಡಿಸಿಕೊಂಡು) ಅಪ್ಪಣೆಯಾಗಬೇಕು ಲೋಕೇಶ್ವರನೇ !

ಹಿರಣ್ಯಕಶಿಪು—ಆಯಿತು, ಹೊರಡಿ. (ಮಗನ ಕಡೆ ತಿರುಗಿ) ಮಗೂ, ಪಾಠವನ್ನು ಸರಿಯಾಗಿ ಕಲಿಯಬೇಕು ತಿಳಿಯಿತೇ ?

ಪ್ರಹ್ಲಾದ—(ತಲೆಯಾಡಿಸುತ್ತ) ಚೆನ್ನಾಗಿ ಕಲಿಯುವೆ.

(ಅಮಾತ್ಯನು ಹೆಬ್ಬಾಗಿಲವರೆಗೂ ಬಂದು ಪ್ರಹ್ಲಾದನನ್ನು ಬೀಳ್ಕೊಡುತ್ತಾ....)

ಅಮಾತ್ಯ—ಅಲ್ಲಿ ನಿನ್ನ ಓರಗೆಯ ಮಕ್ಕಳಿದ್ದಾರೆ ನೀನು ಚೆನ್ನಾಗಿ ಆಡಲೂ ಬಹುದು ; ಓದಲೂ ಬಹುದು.

(ಪ್ರಹ್ಲಾದ ಮಾತಾಡದೆ ಮಂದಹಾಸ ಬೀರುವನು)

(ಅಂದಿನಿಂದ ಪ್ರಹ್ಲಾದನಿಗೆ ಗುರುಕುಲವಾಸ ಆರಂಭವಾಯಿತು. ಓರಗೆಯ ಮಕ್ಕಳೊಂದಿಗೆ ಬೆರೆತುಕೊಳ್ಳಲು ಬಹಳ ಸಮಯವೇನೂ ಬೇಕಾಗಲಿಲ್ಲ. ಆದರೆ, ಗುರುಗಳು ಹೇಳಿಕೊಡುತಿದ್ದುದೇನೋ, ಇವನು ಕಲಿಯುತಿದ್ದುದೇನೋ ಮಿಕ್ಕೆಲ್ಲಾ ಹುಡುಗರ ರೀತಿ ಒಂದಾದರೆ ಇವನದೇ ಒಂದು. ಇವನ ಹೊಸ ರೀತಿಯನ್ನು ಕಂಡುಕೊಳ್ಳಲು ಚಂಡಾಮರ್ಕರಿಗೂ ಹೆಚ್ಚು ಸಮಯ ಹಿಡಿಸಲಿಲ್ಲ. ಅವರು ದಿನದಿನಕ್ಕೂ ಅವನಮೇಲೆ ಒತ್ತಾಯ ಹೇರತೊಡಗಿದರು. ಆದರೆ, ಅವನ ರೀತಿಯು ತೀರ ವಿಚಿತ್ರ. ಅವರು ಪಕ್ಕದಲ್ಲಿಯೇ ಕೂಡಿಸಿಕೊಂಡು ಪಾಠ

ಹೇಳಿದರೂ ಅದನ್ನು ಇಸಿತೂ ಗಮನಿಸದೆ ವಿಮನಸ್ಕನಾಗಿ ಕುಳಿತುಬಿಡುವನು. ಅನೇಕವೇಳೆ ಎದುರಿಗೆ ಗುರುಗಳಿರುವುದೂ ಸಹ ಮರೆತು ಹೋಗುವುದು)

ಚಂಡಾಮರ್ಕ—(ಭಾವಭರಿತ ಕಂಠದಿಂದ ಪ್ರಹ್ಲಾದನನ್ನು ಕುರಿತು) ಹೀಗಾದರೆ ಹೇಗಪ್ಪಾ ಪ್ರಹ್ಲಾದ ? ನಿನ್ನ ತಂದೆ ಒಂದೇ ಬಾರಿಗೆ ನಮ್ಮಿಬ್ಬರನ್ನೂ ಮುಗಿಸಿಬಿಟ್ಟಾರು !

ಪ್ರಹ್ಲಾದ—(ಸಮಾಧಾನದಿಂದ) ಅದು ಭಗವಂತನ ಇಚ್ಛೆಯೇ ಆಗಿದ್ದ ಪಕ್ಷದಲ್ಲಿ ಯಾರು ತಾನೇ ತಪ್ಪಿಸಬಲ್ಲರು ?

ಚಂಡಾಮರ್ಕ– ಮಗೂ, ಇನ್ನುಮುಂದೆ ಆ ಹೆಸರನ್ನು ನೀನು ಉಚ್ಚರಿಸಬಾರದು ಕಂಡೆಯಾ ? ನಿನ್ನ ತಂದೆಯೇ ಭೂ ಲೋಕೇಶ್ವರ ! ಅವರಿಗಿಂತ ಹಿರಿಯರಾರೂ ಇಲ್ಲ ಈ ಪ್ರಪಂಚದಲ್ಲಿ.

ಪ್ರಹ್ಲಾದ ಹಾಗೆನ್ನುವುದು. ಸ್ವಾರ್ಥದಿಂದ. ವಿಷ್ಣುವು ಸೃಷ್ಟಿಕರ್ತ. ಅವನೇ ಭಗವಂತ ; ಅವನೇ ಲೋಕೇಶ್ವರ, ಅವನಿಗಿಂತ ಹಿರಿಯರಿರುವುದು ಎಲ್ಲಿಯ ತರ್ಕ ?

ಚಂಡಾಮರ್ಕ—(ಸಿಟ್ಟಿನಿಂದ) ಸಾಕು ಸುಮ್ಮನಿರು. ಈ ಉದ್ಧಟತನ ಇನ್ನು ಸೈಸಲಾರೆ. ಈ ತರ್ಕವಿತರ್ಕಗಳು ಬೇಡವೇಬೇಡ. ನಾನು ಹೇಳಿಕೊಡುವ ಪಾಠವನ್ನಷ್ಟು ಮಾತ್ರ ಗಮನಿಸು.

ಪ್ರಹ್ಲಾದ—ನಿಮ್ಮದು ತಪ್ಪು ತಿಳಿವಳಿಕೆ. ಭಗವಂತನನ್ನು ಧ್ಯಾನಿಸುವುದರಿಂದ ಬಾಧಕವೇನೂ ಇರುವುದಿಲ್ಲ. ಜ್ಞಾನವು ಬೆಳೆದು ಭೂಮವಾಗುತ್ತದೆಂದು ನಾನು ಭಾವಿಸಿರುವೆ. ನೀವೂ ಸಹ ಧ್ಯಾನಿಸುವುದು ಒಳ್ಳೆಯದು.

ಚಂಡಾಮರ್ಕ—ನನ್ನನ್ನು ಖಂಡಿತ ಪೇಚಿಗೆ ಸಿಕ್ಕಿಸಬೇಡ. ಈ ವಿಚಾರ ಪ್ರಭುಗಳಿಗೆ ತಿಳಿದು ಬಂದಲ್ಲಿ ನಮ್ಮ ಕತೆ ಒಂದೇ ಬಾರಿಗೆ ಮುಗಿದುಹೋಗುತ್ತದೆ.

ಪ್ರಹ್ಲಾದ—ಅಷ್ಟೊಂದು ಭಯವಾದರೂ ಏಕೆ ?

ಚಂಡಾಮರ್ಕ—ಇಂತಹ ಪ್ರಶ್ನೆಗಳಿಂದ ವ್ಯರ್ಥ ಕಾಲಹರಣ ಮಾಡುವುದಕ್ಕಿಂತ ನಾನು ಹೇಳಿಕೊಡುವ ಪಾಠವನ್ನು ಗಮನಿಸುವುದು ಒಳ್ಳೆಯದು.

ಪ್ರಹ್ಲಾದ—ಅಪ್ಪಣೆ ಗುರುಗಳೇ !

(ಅವನು ಹಾಗೆಂದರೂ ಅವನ ದಿನಚರಿಯಲ್ಲಿ ಅಂತಹ ಬದಲಾವಣೆ ಯೇನೂ ಉಂಟಾಗಲಿಲ್ಲ. ಅವನು ತಾನೊಬ್ಬನೇ ಇದ್ದಾಗಲಂತೂ ಅಂತ ರ್ದೃಷ್ಟಿಯ ವೈಶಾಲ್ಯತೆಗೆ ಸೀಮೆಯೇ ಇರುವುದಿಲ್ಲ. ಕಣ್ಣುಗಳನ್ನು ಮುಚ್ಚಿ ಭಗವಧ್ಯಾನಾಸಕ್ತನಾಗಿ ಬಿಡುವ. ಹಾಗೆ ಎಷ್ಟೊತ್ತಾದರೂ ವೈಯರಿವು ಮೂಡ ದಿರುವಾಗ ಎಬ್ಬಿಸಲು ಪ್ರಯತ್ನಿಸಿ ಸೋತ ಇತರ ಹುಡುಗರು ಗುರುಗಳಿಗೆ ದೂರು ಕೊಡುವರು. ಚಂಡಾಮರ್ಕರು ಭಯ ಭೀತಿಯಿಂದ ಓಡಿಬಂದು ಅಲುಗಿಸಿ ದರೂ, ನೀರು ಚಿಮುಕಿಸಿದರೂ ಎಷ್ಟೋ ವೇಳೆ ಬೇಗನೆ ಎಚ್ಚರವಾಗುತ್ತಲೇ ಇರಲಿಲ್ಲ. ಅನಂತರ ಯಥಾಕ್ರಮ ಅವನ ದಿನಚರಿ ಮುಂದುವರಿಯುವುದು. ಓದು ವಿದ್ಯೆಯಲ್ಲಿ ನಿರಾಸಕ್ತಿ; ಧ್ಯಾನದಲ್ಲಿ ಅತ್ಯಂತ ಆಸಕ್ತಿ; ಬೆದರಿಕೆಗೆ ಜಗ್ಗುವ ವನೂ ಅಲ್ಲ; ಬೇಡಿಕೆಗೆ ಮಣಿಯುವವನೂ ಅಲ್ಲ.

ಚಂಡಾಮರ್ಕರಿಗೆ ಅವನನ್ನು ತಿದ್ದುವ ಬಗೆ ಹಿರಿಯ ಸಮಸ್ಯೆಯನ್ನು ತಂದೊಡ್ಡಿತು. ಅವರು ತೀವ್ರ ಚಿಂತಿತರಾದರೂ ತಮ್ಮ ಪ್ರಯತ್ನವನ್ನು ಇನಿತೂ ಕುಂಠಿತಗೊಳಿಸದೆ ದಿನದಿನಕ್ಕೂ ಹೆಚ್ಚಿನ ತೀವ್ರಾತುರತೆಯಿಂದ ಶ್ರಮಿಸತೊಡಗಿದರು. ಆದರೆ ಆ ಆಸ್ಥೆ ಬಹಳ ಕಾಲ ಉಳಿಯಲಿಲ್ಲ. ದೊರೆ ಎಂಥ ಹೊಣೆಗಾರಿಕೆಯನ್ನು ತನಗೆ ಒಪ್ಪಿಸಿದನೆಂಬುದರ ಅರಿವು ಮೂಡಿ ಎದೆ ತಲ್ಲಣಿಸಿ ಹೋಯಿತು.

ಒಂದು ದಿನ ಇನ್ನೂ ಹೊತ್ತು ಮೇಲೇರುವುದರೊಳಗಾಗಿ ಅರಮನೆಯ ದೂತ ತಲೆಬಾಗಿಲಲ್ಲಿ ಕಾಣಿಸಿಕೊಳ್ಳುವನು. ಅವನನ್ನು ನೋಡುತ್ತಲೂ ಅವರಿಗೆ ಜಂಘಾಬಲವೇ ಬಿದ್ದು ಹೋಯಿತು)

ಚಂಡಾಮರ್ಕ—(ಕಾತರಯುಕ್ತ ಕಂಠದಿಂದ) ಏನಪ್ಪಾ, ಬಂದೆ ?

ದೂತ—ತಮ್ಮನ್ನು ಮಹಾ ಪ್ರಭುಗಳು ಬರಹೇಳಿದ್ದಾರೆ.

ಚಂಡಾಮರ್ಕ—ಏಕೆಂಬುದು ತಿಳಿದಿದೆಯೇ ?

ದೂತ—ಅದು ನನಗೇನೂ ತಿಳಿಯದು ಮಹಾಸ್ವಾಮಿ.

(ಗಂಭೀರ ಪರಿಸ್ಥಿತಿ! ಚಂಡಾಮರ್ಕರಿಗೆ ಹೇಗೆ ಅರಸದ ಮುಂದೆ ಹೋಗಿ ನಿಲ್ಲಲಿ ಎಂಬ ಪ್ರಶ್ನೆ. ಹೋಗದೆ ಇರುವುದಂತೂ ಸಾಧ್ಯವೇ ಇಲ್ಲ. ಆಗಲೇ ಸಮಸ್ತ ಜೀವನದ ನೈರಾಸ್ಯ-ಸಂಕಷ್ಟಗಳ ಕೂರಲುಗು ಕೊರಳನ್ನೇರಿದೆ. ನೆತ್ತರಿನ ತೀವ್ರತರವಾದ ಒತ್ತಡದಿಂದ ನರನರಗಳೂ ಸೀಳಿ ಹೋಗುವಂತಹ ಪ್ರಸಂಗ ಬಂದದ್ದು ದುರದೃಷ್ಟಕರ. ಭಯಭೀತಿಯಿಂದ ಉಡುಗಿ ಜೀವಚ್ಛವ ದಂತೆ ದೂತನನ್ನು ಅವರು ಹಿಂಬಾಲಿಸುವರು. ಹಾದಿ ಸಾಗಿದಂತೆ ಹೃದಯ ಕರಂಡ ಈಗಲೀಗ ಬಿರಿಯುವಷ್ಟು ವ್ಯಾಪ್ತಿಗೆ ಮೀರಿ ಮಿಡಿಯಹತ್ತಿತು. ಮೈಯ್ಯಲ್ಲಿ ಸ್ವೇದಧಾರೆ ಹುಚ್ಚೆದ್ದು ಸುರಿಯಹತ್ತಿತು.

ಇಬ್ಬರೂ ಸಭಾಂಗಣಕ್ಕೆ ಪದಾರ್ಪಣೆ ಮಾಡಿದಾಗಲೇ ಹಿರಣ್ಯಕಶಿಪುವಿನ ದರ್ಶನವಾಯಿತು. ಅಂದು ಅದಾವ ಜನ್ಮದ ಭಾಗ್ಯವೋ ಅವನು ಪ್ರಸನ್ನಮುಖಿ ಯಾಗಿದ್ದುದರಿಂದ ಚಂಡಾಮರ್ಕರಿಗೆ ಹೋದಜೀವ ಹಿಮ್ಮರಳಿದಂತಾಯಿತು. ಆದರೂ ಸಹ ಧೈರ್ಯಮೂಡದೆ ನಾಲಿಗೆ ತೊದಲಿತು.

ಚಂಡಾಮರ್ಕ—(ವೈಬಾಗಿ ನಮಸ್ಕರಿಸಿ) ಈ....ಈದಿನ ನಾ....ನೇ ಬಂದು....ತಮ್ಮನ್ನು ಕಾಣಬೇ....ಕೆಂದಿದ್ದೆ, ಮಹಾಪ್ರಭೂ! ಅಷ್ಟರಲ್ಲಿ.... ತಮ್ಮ....ಕರೆಯೇ ಬಂ... ತು.

ಹಿರಣ್ಯಕಶಿಪು—ಏಕೆ ಯಾವ ಕಾರಣಕ್ಕಾಗಿ?

ಚಂಡಾಮರ್ಕ—ಅದೇ....ಅ....ದೇ. ತಮ್ಮ ಮಕ್ಕ....ಳ....ಸಲುವಾಗಿ!

ಹಿರಣ್ಯಕಶಿಪು—ಅಂತಾದ್ದೇನು?

ಚಂಡಾಮರ್ಕ—ಅವನು....ಪಾಠ....ಪಾ...

(ಮುಂದೆ ಮಾತು ಹೊರಡದೆ ಸುಮ್ಮನಾಗುವರು. ಹೇಗೆ ಆರಂಭಿಸ ಬೇಕೋ ತಿಳಿಯಲಿಲ್ಲ)

ಹಿರಣ್ಯಕಶಿಪು—ಪ್ರಹ್ಲಾದ ಹೇಗಿದ್ದಾನೆ. ವಿದ್ಯಾಭ್ಯಾಸ ಹೇಗೆ ನಡೆಯು ತ್ತಿದೆ? ಸರಿಯಾಗಿ ಹೇಳಿ?

(ಚಂಡಾಮರ್ಕರ ಅಂತರಂಗಿಕ ವ್ಯಾಪ್ಯಾರ ಅಸಹನೀಯ ಪರಿಸ್ಥಿತಿಯಲ್ಲಿ

ಸಿಕ್ಕಿ ಮೈ ತರತರ ನಡುಗತೊಡಗಿತು)

ಚಂಡಾಮರ್ಕ—(ಗಡಬಡಿಸಿ ಕೈಮುಗಿದುಕೊಂಡು) ಆ....ಆ....ವಿಚಾರವಾಗಿಯೇ ತ....ತ....ತಮ್ಮನ್ನು ಕಾಣಬೇಕೆಂದಿದ್ದೆ....ಮಹಾಸ್ವಾಮಿ!

ಹಿರಣ್ಯಕಶಿಪು—ಏನದು ಅಂತಹ ವಿಚಾರ ?

ಚಂಡಾಮರ್ಕ—ಏ....ಏನೆಂದು ಹೇಳಲಿ ಮಹಾಪ್ರಭೋ? ನನ್ನ ನಾ....ನಾಲಿಗೆಯೇ ಬರುವುದಿಲ್ಲ.

ಹಿರಣ್ಯಕಶಿಪು—ಅಂದರೆ....?

ಚಂಡಾಮರ್ಕ—(ಅಳುತ್ತ) ದಯವಿಟ್ಟು....ಕ್ಷಮಿಸಿ....ನನ್ನೊಡೆಯಾ!

ಹಿರಣ್ಯಕಶಿಪು—ಏನದು ಸರಿಯಾಗಿ ಒದರಬಾರದೆ ?

ಚಂಡಾಮರ್ಕ—ರಾಜಕುಮಾರನಿಗೆ....ನಾನು ಹೇ....ಹೇಳಿದ್ದೊಂದೂ ತಿಳಿಯುತ್ತಿಲ್ಲ. ಏ....ಏನು ಮಾಡುವುದೋ....ತಿಳಿಯದು ಮಹಾಸ್ವಾಮಿ!

ಹಿರಣ್ಯಕಶಿಪು—ಈದಿನ ಪ್ರಹ್ಲಾದನನ್ನು ಕರೆಸೋಣವೆಂದುಕೊಂಡಿದ್ದೆ. ಹಾಗಾದರೆ ಒಂದು ತಿಂಗಳು ಹೋಗಲಿ, ಅನಂತರ ನೋಡುವೆ. ಅಷ್ಟರೊಳಗಾಗಿ ಅವನಿಗೆ ಬುದ್ಧಿ ಕಲಿಸಿರಿ. ನೀವು ತುಂಬ ಶ್ರದ್ಧೆ ವಹಿಸಬೇಕು. ತಿಳಿಯಿತೆ ?

ಚಂಡಾಮರ್ಕ—(ಬೆದರಿದ ಹುಲ್ಲೆಯಂತೆ ತನ್ನಲ್ಲಿ ತಾನೇ ಹುದುಗಿ) ಆ....ಯಿತು....ಮಹಾ....ಸ್ವಾಮಿಾ!

(ಆಕ್ಷಣವೇ ಹಿರಣ್ಯಕಶಿಪುವಿಗೆ ಅಡ್ಡಬಿದ್ದು ಅಲ್ಲಿಂದ ಪಾರಾದರು ಚಂಡಾಮರ್ಕ ಉಪಾಧ್ಯಾಯರು. ಅನಂತರ ತಿಂಗಳೊಂದು ಕಳೆಯುವುದರಲ್ಲಿ ಅರಮನೆಯ ದೂತ ಮತ್ತೆ ತಲೆ ಬಾಗಿಲಲ್ಲಿ ಕಾಣಿಸಿಕೊಂಡ)

ಚಂಡಾಮರ್ಕ—ಏನಪ್ಪಾ ಬಂದೆ ?

ದೂತ—ಪ್ರಭುಗಳ ಅಪ್ಪಣೆಯಾಗಿದೆ, ನಿಮ್ಮನ್ನೂ ರಾಜಕುಮಾರನನ್ನೂ ಕರೆತರಲು.

ಚಂಡಾಮರ್ಕ—(ಭಯದಿಂದ ಉಡುಗಿ) ಈಗಲೇ ಕರೆತರಲು

ಹೇಳಿದ್ದಾರೆಯೇ ?

ದೂತ—ಹೌದು ಪಂಡಿತೋತ್ತಮರೇ !

ಚಂಡಾಮರ್ಕ—(ಸ್ವಗತ) ನನಗೆ ಈ 'ಪಂಡಿತೋತ್ತಮ' ಎಂಬ ಬಿರು ದಿಲ್ಲದಿದ್ದರೆ ಸುಖವಾಗಿರುತಿದ್ದೆ. ಈಗ ನನ್ನ ಪಾಂಡಿತ್ಯವೇ ನನ್ನ ಪ್ರಾಣಕ್ಕೆ ಶೂಲ (ಪ್ರಕಾಶ) ಆಗಲಪ್ಪಾ, ಬರುವೆ, ಸ್ವಲ್ಪಹೊತ್ತು ಇರು.

(ಅವರು ಒಳಹೋಗಿ ಪ್ರಹ್ಲಾದನನ್ನು ಕಂಡು....)

ಚಂಡಾಮರ್ಕ—(ಮೃದು ನುಡಿಯಲ್ಲಿ) ಮಗೂ, ಪ್ರಹ್ಲಾದ! ನಿನ್ನ ತಂದೆ ಯಾದ ಲೋಕೇಶ್ವರನಿಂದ ನಮ್ಮಿಬ್ಬರಿಗೂ ಕರೆ ಬಂದಿದೆ ಅವರು ನಿನ್ನ ವಿದ್ಯಾ ಭ್ಯಾಸ ಕ್ರಮವನ್ನು ಪರಿಶೀಲಿಸಲಿದ್ದಾರೆ. ನಾನು ಹೇಳಿಕೊಟ್ಟ ಪಾಠವನ್ನು ಈ ದಿನವಾದರೂ ಅನುಕ್ರಮವಾಗಿ ಒಪ್ಪಿಸಿ ನನ್ನ ಮರ್ಯಾದೆಯನ್ನು ಕಾಪಾಡಪ್ಪಾ.

ಪ್ರಹ್ಲಾದ—ನಾನು ಕಲಿತಿರುವುದನ್ನೆಲ್ಲಾ ಸರಿಯಾಗಿ ಒಪ್ಪಿಸಿಬಿಡುವೆ ಗುರುಗಳೇ !

ಚಂಡಾಮರ್ಕ—ಅಯ್ಯೊ, ಮಗೂ ! ಒಂದಿಷ್ಟು ಉಪಕಾರಮಾಡು. ನೀನು ಕಲಿತಿರುವುದೊಂದೂ ಬೇಡ. ನಾನು ಏನು ಹೇಳಿಕೊಟ್ಟಿದ್ದೇನೋ ಅಷ್ಟು ಮಾತ್ರ....ಅದಕ್ಕಿಂತ ಒಂದಕ್ಷರವನ್ನೂ ಹೊರಹಾಕಬಾರದು !

(ಪ್ರಹ್ಲಾದ ಮಾತಾಡದೆ ತಲೆಯಾಡಿಸಿದ. ಅವನ ಮೊಗಸೆಗಂಗಳಲ್ಲಿ ಭಾವಸ್ಫೂರ್ತಿಯು ಕಳೆಯುಕ್ಕುತಿತ್ತು. ಚಿತ್ತಭಿತ್ತಿಯಲ್ಲಿ ನೆಲೆನಿಂತ ಶ್ರೀ ವಿಷ್ಣು ವಿನ ಹೊರತು ಇನ್ನಾವ ವಿಚಾರಧಾರೆಯೂ ತಲೆಯಲ್ಲಿ ಸುಳಿಯದು. ಅವನ ಗುರುಗಳು ಏನು ಹೇಳಿಕೊಂಡರೋ ಇವನೇನು ಉತ್ತರಿಸಿದನೋ ಅವೆಲ್ಲಾ ಗಾಳಿಯೊಂದಿಗೆ ನಿರಾಯಾಸವಾಗಿ ತೂರಿಹೋದುವು ಧೂಳಿನ ಕಣಗಳಂತೆ.

ಮೂವರೂ ಸ್ವಲ್ಪಹೊತ್ತಿನೊಳಗಾಗಿ ಅಲ್ಲಿಂದ ಹೊರಟರು. ಅರಮನೆ ಯನ್ನು ತಲ್ಪಲು ಹೆಚ್ಚು ಸಮಯವೇನೂ ಹಿಡಿಯಲಿಲ್ಲ. ಪ್ರಹ್ಲಾದ ತಂದೆ ಯನ್ನು ನೋಡಿದಕೂಡಲೇ ಓಡಿ ಬಂದು ತೊಡೆಯನ್ನೇರಿ ಕುಳಿತುಕೊಂಡು

ಕೆಂದುಟಿಗಳಲ್ಲಿ ಎಳೆನಗುವನ್ನು ಸೂಸುವನು. ಹಿರಣ್ಯಕಶಿಪು ಪಿತೃಸಹಜವಾದ ಪ್ರೇಮದಿಂದ ಅಪ್ಪಿ ಮುದ್ದಾಡಿದಾಗ ಮುಖಮಂಡಲ ಸಂಭ್ರಮದಿಂದ ಕಳೆಯೇರಿತು)

ಹಿರಣ್ಯಕಶಿಪು—ಮಗೂ, ಪ್ರಹ್ಲಾದ ! ನೀನು ಶಾಲೆಯಲ್ಲಿ ಚೆನ್ನಾಗಿ ಓದುತ್ತಿರುವೆಯಷ್ಟೆ ?

ಪ್ರಹ್ಲಾದ—ಸಡಗರದಿಂದ ಹೌದು ಅಪ್ಪಾಜಿ!

ಹಿರಣ್ಯಕಶಿಪು—ಏನೇನು ಕಲಿತಿರುವೆ ?

ಪ್ರಹ್ಲಾದ—ಕಲಿಯಬೇಕಾದುದನ್ನು ಚೆನ್ನಾಗಿ ಕಲಿಯುತ್ತಿರುವೆ

ಹಿರಣ್ಯಕಶಿಪು—ಅಂದರೆ....?

ಪ್ರಹ್ಲಾದ—ಅಪ್ಪಾಜೀ....! ಶ್ರೀ ವಿಷ್ಣುವೇ ಜಗತ್ತಿಗೆ ಒಡೆಯ. ಅವನನ್ನು ತಿಳಿಯುವುದೇ ಬದುಕಿನ ಮರ್ಮ.

(ಆ ಮಾತನ್ನು ಕೇಳಿದೊಡನೆಯೇ ಹಿರಣ್ಯಕಶಿಪು ಬೆಂಕಿಯನ್ನು ಮುಟ್ಟಿದಂತೆ ಬೆಚ್ಚಿಬೀಳುವನು. ಚಂಡಾಮರ್ಕರು ಆಕ್ಷಣವೇ ಆಪಾದಮಸ್ತಕವೂ ಕಂಪಿಸುತ್ತ ತಲೆತಗ್ಗಿಸಿದರು. ಮುಖ–ಮೈಗಳಲ್ಲಿ ಬೆವರು ಬಸಿಯಹತ್ತಿತು)

ಹಿರಣ್ಯಕಶಿಪು—ಏನಿದು ? ಏನೆಂದೆ ? ನಿನಗೆ ಇದನ್ನು ಹೇಳಿಕೊಟ್ಟವರಾರು ?

(ಮಗನನ್ನು ಪ್ರಶ್ನಿಸುತ್ತಲೇ ಚಂಡಾಮರ್ಕರನ್ನು ದುರದುರನೆ ದುರುಗಟ್ಟಿ ನೋಡುವನು. ಕೆಂಗಣ್ಣುಗಳು ಕಿಡಿಗಳನ್ನು ಕಾರಿದುವು)

ಪ್ರಹ್ಲಾದ—(ವಿನಯ ಪೂರ್ವಕವಾಗಿ) ಯಾರೂ ಹೇಳಿಕೊಡಲಿಲ್ಲ ; ನಾನೇ ತಿಳಿದುಕೊಂಡೆ ಅಪ್ಪಾಜಿ

(ಆಗ ಚಂಡಾಮರ್ಕರ ಜೀವ ತುಸು ಹಗುರವಾಗಿ ಉಸಿರಾಡಿತು)

ಹಿರಣ್ಯಕಶಿಪು—(ಮಗನನ್ನು ತೊಡೆಯಿಂದ ತಳ್ಳಿ, ಕೋಪದಿಂದ) ಯಾರೂ ಹೇಳಿಕೊಡದೆ ನೀನೇ ಕಲಿಯುವುದೆಂದರೆ ಹೇಗೆ ?

ಪ್ರಹ್ಲಾದ—(ಗಂಭೀರ ದನಿಯಲ್ಲಿ) ಹೌದಪ್ಪಾ... ನಾನೇ ಕಲಿತೆ. ನನಗೆ ಯಾರೂ ಹೇಳಿಕೊಡಲಿಲ್ಲ. ಅದೆಲ್ಲಾ ನನಗೇ ಗೊತ್ತು !

(ಆದರೂ ಹಿರಣ್ಯಕಶಿಪುವಿನ ಕ್ರೂರದೃಷ್ಟಿ ಚಂಡಾಮರ್ಕರ ಮೇಲೆ ಶೂಲದಂತೆ ಎರಗಿತು)

ಚಂಡಾಮರ್ಕ—(ತಕ್ಷಣ ಕೈಗಳನ್ನು ಜೋಡಿಸಿಕೊಂಡು ಅತೀ ದೈನ್ಯತೆಯಿಂದ) ಮಹಾರಾಜರು ದಯಮಾಡಿ ಕ್ಷಮಿಸಬೇಕು. ನಾ....ನು ಹೇಳಿಕೊಟ್ಟ ಪಾಠ....ಅವನಿಗೆ ಎಳ್ಳ....ಷ್ಟೂ ಹತ್ತಲಿಲ್ಲ. ಅವನ ರೀತಿ....ನೀತಿಗಳೇ....ಬಹಳ ವಿಚಿತ್ರ. ನಾನು ಎಷ್ಟೆಷ್ಟು ಹೇಳಿಕೊಟ್ಟರೂ ಪ್ರಯೋ....ಜನವಿಲ್ಲವಾಗಿದೆ.... ಕ್ಷಮೆ ಇರಲಿ, ನಾನದಕ್ಕೆ ಕಿಂಚಿತ್ತೂ.... ಕಾರಣನಲ್ಲ....

ಹಿರಣ್ಯಕಶಿಪು—(ಸಿಟ್ಟಿನಿಂದ ಘರ್ಜಿಸುವನು) ಈ ಕೆಟ್ಟ ಅಭ್ಯಾಸ ಮಾಡಿಸಲೆಂದು ನಿಮ್ಮಲ್ಲಿಗೆ ಕಳುಹಿಸಿದೆನೇ ? ಇದೆಂತಹ ವಿಪರ್ಯಾಸ? ಚಂಡಾಮರ್ಕರೇ ! ಇನ್ನು ಮುಂದೆ ಎಚ್ಚರಿಕೆ ! ಇನ್ನೊಮ್ಮೆ ಕರೆಸಿದಾಗ ಅವನ ಜಾಣ್ಮೆ ನಮಗೆ ತಕ್ಕುದಾಗಿರಬೇಕು, ತಿಳಿಯಿತೇ ?

(ಆ ಮಾತಿಗೆ ಕುಸಿದು ಬೀಳುವಷ್ಟು ತತ್ತರಿಸಿದ ಚಂಡಾಮರ್ಕರು ಹೆಚ್ಚು ಹೇಳಿಕೊಳ್ಳಲು ಸಾಧ್ಯವಾಗದೆ ಗಡಗಡ ನಡುಗುತ್ತ ಕೈಗಳನ್ನು ಜೋಡಿಸಿಕೊಂಡು....)

ಚಂಡಾಮರ್ಕ—ಅಪ್ಪಣೆ ಮಹಾ ಪ್ರಭೂ....!

ಹಿರಣ್ಯಕಶಿಪು—ನಮ್ಮ ಅಪ್ಪಣೆಯನ್ನು ಮೀರಿದರೆ ಏನಾಗುವುದು ಎಂಬುದನ್ನು ಬಲ್ಲಿರಾ ? ಎಚ್ಚರಿಕೆ !

(ತೋರು ಬೆರಳೆತ್ತಿ ತೋರಿ ಮತ್ತೆ ಮತ್ತೆ ಎಚ್ಚರಿಕೆ ನೀಡುವನು. ಅಸ್ಖಲಿತ ಕಂಠ ರೋಷರುದ್ಧವಾಗಿತ್ತು)

ಚಂಡಾಮರ್ಕ—ಕ್ಷಮಿಸಿ ಮಹಾಪ್ರಭೂ....! ನಿಮ್ಮ ಮಗು ನನ್ನ.... ಮಾತು....ಕೇಳುವುದಿಲ್ಲ !

ಹಿರಣ್ಯಕಶಿಪು—(ಪ್ರಹ್ಲಾದನ ಕಡೆ ತಿರುಗಿ) ಗುರುಗಳು ಹೇಳಿದಂತೆ ನೀನು ಕೇಳಬೇಕು ತಿಳಿಯಿತೇ ?

ಪ್ರಹ್ಲಾದ—ಆಗಬಹುದು ಅಪ್ಪಾಜಿ....!

ಹಿರಣ್ಯಕಶಿಪು—ಇಲ್ಲದಿದ್ದಲ್ಲಿ ನಿನ್ನನ್ನು ಸಿಗಿದು ತೋರಣ ಕಟ್ಟಿಯೇನು! ಜೋಕೆ !

ಪ್ರಹ್ಲಾದ—ಆಯಿತು ಅಪ್ಪಾಜಿ. (ಮೆಲು ದನಿಯಲ್ಲಿ) ನಾನು ಅಂತಃ ಪುರಕ್ಕೆ ಹೋಗಿ ಅಮ್ಮನನ್ನು ನೋಡಿಕೊಂಡು ಹೋಗುವೆ. ನನಗೆ ಅಪ್ಪಣೆ ಯಾಗಲಿ.

ಹಿರಣ್ಯಕಶಿಪು—ಆಗಬಹುದು, ಹೋಗು.

(ಚಂಡಾಮರ್ಕರು ಆಕ್ಷಣವೇ ಹೊರ ಹೋಗಿ ಹೆಬ್ಬಾಗಿಲಿನಲ್ಲಿ ಕಾದಿದ್ದರು. ಧ್ರುವ ಕುಮಾರ ನೇರವಾಗಿ ಅಂತಃಪುರಕ್ಕೆ ಹೋದಾಗ ತಾಯಿಗೆ ಅವನನ್ನು ನೋಡಿ ಪರಮಾನಂದವಾಯಿತು. ಅಪ್ಪಿ ಮುದ್ದಾಡಿದಳು. ಮಿಂಚು ಗಣ್ಣುಗಳಲ್ಲಿ ಆನಂದ ಬಾಷ್ಪಗಳು ತುಂಬಿ ಬಂದುವು)

ತಾಯಿ—ಮಗೂ, ನನ್ನ ಪ್ರಾಣ ಪದಕವೇ ! ಹೇಗೆ ಪಾಠ ಕಲಿಯುತಿದ್ದೀ? ನಿನ್ನ ವಿದ್ಯಾಭ್ಯಾಸ ಚೆನ್ನಾಗಿ ನಡೆಯುತ್ತಿದೆಯಲ್ಲವೇ ?

ಪ್ರಹ್ಲಾದ—ಹೌದಮ್ಮಾ !

ತಾಯಿ—ಮತ್ತೇಕೆ ಮಗೂ, ಪ್ರಭುಗಳ ರೋಷರುದ್ಧ ಕಂಠ ಕೇಳಿ ಬರುತಿತ್ತಲ್ಲ ?

ಪ್ರಹ್ಲಾದ—ಅವರ ಸ್ವಭಾವವೇ ಹಾಗೆ. ಅದೇನು ನಿನಗೆ ಹೊಸದೇ ?

(ಪ್ರಸನ್ನ ಮುಖದಲ್ಲಿ ಮುಗುಳು ಚೆಲ್ಲುವನು)

ತಾಯಿ—ಮಗೂ, ಗುರುಗಳಿಗೆ ವಿಧೇಯನಾಗಿರು.

ಪ್ರಹ್ಲಾದ—ಆಗಬಹುದು ಅಮ್ಮಾ !

ತಾಯಿ—ಪಾಠ ಪ್ರವಚನಗಳಲ್ಲಿ ಉದಾಸೀನನಾಗದೆ ನಿನ್ನ ವಿದ್ಯಾಭ್ಯಾಸ ವನ್ನು ಬೇಗನೆ ಮುಗಿಸಿಬಿಡು.

ಪ್ರಹ್ಲಾದ—ಆಗಲಿ, ಹೊರಗಡೆ ನನಗಾಗಿ ಗುರುಗಳು ಕಾದಿದ್ದಾರೆ. ನಾನಿನ್ನು ಹೊರಡುವೆ. ನನಗೆ ಅಪ್ಪಣೆ ಕೊಟ್ಟರೆ ಒಳ್ಳೆಯದು.

ತಾಯಿ—ಆಗಲಿ ಮಗುವೆ ಹೋಗಿ ಬಾ.

(ಮಗುವನ್ನು ಮುದ್ದಿಟ್ಟು ಬೀಳ್ಕೊಳ್ಳುವಳು)

(ಪರದೆ ಬೀಳುವುದು)

ದೃಶ್ಯ—೪

(ಗುರುಕುಲದಲ್ಲಿ ಪ್ರಹ್ಲಾದನಿಗೆ ವಿಶೇಷ ಶಿಕ್ಷಣ ಆರಂಭವಾಯಿತು. ಹೊರಗೆಲಸವಿದ್ದಾಗ ವಿನಾ ಇನ್ನೆಲ್ಲಾ ಸಮಯದಲ್ಲೂ ಚಂಡಾಮರ್ಕರ ಕೈಗೂ ಬಾಯಿಗೂ ಬಿಡುವೆಂಬುದೇ ಇಲ್ಲ. ಮನಸ್ಸಿಗೆ ಸ್ವಾಸ್ಥ್ಯವಂತೂ ಇಲ್ಲವೇ ಇಲ್ಲ. ಚಿಂತೆ-ಭಯ—ಸಂಕಟಗಳ ಒಕ್ಕೂಟವಾದ ಮನಃಪ್ರಾಣಗಳು ಮಿಲಿ ಮಿಲಿಗೊಳ್ಳುತ್ತಿದ್ದರೆ, ಮೈಯಲ್ಲಿ ಅಡಿಯಿಂದ ಮುಡಿಯವರೆಗೆ ಬೆವರು ಧಾರೆ ಧಾರೆಯಾಗಿ ಸುರಿಯುವುದು. ಅವರು ಅತೀವ ಸಂಕಷ್ಟದಿಂದ ದುಡಿದು. ನಿರಾಸೆಯ ಬುತ್ತಿಯನ್ನು ಉಂಡು ಹಣ್ಣು ಹಣ್ಣಾಗುವರು)

ಚಂಡಾಮರ್ಕ—(ಪ್ರಹ್ಲಾದನನ್ನು ಬಳಿಯಲ್ಲಿ ಕೂರಿಸಿಕೊಂಡು)ಮಗೂ, ಪ್ರಹ್ಲಾದ! ನೀನು ರಾಜಕುಮಾರ. ನಮ್ಮ ಶಾಲೆಯ ಎಲ್ಲಾ ಮಕ್ಕಳಿಗಿಂತ ಓದು—ವಿದ್ಯೆಗಳಲ್ಲಿ ಮುಂದಿರಬೇಕು. ನಿನ್ನ ತಂದೆಯ ಆಶಯವೂ ಅದೇ. ಅವರೇ ನಿನಗೆ ಸ್ವತಃ ಹಾಗೆಂದು ಹೇಳಿದ್ದಾರೆ. ಅವರ ಮಾತನ್ನು ನೀನು ಮಾನಿಸಲೇಬೇಕು.

ಪ್ರಹ್ಲಾದ—(ಮಿಂಚುಗಣ್ಣುಗಳನ್ನು ಅರಳಿಸಿ) ಆಗಲಿ, ಗುರುಗಳೇ!

ಚಂಡಾಮರ್ಕ—ನಿನ್ನಿಂದ ನಮ್ಮ ಗುರುಕುಲದ ಕೀರ್ತಿ ಅಖಂಡವಾಗಿ ಬೆಳಗಬೇಕು. ಎಲ್ಲರೂ ನಿನ್ನನ್ನು ಮೆಚ್ಚುವಂತೆ ಓದಿ, ಸಕಲ ವಿದ್ಯಾಪಾರಂಗತ ನಾಗಿ ನಿನ್ನ ತಂದೆಗೆ ಸಂತೋಷವನ್ನುಂಟು ಮಾಡಬೇಕು, ತಿಳಿಯಿತೇ? ಇಂದಿಗೆ ನಿನ್ನ ವಿಷ್ಣು ಪೂಜೆಯ ಹಾಳು ಹವ್ಯಾಸವನ್ನು ಬಿಟ್ಟು ನಮ್ಮದಿಯ ಜೀವನ ನಡೆಸುವ ಹಾದಿ ಹಿಡಿ.

(ಒಡಲಲ್ಲಿ ಕೋಪ–ತಾಪಗಳು ಕುದಿಯುತ್ತಿದ್ದರೂ ನಾಟಕೀಯವಾಗಿ ತಲೆಯನ್ನು ನೇವರಿಸಿ ಬಲ್ಮೆಯನ್ನು ತೋರಿ ಪ್ರೋತ್ಸಾಹಿಸಿದರು ಚಂಡಾಮರ್ಕ ಗುರುಗಳು)

ಪ್ರಹ್ಲಾದ—(ಅನ್ಯಮನಸ್ಕನಾಗಿ) ಆಗಬಹುದು.

ಚಂಡಾಮರ್ಕ—ಖಂಡಿತ ನನ್ನ ಮಾತು ಕೇಳುತ್ತೀಯಷ್ಟೆ?

(ಒತ್ತಾಯಿಸುವರು)

ಪ್ರಹ್ಲಾದ—ಕೇಳುವೆ, ಗುರುಗಳೇ!

ಚಂಡಾಮರ್ಕ—ನಾನು ಹೇಳಿಕೊಟ್ಟ ಪಾಠವನ್ನು ಯಥಾಪ್ರಕಾರ ನಿನ್ನ ತಂದೆಗೆ ಒಪ್ಪಿಸುತ್ತೀಯಷ್ಟೇ?

ಪ್ರಹ್ಲಾದ—ಆಗಲಿ, ಗುರುಗಳೇ!

ಚಂಡಾಮರ್ಕ—ಹಾಗಾದರೆ, ನಾನೀಗ ಹೇಳಿಕೊಟ್ಟ ಪಾಠವನ್ನು ಸರಿಯಾಗಿ ಅಭ್ಯಾಸಮಾಡಿ ಸಂಜೆಯಲ್ಲಿ ನನಗೆ ಒಪ್ಪಿಸಬೇಕು, ಆಯಿತೇ?

ಪ್ರಹ್ಲಾದ—(ಸಮಾಧಾನ ಪೂರ್ವಕವಾಗಿ) ಆಯಿತು ಗುರುಗಳೇ!

(ಚಂಡಾಮರ್ಕರು ಅದೇ ಪಾಠವನ್ನು ಶಿಷ್ಯನಿಗೆ ಅತ್ಯಂತ ಶ್ರದ್ಧಾಪೂರ್ವಕವಾಗಿ ಹಲವಾರುಬಾರಿ ಹೇಳಿಕೊಟ್ಟು ಹೊರಹೋದರು. ಪ್ರಹ್ಲಾದ ಅವರೊಂದಿಗೆ ಓದುವುದಾಗಿ ಒಪ್ಪಿಕೊಂಡಿದ್ದೇನೋ ಸರಿ. ಅವರು ಹೊರಹೋದರೋ ಇಲ್ಲವೋ ಆ ವಿಚಾರಶ್ರದ್ಧೆ ಅವನಿಗರಿಯದಂತೆ ಮನಃಪಟಲದಿಂದ ಕ್ಷಣ ಮಾತ್ರದಲ್ಲಿ ಸಂಪೂರ್ಣ ಅಳಿಸಿಯೇ ಹೋಯಿತು. ಅವನು ತನ್ನ ಭಕ್ತಿಮುಗ್ಧ ಮನವನ್ನು ಶ್ರೀ ವಿಷ್ಣು ಧ್ಯಾನದಲ್ಲಿ ತೀವ್ರ ನೆಟ್ಟು ನಿಶ್ಚಿಂತನಾಗಿಬಿಡುತ್ತಾನೆ. ಹಾಗೆ ಅದೆಷ್ಟುಹೊತ್ತು ನಿಶ್ಶಬ್ದವಾಗಿ–ನಿರಾತಂಕವಾಗಿ ಉರುಳಿಹೋಯಿತೋ ಅದನ್ನು ಶ್ರೀ ವಿಷ್ಣುವೇ ಬಲ್ಲ. ಹೊರಹೋದ ಗುರುಗಳು ಮನೆಗೆ ಹಿಂದಿರುಗುವವರೆಗೂ ಅವನು ಕುಳಿತಲ್ಲಿಂದ ಅಲುಗಿಯೇ ಇರಲಿಲ್ಲ ಬಹುಶಃ. ಅವರು ಒಳ ಬಂದು ಶಿಷ್ಯನ ಮನಸ್ಥಿತಿಯನ್ನು ಅರಿತೊಡನೆಯೇ ಅವರಿಗೆ ಎಂದಿನ ಅನುಮಾನ ಸಹಜವಾಗಿ ಮೂಡಿತು. ಆಗ ಅತೀವ ಆತಂಕದಿಂದ....)

ಚಂಡಾಮರ್ಕ—ಇದೇನಪ್ಪಾ, ಪಾಠ ಓದಿದ್ದೀಯೋ, ಇಲ್ಲವೋ?

ಪ್ರಹ್ಲಾದ—(ವಿನಯಪೂರ್ವಕವಾಗಿ) ಓದುವೆ, ಗುರುಗಳೇ!

ಚಂಡಾಮರ್ಕ—ಇಷ್ಟೊತ್ತೂ ಏನು ಮಾಡುತಿದ್ದೆ? ಏಕೆ ಓದಲಿಲ್ಲ? ನಾನು ನಿನಗೆ ಹೇಳಿದ್ದೇನು?

ಪ್ರಹ್ಲಾದ—ಧ್ಯಾನದಲ್ಲಿ ಮರೆತುಬಿಟ್ಟೆ ಎನಿಸುತ್ತೆ.

ಚಂಡಾಮರ್ಕ—ಇದು ಶುದ್ಧ ತಪ್ಪು ಎಂಬುದು ಇನ್ನೂ ನಿನ್ನ ಗಮನಕ್ಕೆ ಬರಲಿಲ್ಲವೆ?

(ಪ್ರಹ್ಲಾದ ಏನೂ ಹೇಳಲಾರದೆ ಸುಮ್ಮನಾಗುವನು. ಮುಖಬಿಂಬ ಭಾವನೋಜ್ವಲತೆಯಿಂದ ಬೆಳಗುವುದು)

ಚಂಡಾಮರ್ಕ—ಪ್ರಹ್ಲಾದ, ಇದೆಲ್ಲಾ ಖಂಡಿತ ಕೂಡದು! ನೀನು ಇಲ್ಲಿಗೆ ಬಂದಿರುವುದು ಓದುವಿದ್ಯೆ ಕಲಿಯುವುದಕ್ಕಾಗಿ. ಇಲ್ಲಿ ಕೇಳು! ನೀನು ಇಲ್ಲಿಂದ ಅರಮನೆಗೆ ಹಿಂದಿರುಗಿದ ನಂತರ ನಿನ್ನ ಇಚ್ಛಾನುಸಾರ ನಡೆಯಬಹುದು. ಅಲ್ಲಿಯತನಕ ನಾನು ಹೇಳಿದಂತೆ ನೀನು ಕೇಳಲೇಬೇಕು ತಿಳಿಯಿತೇ?

ಪ್ರಹ್ಲಾದ—ಇನ್ನು ನಾನು ಓದಿಕೊಳ್ಳುವೆ ಗುರುಗಳೇ!

ಚಂಡಾಮರ್ಕ—ನೀನು ಹೀಗೆ ಅಲ್ಪಸಲ್ಪ ಓದಿಕೊಂಡರೆ ಏನೇನೂ ಸಾಲದು.

(ಕಂಠಸ್ವರ ಕಟುವಾಗಿ ಹೊರಬಿದ್ದೊಡನೆ ಪ್ರಹ್ಲಾದ ಹುಬ್ಬೆತ್ತಿ ಅವರನ್ನೇ ಕೆಲವು ಕ್ಷಣ ವಿಶಾದಪೂರ್ಣಭಾವನೆಯಿಂದ ನಿಟ್ಟಿಸುವನು. ಕಣ್ಣುಗಳಲ್ಲಿ ಭಾವಸ್ಫೂರ್ತಿಯ ಕಳೆ ಮಿಂಚುವುದು)

ಚಂಡಾಮರ್ಕ—ನೀನೇ ನನ್ನ ಪ್ರಾಣಕ್ಕೆ ಶೂಲ! ನಿನ್ನ ತಂದೆ ನಮ್ಮಿಬ್ಬರನ್ನೂ ಒಂದೇ ಕ್ಷಣದಲ್ಲಿ ಮುಗಿಸಿಬಿಟ್ಟಾರು! ಹುಡುಗಾಟ ಸರಿಯಲ್ಲ, ಜೋಕೆ!

(ಪ್ರಹ್ಲಾದ ಮರು ಮಾತನಾಡದೆ ತಲೆಬಾಗುವನು)

ಚಂಡಾಮರ್ಕ—ಹೋಗಲಿ, ಹೀಗೆ ಬಾ.

(ಪ್ರಹ್ಲಾದ ಎದ್ದು ಅವರಿದ್ದಲ್ಲಿಗೆ ಹೋಗುವನು)

ಚಂಡಾಮರ್ಕ—ಇನ್ನಾದರೂ ನಾವು ಹೇಳಿದಂತೆ ಕೇಳು! ನಾನೂ ನಿನ್ನ ತಂದೆಯೂ ಶ್ರಮಿಸುತ್ತಿರುವುದು ನಿನ್ನ ಶುಭೋದಯಕ್ಕಾಗಿ.

ಪ್ರಹ್ಲಾದ—ಆಗಲಿ, ಗುರುಗಳೇ! ನಿಮ್ಮ ಮಾತು ಕೇಳುವೆ.

ಚಂಡಾಮರ್ಕ—ಇಗೋ ಹೀಗೆ ಬರೆ ನೋಡೋಣ; ಓಂ ಹಿರಣ್ಯಾಯ ನಮಃ.

(ಪ್ರಹ್ಲಾದ ಅವರ ಬರವಣಿಗೆಯನ್ನು ಕಣ್ಣಿಟ್ಟು ನೋಡಿದರೂ ಏನೂ ಹೇಳಲಿಲ್ಲ. ಮುಖಬಿಂಬ ಪರಿಮ್ಲಾನವಾಯಿತು)

ಚಂಡಾಮರ್ಕ—ಎಲ್ಲಿ, ಹೀಗೆಯೇ ಇದರ ಕೆಳಗಡೆ ಬರೆಯಪ್ಪಾ.

(ಅವನ ಕೈಗೆ ಹಲಗೆ-ಬಳಪವನ್ನು ನೀಡಿ ಅವನು ಬರೆಯುವುದನ್ನು ನೋಡತೊಡಗಿದರು. ಓಂ ಎಂಬ ಪದವಿನ್ಯಾಸ ಸರಿಯಾಗಿ ಮೂಡಿಬಂದಾಗ ಚಂಡಾಮರ್ಕರಿಗೆ ಸಂತಸ ಉಂಟಾಯಿತು. ಮುಂದಿನ ಪದವನ್ನು ಆಸಕ್ತಿಯಿಂದ ನೋಡತೊಡಗಿದರು. ಮುಂದೆ 'ಮಹಾವಿಷ್ಣವೇ ನಮಃ' ಎಂದು ಬರೆದು ಪೂರೈಸಿದ್ದಾನೆ ಪ್ರಹ್ಲಾದ. ಆಗ ಅವರಿಗುಂಟಾದ ಕೋಪತಾಪಗಳು ಅಷ್ಟಿಷ್ಟಲ್ಲ. ಅವನ ರಟ್ಟೆಯನ್ನು ಬಿಗಿಹಿಡಿದು ಸಿಟ್ಟಿನಿಂದ ಗುಡುಗಿದರು. ಕಣ್ಣು ಮುಖಗಳು ರಂಗು ತಳೆದಿದ್ದವು)

ಚಂಡಾಮರ್ಕ—ಎಲಾ. ಮೂರ್ಖಾ! ನಾನೇನು ಬರೆದೆ? ನೀನೇನು ಬರೆದಿದ್ದಿ? ನಿನಗೆ ಸ್ವಲ್ಪವಾದರೂ ಬುದ್ಧಿ ಇದೆಯೆ? ಅಥವಾ ವಿವೇಚನೆ ಇದೆಯೇ?

(ಪ್ರಹ್ಲಾದ ಆ ಮಾತಿನಿಂದ ಸ್ವಲ್ಪವೂ ವಿಚಲಿತನಾಗಲಿಲ್ಲ. ಹೃದಯ ನಾಡಿ ಶಾಂತಭಾವದಿಂದ ಮಿಡಿಯುತಿತ್ತು)

ಚಂಡಾಮರ್ಕ--ಇದೇನೋ ಇದು?

(ಕಪ್ಪು ಹಲಗೆಯನ್ನು ಮುಖಕ್ಕೆ ತಿವಿಯುವಂತೆ ಹಿಡಿದರು)

ಪ್ರಹ್ಲಾದ—ಏನಾಗಿದೆ ಗುರುಗಳೆ! ಇದರಲ್ಲೇನಿದೆ ತಪ್ಪು?

ಚಂಡಾಮರ್ಕ—ನಾನೇನು ಬರೆದಿದ್ದೇನೆ ಓದು !

ಪ್ರಹ್ಲಾದ—ನಾನು ಬರೆದಿರುವುದನ್ನು ಮೊದಲು ಓದುವೆ ಕೇಳಿ. ಇದು ಸುಶ್ರಾವ್ಯ, ‘ ಓಂ ಮಹಾವಿಷ್ಣವೇ ನಮಃ ’

ಚಂಡಾಮರ್ಕ—(ಸಿಟ್ಟಿನಿಂದ) ಇದನ್ನು ನಿನಗೆ ಹೇಳಿಕೊಟ್ಟವರಾರು ?

ಪ್ರಹ್ಲಾದ—ನನ್ನ ಅಂತರಾತ್ಮ ?

ಚಂಡಾಮರ್ಕ—ಹೋಗಲಿ, ನಾನು ಬರೆದಿದ್ದನ್ನಾದರೂ ಓದು !

ಪ್ರಹ್ಲಾದ—(ಸಣ್ಣಗೆ ತಲೆಯಾಡಿಸುತ್ತ) ಕ್ಷಮಿಸಿಗುರುಗಳೇ! ನಾನದನ್ನು ಓದಲಾರೆ. ನನಗದು ಖಂಡಿತ ಇಷ್ಟವಿಲ್ಲ.

ಚಂಡಾಮರ್ಕ—ಹಾಗೆಂದರೆ ಹೇಗೆ ? ಇಲ್ಲಿಗೇಕೆ ಬಂದೆ ?

ಪ್ರಹ್ಲಾದ—ವಿದ್ಯೆ ಕಲಿಯುವುದಕ್ಕೆ.

ಚಂಡಾಮರ್ಕ—(ಕರ್ಕಶವಾಗಿ) ನೀನು ಕಲಿಯುತ್ತಿರುವುದೇನು ? ಅರ ಮನೆಯಲ್ಲೇ ನೀನದನ್ನು ಕಲಿಯಬಹುದಾಗಿತ್ತಷ್ಟೆ? ಇಲ್ಲಿಗೇಕೆ ಬಂದು ನನ್ನ ಪ್ರಾಣವನ್ನು ತಿನ್ನುತ್ತಿದ್ದಿ ?

(ಪ್ರಹ್ಲಾದ ಸುಮ್ಮನೆ ಯೋಚಿಸುವನು. ಏನು ಹೇಳಲೂ ಮನಸ್ಸಾಗ ಲಿಲ್ಲ. ಎಳೆ ಹೃದಯ ನೂರಾರು ವಿಧದಲ್ಲಿ ಹುಯ್ಯಲಿಡುತಿತ್ತು)

ಚಂಡಾಮರ್ಕ—ಏಕೆ ಸುಮ್ಮನಿದ್ದಿ ಮಾತಾಡು !

ಪ್ರಹ್ಲಾದ—(ಸಮಾಧಾನದಿಂದ)ನಾನು ಕಲಿಯಬೇಕಾದುದನ್ನು ಕಲಿ ಯುತ್ತಿರುವೆ.

ಚಂಡಾಮರ್ಕ—(ತಲೆಯಾಡಿಸುತ್ತ) ಅದೆಲ್ಲಾ ಇರಲಿ, ನಾನು ಹೇಳಿ ಕೊಟ್ಟಿದ್ದನ್ನು ಮಾತ್ರ ನೀನು ಕಲಿಯಬೇಕು.

ಪ್ರಹ್ಲಾದ—ಅದು ಭಗವಂತನ ಸ್ತೋತ್ರವಲ್ಲ.

(ಆ ಮಾತು ಕೇಳಿ ಚಂಡಾಮರ್ಕರ ಎದೆಗುಂಡಿಗೆ ಬಿರಿದಂತಾಯಿತು)

ಚಂಡಾಮರ್ಕ—ಅಯ್ಯೋ, ನಿನಗೇಕೆ ಬಂತು ಈ ದುರ್ಬುದ್ಧಿ ? ಇದನ್ನು ಕೇಳಿದರೆ ಮಹಾರಾಜರು ಏನೆಂದಾರು ? ನಿನಗೆ ಅವರ ಭಯ ಸ್ವಲ್ಪವೂ ಇಲ್ಲ ವಲ್ಲಾ ? ಮುಂದೆ ನಮ್ಮ ಗತಿಯೇನು ?

(ಪ್ರಹ್ಲಾದನು 'ಅಷ್ಟೇ ತಾನೆ ?' ಎಂಬಂತೆ ಸುಮ್ಮನಾಗುವನು. ಯಾವ ಪ್ರತಿಕ್ರಿಯೆಯನ್ನೂ ತೋರ್ಪಡಿಸಲಿಲ್ಲ)

ಚಂಡಾಮರ್ಕ—(ತೀವ್ರ ಅಸಮಾಧಾನದಿಂದ) ಲೋ, ಕೆಟ್ಟ ಹುಡುಗ ! ನೀನು ಇಂದಿನಿಂದ ನಾನು ಹೇಳಿದಂತೆ ಕೇಳಿದರೆ ಸರಿ; ಇಲ್ಲದಿದ್ದರೆ ನಿನಗೆ ಸರಿಯಾಗಿ ಬುದ್ಧಿ ಗಲಿಸುವೆ ! ಇಷ್ಟು ದಿನ ಇನ್ನೂ ಹೊಸಬ ; ಇಂದಲ್ಲ ನಾಳೆ ಕಲಿಯುತ್ತಾನೆ ಎಂಬ ಯೋಚನೆ ಇತ್ತು; ಇನ್ನು ಹಾಗಾಗಲಾರದು ತಿಳಿಯಿತೇ?

(ಅವನು ಅದಕ್ಕೂ ಮಾತಾಡದೆ ಮೊಂಡನಂತೆ ನೋಡುತ್ತಾನೆ)

ಚಂಡಾಮರ್ಕ—ಇಗೋ ಈ ರೀತಿ ತಿದ್ದು. ಓಂ ಹಿರಣ್ಯಾಯ ನಮಃ.

ಪ್ರಹ್ಲಾದ ಅವರ ಬರವಣಿಗೆಯ ಕಡೆ ಒಂದು ಕ್ಷಣ ಹುಬ್ಬೆತ್ತಿ ನೋಡಿದನೋ ಇಲ್ಲವೋ ಮನಸ್ಸು ಮುದುಡಿ ನಿರಾಶಾಬದ್ಧನಾಗಿ ಸುಮ್ಮನೆ ಕುಳಿತುಕೊಳ್ಳುವನು. ಬರೆಯಬೇಕಾದ ಕೈಮುಂದಾಗಲೇ ಇಲ್ಲ, ಅತೀವ ಜುಗುಪ್ಸೆಯಿಂದ. ಚಂಡಾಮರ್ಕರಿಗೂ ಉಭಯ ಸಂಕಟ; ಭಯಭೀತಿ; ಪರಿತಾಪ. ಆದರೇನು ? ಕಿಂಚಿತ್ತೂ ಅಲಕ್ಷಿಸುವಂತಿಲ್ಲ. ತಮ್ಮ ಶ್ರದ್ಧೆ-ಶ್ರಮಗಳನ್ನು ಯಥಾ ಪ್ರಕಾರ ಅಥವಾ ಅದಕ್ಕಿಂತ ಮಿಗಿಲಾಗಿ ಮುಂದುವರಿಸಿದರು. ಆದರೆ, ಅದರಿಂದ ಯಾವ ಪ್ರಯೋಜನವೂ ಕಂಡುಬರಲಿಲ್ಲ. ತಾವೇ ಸ್ವತಃ ಹೋಗಿ ಈ ವಿಚಾರವನ್ನು ಹಿರಣ್ಯಕಶಿಪುವಿಗೆ ಹೇಳಿಕೊಳ್ಳೋಣವೆಂದರೂ ಧೈರ್ಯ ಮೂಡಬೇಕೆ ? ಒಂದೊಂದು ಕ್ಷಣವನ್ನು ಕಳೆಯುವುದೂ ಸಹ ಜಂಜಡವೇ.

ಒಂದು ದಿನ ಬೆಳಗಿನ ಸಮಯದಲ್ಲಿ ನಗರ ಸಂಚಾರಕ್ಕೆ ಹೊರಟಿದ್ದ ಹಿರಣ್ಯಕಶಿಪು ಹಾಗೇ ಗುರುಕುಲದ ಕಡೆ ನಡೆದಿದ್ದಾನೆ. ಮೈಯೆಲ್ಲಾ ಮನಸ್ಸು ಮಗನನ್ನು ನೋಡುವುದರಲ್ಲಿ ಮತ್ತು ಅವನ ಅಭ್ಯುದಯವನ್ನು ಅರಿಯುವುದರಲ್ಲಿ. ಪ್ರಾಂಗಣದಲ್ಲಿ ಕುದುರೆಯ ಖುರಪುಟಗಳನ್ನು ಕೇಳಿದ ಚಂಡಾ

ಮರ್ಕರು ಒಳಗಿಂದಲೇ ಅತ್ತ ಬಗ್ಗಿ ನೋಡಿದರು. ರಾಕ್ಷಸೇಂದ್ರನನ್ನು ಕಂಡು ಎದೆ ತಲ್ಲಣಿಸಿ ಕೈಕಾಲುಗಳು ಗಡಗಡ ನಡುಗಹತ್ತಿದುವು. ಅತೀ ಪ್ರಯಾಸ ದಿಂದ ಮನಸ್ಸು ಹಿಡಿದು ಹುಡುಗರನ್ನೆಲ್ಲಾ ಕೂಡಿಕೊಂಡು ದೊರೆಯನ್ನು ಸ್ವಾಗತಿಸಲು ಹೊರಬಾಗಿಲಿಗೆ ಬರುವಷ್ಟರಲ್ಲಿ ಗಂಟಲು ಆರಿಹೋಯಿತು)

ಹಿರಣ್ಯಕಶಿಪು—(ಪ್ರಸನ್ನಮುಖಿಯಾಗಿ) ಗುರುಗಳೇ, ಪ್ರಹ್ಲಾದ ಹೇಗಿದ್ದಾನೆ?

ಚಂಡಾಮರ್ಕ—ಇದೋ ನೋಡಿ ! (ತಕ್ಷಣ ನೈಬಾಗಿ ಅಡ್ಡಬಿದ್ದು, ತನಗಿಂತ ಸ್ವಲ್ಪಹಿಂದೆ ಇದ್ದ ಪ್ರಹ್ಲಾದನನ್ನು ಗುಂಪಿನಿಂದ ಮುಂದೆ ಕರೆತರು ವರು. ಪ್ರಹ್ಲಾದ ಓಡಿ ಹೋಗಿ ತಂದೆಯನ್ನು ಅಪ್ಪಿಕೊಳ್ಳುವನು. ಮುಗ್ಧ ಮುಖಬಿಂಬ ಅರಳಿ ಹೂವಾಯಿತು. ಹಿರಣ್ಯಕಶಿಪುವೂ ಸಹ ಪಿತೃಸಹಜವಾದ ಪ್ರೇಮದಿಂದ ಮೈದಡವಿ....)

ಹಿರಣ್ಯಕಶಿಪು—ಮಗೂ, ಚೆನ್ನಾಗಿದ್ದೀಯಾ ? ನಿನ್ನ ಪಾಠಪ್ರವಚನ ಗಳು ಹೇಗೆ ನಡೆಯುತ್ತವೆ? ಈವರೆಗೆ ನೀನು ಹೊಸದಾಗಿ ಏನೇನು ಕಲಿತಿರುವೆ?

(ಪ್ರಹ್ಲಾದ ಏನೆಂದು ಉತ್ತರಿಸಲೂ ತೋಚದೆ ಮೂಕ ಮೌನ ತಾಳಿ ದ್ದಾನೆ. ಅರಳುಗಣ್ಣುಗಳಲ್ಲಿ ಮಿಂಚಿದ ಭಾವಸ್ಫೂರ್ತಿ ಅಂತಸ್ಥಲದ ನಿವೇದನೆ ಯನ್ನು ಹೊರಗೆಡಹಿತ್ತು. ಅವನು ಸುಮ್ಮನೆ ನಿಶ್ಚಲಭಂಗಿಯಲ್ಲಿ ಸ್ತಂಭೀ ಭೂತನಾಗುವನು. ಅವನ ಕಂಕುಳಲ್ಲಿ ಕಪ್ಪು ಹಲಗೆಯಿತ್ತು. ಅದನ್ನು ನೋಡಿದ ಹಿರಣ್ಯಕಶಿಪು ತಾನೇ ಉತ್ಸುಕತೆಯಿಂದ ತೆಗೆದುಕೊಳ್ಳುವನು. ನೋಟ ಅದರ ಮೇಲೆ ಹರಿಯುತ್ತಲೂ ಸಹಸ್ರ ಚೇಳುಗಳು ಒಮ್ಮೆಗೇ ಕುಟುಕಿದಂತೆ ಮುಖ ವಿವರ್ಣವಾಯಿತು. ಒಡನೆ ಕೋಪಾವೇಶದಿಂದ ಹುಬ್ಬುಗಳನ್ನು ಗಂಟಿಕ್ಕಿ ಗುರುಗಳ ಕಡೆಗೆ ಅದನ್ನು ಒಗೆದು ಅಬ್ಬರಿಸುವನು)

ಹಿರಣ್ಯಕಶಿಪು—ಏನಿದು ?

ಚಂಡಾಮರ್ಕ—(ಗಡಗಡ ನಡುಗುತ್ತ ಕೈಮುಗಿದುಕೊಂಡು ಅತ್ಯಂತ ಆರ್ತದನಿಯಲ್ಲಿ) ಮ....ಹಾ ಪ್ರ....ಭೋ ! ಪರಾಂ....ಬರಿ....ಸಬೇಕು.

ನಾನು ...ಎಷ್ಟೆ....ಷ್ಟೋ ಪ್ರಯತ್ನಿಸುತ್ತೇನೆ....ಆದರೆ ಇದು....ನ....ನ....ನ್ನ ಶಕ್ತಿಗೆ....ಮೀರಿ....ದ್ದು !

ಹಿರಣ್ಯಕಶಿಪು--ಇವನು ಆರ ಸಹಾಯದಿಂದ ಇದನ್ನು ಕಲಿಯು ತ್ತಾನೆ....? ಹೇಳು !

ಚಂಡಾಮರ್ಕ—(ಮುಸುಮುಸು ಕಂಬನಿ ಕರೆದು) ನನಗೆ ತಿಳಿಯದು ....ಮಹಾ....ಸ್ವಾಮೀ !....ನಿಮ್ಮ ಕುಮಾ....ರನನ್ನು ನೀ....ವೇ ಕೇಳಿ.... ....ನೋಡಿ.

(ಅಷ್ಟೆನ್ನಬೇಕಾದರೆ ಚಂಡಾಮರ್ಕರಿಗೆ ಸಾಕುಸಾಕಾಗಿ ಹೋಯಿತು. ಹೃದಯ ಈಗಲೀಗ ಬಿರಿಯುವಂತೆ ದಡದಡನೆ ಮಿಡಿಯತೊಡಗಿತು. ಇತರ ಬಾಲಕರು ಹಿರಣ್ಯಕಶಿಪುವಿನ ಉಗ್ರಕೋಪವನ್ನೂ ಭಯಂಕರಾಕೃತಿಯನ್ನೂ ನೋಡಿ ತಲ್ಲಣಿಸಿ ಮೂರ್ಛೆಮತ್ತಾಗಿ ಬಿಟ್ಟಿದ್ದಾರೆ)

ಹಿರಣ್ಯಕಶಿಪು—(ಹಲ್ಲುಕಡಿದು) ಹೇಳು ! ಹೇಗೆ ಕಲಿತ ? ಖಂಡಿತ ನಿನಗೆ ತಿಳಿಯದೆ ?

ಚಂಡಾಮರ್ಕ—ಖಂಡಿತ....ನನಗೆ ತಿಳಿಯದು ಮಹಾ........ಪ್ರಭೂ ! ತಾವು....ಈ....ಬಡವನ ಮೇಲೆ ಕೋಪಿಸಿಕೊಳ್ಳಲಾಗದು....ಪ್ರಹ್ಲಾದ....ನನ್ನ ಮಾ....ತನ್ನು....ಸ್ವಲ್ಪವೂ ಲಕ್ಷಿಸುತ್ತಿಲ್ಲ....ನಾನು ತೀರ ನಿಸ್ಸಾ....ಯಕನಾಗಿ ರುವೆ....

(ದೊಡ್ಡದಾಗಿ ಅಳುತ್ತ ಪುನಃ ನಮಸ್ಕರಿಸುವನು)

ಹಿರಣ್ಯಕಶಿಪು—(ಪ್ರಹ್ಲಾದನನ್ನು ಕುರಿತು) ಇದೆಲ್ಲಿ ಕಲಿತೆ ? ಯಾರು ಹೇಳಿಕೊಟ್ಟರು ನಿನಗೆ ?

ಪ್ರಹ್ಲಾದ—(ವಿಚಲಿತನಾಗದೆ) ಯಾರೂ ಹೇಳಿಕೊಡಲಿಲ್ಲ ಅಪ್ಪಾಜಿ. ನಾನೇ ಕಲಿತೆ. ಎಲ್ಲವೂ ನನ್ನ ಅಂತರಾತ್ಮ ಪ್ರೇರಿತ.

ಚಂಡಾಮರ್ಕ—(ಎದ್ದು ಬಿಲ್ಲಿನಾಕಾರದಲ್ಲಿ ಮೈಬಾಗಿ ಕರಗಳನ್ನು ಜೋಡಿಸಿಕೊಂಡು) ಪ್ರಭುಗಳು ದಯವಿಟ್ಟು ಮನ್ನಿಸಬೇಕು. ಅವನು ಬರೆವುದು

ಹೇಗೆ ಕಲಿತ ಎಂಬುದು ನನಗೂ ಆಶ್ಚರ್ಯ. ನಾನು ಎಷ್ಟೆಷ್ಟು ವಿಧದಲ್ಲಿ ಪ್ರಯತ್ನಿಸಿದರೂ ಮನಸ್ಸಿನಿಂದ ಬರೆಯುವುದನ್ನು ಅವನು ಬಿಡುವುದಿಲ್ಲ. ಈ ವಿಚಾರವನ್ನು ತಮ್ಮಲ್ಲಿಗೆ ಬಂದು ನಾನೇ ಅರಿಕೆ ಮಾಡಿಕೊಳ್ಳಬೇಕೆಂದಿದ್ದೆ. ತಾವೇ ಬಂದಿದ್ದೀರಿ ನಾನು ಏನು ಮಾಡಬೇಕೋ ಅಪ್ಪಣೆಯಾಗಲಿ.

ಹಿರಣ್ಯಕಶಿಪು—(ಅವರ ಮಾತನ್ನು ಲಕ್ಷಿಸದೆ ಮಗನ ಕಡೆ ತಿರುಗಿ) ಪ್ರಹ್ಲಾದ ಇಲ್ಲಿ ಕೇಳು! ಯಾವುದೇ ವಿಚಾರಗಳ ಸಾರಾಸಾರಗಳನ್ನು ತಿಳಿದುಕೊಳ್ಳದೆ ಆಚರಣೆಗೆ ತರಬಾರದು, ತಿಳಿಯಿತೆ? ಆ ವಿಷ್ಣು ಲೋಕ ಕಂಟಕನಾದ ಹಂದಿ! ನಿನ್ನ ಚಿಕ್ಕಪ್ಪನನ್ನು ದೂರ ಸೆಳೆದೊಯ್ದು ನಿಸ್ಸಾಯಕ ನಾಗಿಸಿ ತಿವಿದುಕೊಂದ ಧೂರ್ತ ಹಂದಿ! ಅವನು ನಮ್ಮ ಕುಲದ ಅಜನ್ಮ ಶತ್ರು! ಅಂತಹ ಹೀನಾತ್ಮನನ್ನು ನೀನು ಹೀಗೆ ಸ್ಮರಿಸಬಹುದೇ? ಅದರಿಂದ ನಿನ್ನ ವಿನಾಶವನ್ನು ನೀನೇ ಮಾಡಿಕೊಂಡಂತೆ! ಎಂದೆಂದಿಗೂ ಇನ್ನು ಮುಂದೆ ಅವನ ಹೆಸರನ್ನು ನೀನು ಎತ್ತಬಾರದು ತಿಳಿಯಿತೇ?

ಪ್ರಹ್ಲಾದ—(ಅತ್ಯಂತ ನಮ್ರವಿನಮ್ರನಾಗಿ, ಬಾಲಮುಗ್ಧವಾಣಿಯಲ್ಲಿ) ಅಪ್ಪಾಜಿ, ಅವನೇ ಸರ್ವೇಶ್ವರನೆಂದು ನನ್ನ ಅಂತರಾತ್ಮ ಸಾರಿಸಾರಿ ಹೇಳುತ್ತದೆ. ಲೋಕವಂದ್ಯನೂ ಶ್ರೀ ಪರಮಾತ್ಮನೂ ಆದ ಅವನಿಗೆ ಸಜ್ಜನರ ಮೇಲೆ ದ್ವೇಷ ವಿಲ್ಲ. ಎಲ್ಲರನ್ನೂ ತನ್ನ ಮಕ್ಕಳಂತೆಯೇ ಕಾಣುತ್ತಾನೆ. ದುಷ್ಟ ಶಿಕ್ಷೆ ಶಿಷ್ಟ ರಕ್ಷೆ ಅವನ ಧರ್ಮ. ಅವನನ್ನು ವೃಥಾ ದೂಷಿಸುವುದು ಸರಿಯಲ್ಲ.

(ಆ ವಾಕ್ಸರಣಿ ಕಮನೀಯವಾಗಿದ್ದರೂ ಕರ್ಣಪಟಲಗಳ ಮೇಲೆ ಕಾದ ಶೀಸದ ರಸದಂತೆ ಬಿದ್ದು ಹಿರಣ್ಯಕಶಿಪುವಿನ ಕೋಪತಾಪಗಳು ಒಮ್ಮೆಗೇ ಭುಗಿ ಲೆದ್ದುವು. ಶ್ವಾಸನಿಶ್ವಾಸಗಳ ಪ್ರಕ್ರಿಯೆ ವಿಕ್ಷಿಪ್ತವಾದಂತೆ ಹೃದಯಕುಂಡ ಒಂದು ಗಳಿಗೆ ಸ್ತಬ್ಧವಾಯಿತು. ಹಿರಣ್ಯಕಶಿಪು ತೀರ ಹತಾಶನಾಗುವನು)

ಹಿರಣ್ಯಕಶಿಪು—(ದಂಷ್ಟ್ರಘರ್ಷಣಗೈದು) ಎಲಾ ತಿಳಿಗೇಡಿ! ನನಗೇ ಬುದ್ಧಿ ಗಲಿಸಲು ಬಂದೆಯಾ? ನಾನೇ ಲೋಕೇಶ್ವರನಿರುವಾಗ ಇನ್ನಾವ ಸರ್ವೇಶ್ವ ರನೋ? ನನಗಿಂತಲೂ ಹೆಚ್ಚಿನ ಲೋಕವಂದ್ಯನು ಇನ್ನಾರು? ಈ ಲೋಕವನ್ನು ಗೆದ್ದ ಗಂಡುಗಲಿಯ ಮುಂದೆಯೇ ಆ ಕ್ಷುದ್ರಪ್ರಾಣಿಯ ಹೆಸರೆತ್ತಲು ನಿನಗೆಷ್ಟು

ಧೈರ್ಯ ?

(ಒಂದೇ ಬಾರಿಗೆ ತುಳಿದು ಹೊಸಗಿ ಬಿಡುವಂತಹ ರೋಷದಿಂದ ಭ್ರೂಭಂಗಮಾಡಿ ಮಗನ ಕಡೆ ದುರುದುರು ಬಿರುಗಣ್ಣ ನೋಟ ಬೀರುವನು. ಆ ರೌದ್ರಾವತಾರವನ್ನು ನೋಡಿ ಇತರ ಮಕ್ಕಳೆಲ್ಲಾ ಬೆದರಿ ಬೆಚ್ಚಿ ಒಳಗೋಡಿದರು)

ಹಿರಣ್ಯಕಶಿಪು—ಏನಯ್ಯ. ಪಂಡಿತೋತ್ತಮ ! ಏನಿದರ ಅರ್ಥ....!

ಚಂಡಾಮರ್ಕ—(ಕೈ ಮುಗಿದು) ಮ....ಹಾ....ಸ್ವಾಮಿ....(ಮುಂದೆ ಮಾತು ಹೊರಡದೆ ತಲ್ಲಣಿಸಿ ಮತ್ತೊಮ್ಮೆ ಕೈಮುಗಿದು, ಅಳುತ್ತ ಅಡ್ಡ ಬೀಳುವರು)

ಹಿರಣ್ಯಕಶಿಪು—ಇಷ್ಟೆಲ್ಲಾ ಅವನೇ ಕಲಿಯುವುದೆಂದರೆ ಅಸಾಧ್ಯ....! ಇದು ಯಾರ ಕೈವಾಡ ?

ಚಂಡಾಮರ್ಕ—ಕ್ಷ....ಮಿ..ಸಬೇಕು! ಇದೊಂದೂ....ನ....ನನಗೆ..ತಿ... ತಿಳಿ....ಯದು.(ನಾಲಿಗೆಯಿಂದ ತುಟಿಗಳನ್ನು ಒರಸಿಕೊಂಡು) ಮಹಾಪ್ರಭೋ!

ಹಿರಣ್ಯಕಶಿಪು—ಸಾಕು, ನಿಲ್ಲಿಸು ! ಯಾರ ಮುಂದೆ ಹೇಳುತಿದ್ದಿ ಈ ಮಾತು ? ನೀನು ಹೇಳಿಕೊಡದೆ ಚಿಕ್ಕಮಗುವಿಗೆ ತಿಳಿಯುವುದಾದರೂ ಹೇಗೆ? ಜೋಕೆ! ಇನ್ನು ಮುಂದೆ ನಮ್ಮ ವೈರಿಯ ಹೆಸರು ಅವನ ಬಾಯಿಯಲ್ಲಿ ಬರಬಾರದು ತಿಳಿಯಿತೇ ?

ಚಂಡಾಮರ್ಕ—(ಆರ್ತದನಿಯಲ್ಲಿ) ಪ್ರಭೂ!....ತಾ....ವು ಮನ್ನಿ....ಸಬೇಕು !

ಹಿರಣ್ಯಕಶಿಪು—ಈ ಪ್ರಲಾಪ ಇರಲಿ, ಜೋ....ಪಾ....ನ!

(ಹಿರಣ್ಯಕಶಿಪು ಅಸಹನೀಯವಾದ ಪರಿತಾಪ ತಪ್ತನಾಗಿ ಕೆಂಗಣ್ಣುಗಳಲ್ಲಿ ಕಿಡಿಗಳನ್ನು ಕಾರುತ್ತ ಘರ್ಜಿಸಿ ಅಲ್ಲಿಂದ ಹೊರಡುವನು. ಕೋಪಜ್ವಾಲೆಯಿಂದ ದೇಹ ಸಮಸ್ತವೂ ಧಗಧಗ ಉರಿಯುತಿತ್ತು. ಎದೆಯಾರಿ ಗಂಟಲಾರಿ ಶ್ವಾಸ ನಿಶ್ವಾಸಗಳು ಅಲ್ಲಲ್ಲೇ ಸಿಕ್ಕಿಕೊಂಡಂತೆ ಮಿಲಮಿಲಗೊಂಡುವು. ಬಗೆಹರಿಸಲಾರದ ಸಮಸ್ಯೆಯೊಂದಿಗೆ ಅದೇ ವಿಚಾರ ವಿಪ್ಲವ ಮನದಲ್ಲಿ. ವಿಚಾರಕಾತರತೆ-ಪ್ರೇಮ

ಕಾತರತೆ ಧೀಶಕ್ತಿಯನ್ನೇ ಕುಂದಿಸಿತು. ಅರೆ ಮರುಳನಂತೆ ಅಲ್ಲಲ್ಲೇ ಅಂಡಲೆದು ಪುನಃ ಗುರುಕುಲದ ಕಡೆಗೆ ಮರಳುವನು. ಪ್ರಾಂಗಣದಲ್ಲಿದ್ದ ಹೆಮ್ಮರದ ನೆರಳಿನಲ್ಲಿ ಚಂಡಾಮರ್ಕರು ಎಲ್ಲಾ ಮಕ್ಕಳನ್ನು ಕಲೆಹಾಕಿ ಪ್ರಹ್ಲಾದನನ್ನು ಪಕ್ಕದಲ್ಲಿ ಕೂಡಿಸಿಕೊಂಡು ಕೊರಳು ಹರಿಯುವಂತೆ ಪಾಠ ಹೇಳುತಿದ್ದಾರೆ. ಅವರು ಮುಖ್ಯವಾಗಿ ಹೇಳುತ್ತಿರುವುದು ಪ್ರಹ್ಲಾದನಿಗೇ ಆದರೂ ಕಲಿಯುತ್ತಿರುವುದು ಇತರ ಮಕ್ಕಳು. ಪ್ರಹ್ಲಾದ ಏನೋ ಒಂದು ರೀತಿಯಲ್ಲಿ ಮಂಕು ಬಡಿದವನಂತೆ ಅನ್ಯ ಮನಸ್ಕನಾಗಿ ಪಾಠವಿದೂರನಾಗಿ ಕುಳಿತಿರುವುದು ಕಾಣಬಂತು. ಸ್ವಲ್ಪಹೊತ್ತು ದೂರದಲ್ಲಿ ನಿಂತು ಎಲ್ಲವನ್ನೂ ಆಲೋಕಿಸಿ ತನ್ನಷ್ಟಕ್ಕೆ ತಾನೇ ಸದ್ದಿಲ್ಲದೆ ಹಿಂದಿರುಗುವನು. ತಾಪದಗ್ಧ ಹೃದಯಕುಂಡ ಒಮ್ಮೆಗೇ ಛಿಧ್ರ ಛಿಧ್ರವಾಗಿ ಹರಿದು ಹೋಗುವಂತೆ ಹುಯ್ಯಲಿಡುತಿತ್ತು.

ಚಂಡಾಮರ್ಕರ ಶ್ರಮವೂ ಅರ್ಥವಾಯಿತು. ಮಗನ ಮತಿ ಭ್ರಾಂತಿಯೂ ಅರ್ಥವಾಯಿತು. ಆದರೇನು ? ಅವನು ಸರಿಹೋಗಲೇಬೇಕೆಂಬ ಅದಮ್ಯ ಆಸೆ ಮನದಲ್ಲಿ. ಸದ್ಯ ಅಲ್ಲಿ ಇನ್ನಷ್ಟು ತಂಟೆ–ತಗಾದೆ ಮಾಡದೆ ಮರಳಿದುದೂ ಸಹ ವಿಶೇಷವೇ. ಪ್ರಹ್ಲಾದ ಬ್ರಹ್ಮದೇವನ ವರದಿಂದ ಸಂಜನಿಸಿದವನಾದುದರಿಂದ ಕೆಟ್ಟು ಕೈತಪ್ಪಿಹೋಗುವ ಕಾರಣವಿಲ್ಲ ಎಂಬ ಆಶಾಭಾವ ತಾಳ್ಮೆಗೆ ಇನ್ನಷ್ಟು ಪುಟಗೊಟ್ಟಿರಬಹುದು ಬಹುಶಃ. ಅಂತೂ ಅರಮನೆಗೆ ನೇರವಾಗಿ ಹಿಂದಿರುಗುತ್ತಾನೆ ಹಿರಣ್ಯಕಶಿಪು)

(ಪರದೆ ಬೀಳುವುದು)

ದೃಶ್ಯ-೫

(ಅರಮನೆಯ ಭವ್ಯವಾದ ಅಂತಃಪುರ. ಸತೀ ಶಿರೋಮಣಿಯು ಖಿನ್ನ ಮನಸ್ಕಳಾಗಿ ಅತೀವ ಚಿಂತಾಭಾವದಿಂದ ಮಸ್ತಕದ ಭಾರವನ್ನು ಎಡಗೈದಳದ ಮೇಲೆ ಇಳುಹಿದ್ದಾಳೆ. ಕಣ್ಣುಗಳಂಚಿನಲ್ಲಿ ಮಿಂಚಿನ ಹನಿಗಳಂತೆ ಕಂಬನಿಯು ಹರಿದಾಡುತ್ತಿದೆ. ಅಲ್ಲಲ್ಲೆ ಪದಚಾರಣ ನಡೆಸಿದ್ದ ಹಿರಣ್ಯಕಶಿಪು ಅತ್ಯಂತ ಗಂಭೀರಭಾವ ತಳೆದಿದ್ದಾನೆ. ಅವನ ವಿಕೃತವಾದ ಮಹಾ ತೇಜಸ್ಸು ರಾಹುಗ್ರಸ್ತವಾದಂತೆ ಕಳೆಗುಂದಿ ಮುಖಬಿಂಬದಲ್ಲಿ ಪ್ರಸನ್ನತೆಯೆಂಬುದು ಇಲ್ಲವೇ ಇಲ್ಲ. ಅನುತಾಪ-ಅನುಶಯಗಳು ಒಡಲನ್ನು ಎಳೆಎಳೆಯಾಗಿ ಸುಟ್ಟು ಶ್ವಾಸನಿಶ್ವಾಸಗಳು ಭಯಂಕರವಾಗಿ ಏರಿಳಿಯುತ್ತಿದ್ದುವು. ಒಮ್ಮೆ ಸಂತಾಪದಿಂದ ಕುಗ್ಗಿದರೆ ಇನ್ನೊಮ್ಮೆ ಕೋಪದಿಂದ ಉಗ್ರನಾಗಿ ಕೆಂಗಣ್ಣುಗಳು ಕಿಡಿಗಳನ್ನು ಕಾರುತಿದ್ದುವು)

ಹಿರಣ್ಯಕಶಿಪು—ಪ್ರಹ್ಲಾದ ನನಗೆ ಎಂತಹ ಚಿಂತೆ ತಂದಿಟ್ಟ....?

ರಾಣಿ—ಇನ್ನೂ ಎಳೆಯ ಮಗು. ಸ್ವಲ್ಪ ದೊಡ್ಡವನಾದರೆ ತನ್ನ ತಪ್ಪನ್ನು ತಿದ್ದಿಕೊಳ್ಳುತ್ತಾನೆ.

(ಸಂಕೋಚಪೂರ್ಣ ದನಿಯಲ್ಲಿ ಪ್ರಯತ್ನಪೂರ್ವಕವಾಗಿ ಮೃದುತೆ-ಸಾದರತೆಗಳನ್ನು ಸೂಸುವಳು)

ಹಿರಣ್ಯಕಶಿಪು—ಅವನು ಪಾಠಪ್ರವಚನಗಳನ್ನು ಗಮನಿಸದಿರುವುದನ್ನು ನೋಡಿದರೆ ಮುಂದಾದರೂ ಸರಿಹೋಗುತ್ತಾನೆಂದು ಊಹಿಸುವುದು ಕಷ್ಟ.

ರಾಣಿ—(ಆರ್ತದನಿಯಲ್ಲಿ) ಅಷ್ಟೊಂದು ಅನುಮಾನವೇಕೆ ?

ಹಿರಣ್ಯಕಶಿಪು—ಇಲ್ಲಿ, ಇಲ್ಲ. ನನಗದು ಅರ್ಥವಾಗಿಲ್ಲ.(ತಲೆಯಾಡಿಸುತ್ತ

ಬಿಸಿಯುಸಿರು ಬಿಡುವನು)

ರಾಣಿ—ಅಂದರೆ....?

ಹಿರಣ್ಯಕಶಿಪು—ಅವನಂತೂ ಬಹಳ ವಿಚಿತ್ರ. ಕಲಿಯಬೇಕಾದುದನ್ನು ಕಲಿಯುತ್ತಲೇ ಇಲ್ಲ. ಆ ಕ್ಷುದ್ರ ವಿಷ್ಣುವನ್ನು ಧ್ಯಾನಿಸುತ್ತ ಕುಳಿತುಬಿಡುತ್ತಾನೆ. ಅದು ಹೇಗೆ ಅವನ ರಕ್ತಗತವಾಯಿತು ಎಂಬುದೇ ಬಹಳ ಆಶ್ಚರ್ಯ! ಅವನಿಗೆ ಯಾರು ಹೇಳಿಕೊಟ್ಟರು? ಇಷ್ಟು ಸಣ್ಣ ವಯಸ್ಸಿನಲ್ಲಿ ಆ ಬುದ್ಧಿ ಹೇಗೆ ಬಂತು?

ರಾಣಿ—(ಕಂಬನಿಯನ್ನು ತೀಡಿಕೊಂಡು) ನನಗೂ ಅರ್ಥವಾಗುವುದಿಲ್ಲ; ತುಂಬ ದುರದೃಷ್ಟಕರ.

ಹಿರಣ್ಯಕಶಿಪು—(ಹಲ್ಲುಕಡಿದು) ನನ್ನ ಎದುರಿಗೇ ವಿಷ್ಣುವನ್ನು 'ಲೋಕೇಶ್ವರ' 'ಲೋಕವಂದ್ಯ' ಎಂದು ಮುಂತಾಗಿ ಹೊಗಳುವುದೆಂದರೇನು ?

ರಾಣಿ—(ವ್ಯಸನದಿಂದ) ಪ್ರಭೂ, ನೀವು ಈಗಲೇ ಅಷ್ಟೊಂದು ತಲೆ ಕೆಡಿಸಿಕೊಳ್ಳುವ ಕಾರಣವಿಲ್ಲ. ಮಗು ಬ್ರಹ್ಮದೇವನ ವರದಿಂದ ಜನಿಸಿದವನಾದ್ದರಿಂದ ಒಂದಲ್ಲ ಒಂದು ದಿನ ಸರಿಹೋಗಿಯೇ ತೀರುತ್ತಾನೆ, ಆ ನಂಬಿಕೆ ನನಗಿದೆ.

ಹಿರಣ್ಯಕಶಿಪು—ನಂಬಿಕೆಯ ವಿಚಾರ ಅನಂತರ. ಈಗವನನ್ನು ತಿದ್ದಲೇಬೇಕು. ವಿಷ್ಣುವಿನ ಹೆಸರೆತ್ತಿದವರ ಹುಟ್ಟನ್ನೇ ಅಡಗಿಸುತಿದ್ದ ನನಗೆ ಮಗನೇ ಮುಳ್ಳಾಗಬೇಕೆ ? ಇದು ಎಂತಹ ಸೋಜಿಗ ?

ರಾಣಿ—(ಚಿಂತಾಮಗ್ನಳಾಗಿ) ನಾವೇ ಬುದ್ಧಿ ಹೇಳಿದರೆ ಕಲಿತುಕೊಳ್ಳಬಹುದು.

ಹಿರಣ್ಯಕಶಿಪು—ನನ್ನ ವಂಶದಲ್ಲಿ ಹುಟ್ಟಿ ಹೀಗಾಗುವುದೂ ಉಂಟೆ ? ನೋಡಿದರೆ ಇನ್ನೂ ಎಳೆಯ ಬಾಲಕ. ಹದ್ದು ಮೀರುವಂತಹ ವಯಸ್ಸೂ ಅಲ್ಲ.

ರಾಣಿ—ಛೇಃ ! ಛೇಃ ! ಅವನ ಮನಸ್ಸು ಹೂವಿನಷ್ಟು ನಿರ್ಮಲವಾದುದು. ಏನೋ ದುಷ್ಟಗ್ರಹ ಕಾಡುತ್ತಿರಬಹುದು. ಅನಂತರ ಸರಿಹೋದಾನು. ಸ್ವಲ್ಪ ಕಾಲ ಕಾದು ನೋಡುವುದು ಒಳ್ಳೆಯದು.

ಹಿರಣ್ಯಕಶಿಪು—ನನಗೀಗ ಆ ನಂಬುಗೆಯೂ ಉಳಿದಿಲ್ಲ.

ರಾಣಿ—(ಕರುಣಕಾತರತೆಯಿಂದ) ಹಾ! ಅಷ್ಟೊಂದು ಶಂಕೆ ಇಟ್ಟು ಕೊಂಡರೆ ಹೇಗೆ? ಅವನಿಂದ ನಮ್ಮ ವಂಶದ ಕೀರ್ತಿ ಬೆಳಗಲಿ ಎಂದು ಹಾರೈಸಿರಿ. ಅದು ಅವನನ್ನು ಮಾರ್ಪಡಿಸಬಹುದು.

ಹಿರಣ್ಯಕಶಿಪು—(ಸಂಶಯಾತ್ಮಕ ದನಿಯಲ್ಲಿ) ಇದರಲ್ಲಿ ವಿಷ್ಣುವಿನ ಕೈವಾಡವೇನಾದರೂ ಇದೆಯೇ? ನನಗೆ ಅದೊಂದು ಅನುಮಾನವಿದೆ.

ರಾಣಿ—ಮಗುವಿನೊಂದಿಗೆ ವಿಷ್ಣು ಕುಯುಕ್ತಿ ನಡೆಸಿಯಾನೆಂದು ಭಾವಿಸಿದರೆ ಹೇಗೆ? ನೀವಂತೂ ಈ ಆಲೋಚನೆಯಲ್ಲಿ ಬಹಳದೂರ ಹೋಗಿ ಬಿಡುತ್ತೀರಿ. ಅದಕ್ಕಿಂತ ತಾಳ್ಮೆ ಪಡೆದುಕೊಳ್ಳುವುದು ಲೇಸು.

(ಒಡಲ ಸಂಕಟದಿಂದ ಆ ನುಡಿಯನ್ನು ಹೊರ ಹಾಕಿದಳು ರಾಣಿ. ಕಣ್ಣು ಗಳಲ್ಲಿ ಹನಿಯಾಡುತಿದ್ದ ಕಂಬನಿ ಕೆನ್ನೆಯಮೇಲೆ ಧಾರಾಕಾರವಾಗಿ ಇಳಿಯಿತು)

ಹಿರಣ್ಯಕಶಿಪು—ನೀನರಿಯೆ, ಆ ವಿಷ್ಣು ಅತ್ಯಂತ ಮಾಯಾವಿ. ಯಾವಾಗ, ಯಾವ ರೂಪದಲ್ಲಿ ಬಂದು ಕಾಡುವನೋ ಊಹಿಸುವುದು ಕಷ್ಟ. ಅವನಿಂದ ನನ್ನ ಮಗನೇ ನನಗೆ ಕಂಟಕವಾಗಬಹುದು; ಯಾರಿಗೆ ಗೊತ್ತು?

ರಾಣಿ—ಛೆ! ವೃಥಾ ಕಲ್ಪನೆ, ವೃಥಾ ಮನಃಕ್ಲೇಶ, ನೀವು ಸುಮ್ಮನೆ ಮನಸ್ಸಮಾಧಾನ ತೆಗೆದುಕೊಳ್ಳಿ, ಅವನ ಆಗು-ಹೋಗುಗಳನ್ನು ಬ್ರಹ್ಮ ದೇವನಿಗೆ ಸಮರ್ಪಿಸಿ ನಾವು ನಿಶ್ಚಿಂತೆಯಿಂದಿರೋಣ. ಮುಂದೆ ಅವನೇ ನಮಗೆ ಸಹಾಯ ಮಾಡುತ್ತಾನೆ. ದಯಮಾಡಿ ಅನ್ಯಥಾ ಭಾವಿಸದೆ ಮಗುವನ್ನು ಕಾಪಾಡಬೇಕು. (ಕೈಮುಗಿದು ಬೇಡಿಕೊಳ್ಳುವಳು)

ಹಿರಣ್ಯಕಶಿಪು—ಇದು ನನ್ನ ಗೌರವದ ಪ್ರಶ್ನೆ. ಒಮ್ಮೆ ಪರೀಕ್ಷಿಸಲೇ ಬೇಕು!

(ಕೋಪದ ಭರದಲ್ಲಿ ಮೂಗಿನ ಹೊಳ್ಳೆಗಳು ಅರಳಿ, ಮುಖಮಂಡಲ ಕೆಂಡದಂತೆ ಕೆಂಪು ತಳೆಯಿತು. ಆ ರೌದ್ರಾವತಾರವನ್ನು ನೋಡಿ ರಾಣಿ ನಡುಗಿ

ಹೋದಳು. ಹೃದಯ ಒಡೆದು ನುಚ್ಚುನೂರಾದಂತೆ ಭಾಸವಾಯಿತು. ನಾನಾ ವಿಧದಿಂದ ಅವಳು ಬೇಡಿಕೊಂಡು ಕಾಲ್ಪಿಡಿದು ಕಂಬನಿಗರೆದಳು. ಆದರೂ ಹಿರಣ್ಯಕಶಿಪುವಿನ ಮನಸ್ಸನ್ನು ಹೊಕ್ಕಿದ ಸಂಶಯ ಪಿಶಾಚಿಗೆ ಇನಿತೂ ದಯೆ ಮೂಡಲಿಲ್ಲ. ಅವನು ಎದ್ದು ನಿಂತು ನೆಲವನ್ನು ಧಿಮ್ಮನೆ ಒದ್ದು ಸದ್ದುಗೈವನು. ಆ ಸದ್ದು ಕೇಳಿದೊಡನೆಯೇ ಹೊರಗಡೆ ಕಾದಿದ್ದ ದೂತ ಬಾಗಿಲಲ್ಲಿ ಹಣಕಿ....)

ದೂತ—(ಅಡ್ಡಬಿದ್ದು) ನಾನಿದ್ದೇನೆ ಬುದ್ಧಿ. ಏನಪ್ಪಣೆ ?

ಹಿರಣ್ಯಕಶಿಪು—ಈಗಲೇ ಗುರುಕುಲಕ್ಕೆ ಹೋಗಿ ಪ್ರಹ್ಲಾದನನ್ನು ಕರೆದುಕೊಂಡು ಬಾ.

ದೂತ—ಅಪ್ಪಣೆ ಮಹಾಪ್ರಭೂ !

ರಾಣಿ—(ಆರ್ತ ದನಿಯಲ್ಲಿ) ಮಗು ಚಿಕ್ಕದು. ಅವನನ್ನು ದಯಮಾಡಿ ಹಿಂಸಿಸಬೇಡಿ.

ಹಿರಣ್ಯಕಶಿಪು—ಈಗಲೇ ಅವನಿಗೆ ಬುದ್ಧಿಕಲಿಸುವುದು ಒಳ್ಳೆಯದು. ಗಿಡವಾದಾಗ ಬಾಗದುದು ಮರವಾದಾಗ ಬಾಗಲಾರದು.

ರಾಣಿ—ಅದು ನಿಜವಾದರೂ ಮಗುವನ್ನು ಮಗುವಿನಂತೆ ಕಾಣಿರಿ.

(ಕಂಬನಿ ಮಿಡಿಯುವಳು)

ಹಿರಣ್ಯಕಶಿಪು—ಹೆಂಗಸಿನ ಮಾತಿಗೆ ಬೆಲೆಕೊಟ್ಟವನು ಎಂದೂ ರಾಜ್ಯ ಭಾರವನ್ನು ಹೊರಲಾರ.

ರಾಣಿ—ಸ್ವಾಮೀ....

(ಆ ಮಾತು ಮುಗಿಯುವುದರೊಳಗಾಗಿ ಹಿರಣ್ಯಕಶಿಪು ದಡದಡನೆ ನಡೆದು ಹೊಸ್ತಿಲು ದಾಟಿದ್ದಾನೆ. ರಾಣಿ ಅಸಹಾಯಕತೆಯಿಂದ, ಕಂಡು ಸಂಕಟ ದಿಂದ ನಿಟ್ಟುಸಿರು ಬಿಡುತ್ತಾಳೆ. ಹೃದಯಕುಂಡ ಬೇಗುದಿಯಲ್ಲಿ ಬೇಯುತಿತ್ತು. ಹೆತ್ತೊಡಲ ಸಂಕಟದ ಕೋಡಿ ಕಣ್ಣುಗಳಲ್ಲಿ ಹರಿಯಿತು ಧಾರೆಧಾರೆಯಾಗಿ.

ರಾಣಿ—(ಸ್ವಗತ) ಪ್ರಭೂ, ಬ್ರಹ್ಮದೇವ! ನೀನು ಎಂತಹ ಸಂಕಟಕ್ಕೆ ನನ್ನನ್ನು ಸಿಲುಕಿಸಿದ್ದಿ? ಚಿನ್ನದಂತಹ ಮಗನನ್ನೂ ಕೊಟ್ಟೆ. ಅಗಾಧವಾದ ಸಂಕಟ ವನ್ನೂ ಕೊಟ್ಟೆ. ನಿನ್ನನ್ನು ಪ್ರಾಂಜಲೀಬದ್ಧಳಾಗಿ ಬೇಡುವೆ, ನಿನ್ನ ವರಪುತ್ರ ನಾದ ಪ್ರಹ್ಲಾದನಿಗೆ ನೀನೇ ಪರಮ ರಕ್ಷೆ; ನೀನೇ ವರಸ್ಫೂರ್ತಿ; ನೀನೇ ಚಿರ ಶಾಂತಿ; ನೀನೇ ಧರ್ಮಗುರು; ನೀನೇ ಕ್ಷಾತ್ರಗುರು; ನೀನೇ ಮಾರ್ಗದರ್ಶಿ; ನೀನೇ ಕುಲೋದ್ಧಾರಿ....

(ಕೊರಳು ತುಂಬಿ ಹರಿಯುವ ಸ್ವರದಲ್ಲಿ ಪ್ರಾರ್ಥನೆ ನಡೆಯುತ್ತಲೇ ಇತ್ತು ಹೆತ್ತೊಡಲ ದುಃಖವಾರಿಯನ್ನು ಸೂಸಿ....ಆ ವೇಳೆಗಾಗಲೇ ಹಿರಣ್ಯ ಕಶಿಪು ಬಹಿಃಪ್ರಕೋಪ್ಪವನ್ನು ಮುಟ್ಟಿಯಾಗಿತ್ತು)

ಹಿರಣ್ಯಕಶಿಪು—(ಸ್ವಗತ) ಛೀ! ಇಂತಹ ಉತ್ಕಟ ಪರಿಸ್ಥಿತಿಗೆ ಸಿಗುವೆ ನೆಂದು ನಾನು ಭಾವಿಸಿರಲೇಇಲ್ಲ. ಬ್ರಹ್ಮದೇವ ಕೊಡುಕೊಡುತ್ತ ಇಂತಹ ದುಷ್ಟ ಮಗನನ್ನೇಕೆ ಕೊಟ್ಟ? ನಾನು ಮಾಡಿದ ಅತ್ಯುಗ್ರ ತಪಸ್ಸಿಗೆ ಇಂಥ ನೀಚ ಮಗನನ್ನು ಪಡೆದುದು ಖಂಡಿತವಾಗಿಯೂ ವಿಷಾದಕರ ಮತ್ತು ದುರ ದುಷ್ಟಕರ. ಆದರೆ ಬ್ರಹ್ಮದೇವನ ವರ ಪುಸಿಯಾಗುವುದೆಂತು? ಹಾ.... ನಿಜ ವಾಗಿಯೂ ಸೋಜಿಗ! ಎಷ್ಟು ಯೋಚಿಸಿದರೂ ಅರ್ಥವಾಗದಲ್ಲ ಏನಿದರ ಮರ್ಮ?

(ಕೈಸಾಲೆಯ ಹೊರಗಡೆ ಉದ್ದಕ್ಕೂ ಹಬ್ಬಿದ ಪ್ರಾಂಗಣದಲ್ಲಿ ಶತಪಥ ಸುತ್ತುವನು. ಚಿಂತಾವ್ಯಾಕುಲಿತ ಭಾವಮುದ್ರೆಯಿಂದ ಮುಖಬಿಂಬ ಪರಿಮ್ಲಾನ ವಾಗಿತ್ತು. ನಿರ್ಜನವಾದ ತಾಣ ಇನ್ನಷ್ಟು ಆಳವಾದ ಆಲೋಚನೆಗೆ ಇಂಬು ಕೊಡುವುದು. ರೋಷಗರ್ಭಿತವಾದ ತನುಮನಗಳು ಭಾರಭಾರವಾಗಿದ್ದುವು. ಮಗನ ಪ್ರತೀಕ್ಷೆಯಲ್ಲಿ ಹೊತ್ತು ನಿಧಾನವಾಗಿ ಉರುಳುತ್ತಿರುವಂತೆ ಭಾಸವಾ ಯಿತು. ಬಹುಶಃ ಕಾಲಪುರುಷ ವೈರಾಗ್ಯಗ್ರಹಣ ಮಾಡಿದ್ದನೋ ಏನೋ.

ಹಿರಣ್ಯಕಶಿಪು—ಕೋಪತಾಪಗಳನ್ನು ತನ್ನಲ್ಲೇ ನುಂಗಿಕೊಳ್ಳುತ್ತ ನೋಟ ವನ್ನು ದೂರಹಾದಿಯ ಕಡೆ ಹೊರಳಿಸಿದಾಗ ಪ್ರಹ್ಲಾದ ದೂತನೊಂದಿಗೆ ಆಗಮಿ ಸುತ್ತಿದ್ದುದು ದೃಗ್ಗೋಚರಿಸಿತು. ಅತ್ಯಂತ ಉತ್ಸಾಹದಿಂದ ಬರುತಿದ್ದ ಬಾಲಕ

ನನ್ನು ಉದ್ರೇಕ ವಿಸ್ತೃತ ನಯನಗಳಿಂದ ಎವೆಯಿಕ್ಕದೆ ನಿಟ್ಟಿಸಿ ನೋಡಿದಾಗ ಹೃದಯ ಕರಂಡ ಅಗಾಧವಾದ ಸಂಕಟದಿಂದ ತುಂಬಿಹೋಯಿತು)

ಹಿರಣ್ಯಕಶಿಪು—(ಸ್ವಗತ) ದುಷ್ಟ ಮಗನಿರುವುದಕ್ಕಿಂತ ಇಲ್ಲಧಿರುವುದು ಪರಮ ಲೇಸು....

(ದೂರದಲ್ಲಿದ್ದ ಪ್ರಹ್ಲಾದ ಸಮೀಪಗತನಾಗುವನು. ಪುಟ್ಟಪುಟ್ಟ ಹೆಜ್ಜೆಗಳನಿಟ್ಟು ಓಡಿಯೋಡಿ ಬರುತ್ತಿರುವುದನ್ನು ನೋಡಿದರೆ ಎಂತಹ ಕಟುಕರಿಗೂ ಬರಸೆಳೆದು ಮುದ್ದಾಡಬಹುದಾದಂತಹ ಮನಮೋಹಕ ರೂಪು; ಭಕ್ತಿಭಾವದ ಪೆಂಪಿಗೆ ಸುಂದರ ಪ್ರಭಾಳೆಯಂತೆ ಹರಡಿದ ಎಳೆಯ ಚಿಕುರರಾಶಿ. ಒಂದೆರಡು ಕ್ಷಣ ಕಣ್ಣುಗಳು ಅಭಿಮಾನದಿಂದ ನೋಡಿರಬಹುದು, ಮರುಕ್ಷಣದಲ್ಲೇ ಅವನ ವಿಷ್ಣು ಭಕ್ತಿ ದುರ್ದಮನೀಯವಾದ ರಾಕ್ಷಸ ಪ್ರವೃತ್ತಿಗೆ ಪುಟಗೊಟ್ಟಿತು. ಎರಡೂ ಕೈಗಳಿಂದ ಕಟಿ ಬಂಧನಗೈದು ಸ್ತಂಭೀಭೂತನಾಗುವನು)

ಅಂತರ್ವಾಣಿ—ಮೂಢಾ ! ತಿಳಿದಿರು, ನಿನ್ನ ಮಗನಲ್ಲ ಅವನು ಕಡು ವೈರಿ !

ಹಿರಣ್ಯಕಶಿಪು—(ಸ್ವಗತ)ಅಂತರ್ವಾಣಿಯ ಆದೇಶವೇ ಆದೇಶ. ಇನ್ನೇಕೆ ಪರಾಮರ್ಶೆ ?

(ಅಷ್ಟರಲ್ಲಿ ಪ್ರಹ್ಲಾದನು ಪ್ರಾಂಗಣಕ್ಕೆ ಪದಾರ್ಪಣೆ ಮಾಡಿ, ತನ್ನ ನಿರೀಕ್ಷೆಯಲ್ಲಿದ್ದ ತಂದೆಯನ್ನು ಕಂಡು ಆನಂದ ಪುಳಕಿತನಾಗುವನು. ಎಳೆಯ ತುಟಿಗಳಲ್ಲಿ ಮಂದಹಾಸ ಮಿನುಗುವುದು. ಆದರೆ ತಂದೆಯ ಮುಖಭಾವದಲ್ಲಿ ಕಿಂಚಿತ್ತೂ ವ್ಯತ್ಯಸ್ತವಾಗಲಿಲ್ಲ. ಅವನು ನಿರಾಶನಾದರೂ ಎದೆಗೆಡದೆ ತಂದೆಯ ಸನಿಹಕ್ಕೆ ಬಂದು ನಿಲ್ಲುವನು)

ಪ್ರಹ್ಲಾದ—ನಿಮ್ಮ ಕರೆಯ ಪ್ರಕಾರ ಬಂದಿರುವೆ ಅಪ್ಪಾಜಿ.

ಹಿರಣ್ಯಕಶಿಪು—ಆಗಲೇ ಬರಬಹುದಿತ್ತಲ್ಲ ; ಏಕೆ ಇಷ್ಟೊತ್ತು ? ಏನು ಮಾಡುತ್ತಿದ್ದೆ ?

ಪ್ರಹ್ಲಾದ—ಪ್ರಾತರ್ವಿಧಿಗಳಲ್ಲಿ ತೊಡಗಿದ್ದೆ ಅಪ್ಪಾಜಿ.

ಹಿರಣ್ಯಕಶಿಪು—ಪ್ರಾತಃರ್ವಿಧಿಗಳಲ್ಲಿ ಯಾವಯಾವ ಕ್ರಮ ಅನುಸರಿಸುತ್ತಿದ್ದಿ ?

ಪ್ರಹ್ಲಾದ—ಸ್ನಾನ-ಧ್ಯಾನ....

(ಮುಂದೆ ಮಾತಾಡಗೊಡದಂತೆ ಹಿರಣ್ಯಕಶಿಪು ನಡುವೆ ಬಾಯಿ ಹಾಕುವನು)

ಹಿರಣ್ಯಕಶಿಪು—ಧ್ಯಾನ....? ಯಾವ ಧ್ಯಾನ ?

ಪ್ರಹ್ಲಾದ—ಶ್ರೀ ಪರಮಾತ್ಮನಾದ ವಿಷ್ಣುವಿನ ಧ್ಯಾನ.

ಹಿರಣ್ಯಕಶಿಪು—ನಿನಗಿನ್ನೂ ಆ ಹುಚ್ಚು ಬಿಡಲಿಲ್ಲವೋ ? ನಾನು ಹೇಳಿದ್ದೇನು ! ನೀನು ಮಾಡುವುದೇನು ?

(ಘರ್ಜನೆ ಮಾಡುಮುಟ್ಟುವಂತೆ ಮೊಳಗಿತು. ಕೋಪಾನಲದಲ್ಲಿ ಒಮ್ಮೆಗೇ ಸುಟ್ಟುಬಿಡುವಂತೆ ಬೆಂಕಿಬೆಂಕಿಯಾದ ಹಿರಣ್ಯಕಶಿಪು. ರೋಷಬದ್ಧ ಶರೀರ ಸಣ್ಣಗೆ ಕಂಪಿಸಹತ್ತಿತು)

ಪ್ರಹ್ಲಾದ—(ವಿನಯ ಮುಗ್ಧವಾಣಿಯಲ್ಲಿ) ತಂದೆಯೆ, ಏತಕ್ಕೆ ಇಷ್ಟೊಂದು ಉಗ್ರವಾದ ಕೋಪ ? ಸೃಷ್ಟಿಕರ್ತನಾದ ಶ್ರೀ ವಿಷ್ಣುವನ್ನು ಧ್ಯಾನಿಸುವುದರಿಂದ ತಪ್ಪೇನು ?

ಹಿರಣ್ಯಕಶಿಪು—ಏನೆಂದೆ ದುಷ್ಟ ? ತಪ್ಪಲ್ಲವೆ ? ನಮ್ಮ ವೈರಿಯಾದ ಹಂದಿಯನ್ನು ಧ್ಯಾನಿಸುವುದು ತಪ್ಪಲ್ಲವೆ ? ಅವನ ಹೆಸರೆತ್ತಬಾರದೆಂದು ನಾನು ನಿನಗೆ ಎಷ್ಟು ಬಾರಿ ಹೇಳಲಿಲ್ಲ ? ಮತ್ತೆ ಅವನ ಹೆಸರೆತ್ತಿದರೆ ನಿನ್ನಗತಿ ಏನಾಗುವುದು ಬಲ್ಲೆಯಾ ?

ಪ್ರಹ್ಲಾದ—ಅಪ್ಪಾಜೀ, ದಯಮಾಡಿ ಶಾಂತಭಾವವನ್ನು ತಳೆಯಿರಿ. ನಿಮ್ಮನ್ನು ಕೈಮುಗಿದು ಬೇಡಿಕೊಳ್ಳುವೆ.

ಹಿರಣ್ಯಕಶಿಪು—ನನ್ನ ಮಾತನ್ನು ಕೇಳಿದರೆ ತಾನೆ ಶಾಂತಭಾವ ?

ಪ್ರಹ್ಲಾದ—ನಿಮ್ಮ ಮನಸ್ಸನ್ನು ನೋಯಿಸಬೇಕೆಂದಾಗಲೀ, ನಿಮಗೆ

ಅಪಚಾರವೆಸಗಬೇಕೆಂಬ ದುರ್ಭಾವನೆಯಾಗಲೀ ನನ್ನಲ್ಲಿ ಖಂಡಿತ ಇಲ್ಲ. ನೀವು ಇಷ್ಟೊಂದು ಕೋಪಾವಿಷ್ಟರಾಗಬಾರದು.

ಹಿರಣ್ಯಕಶಿಪು—ಎಲೈ ಅಧಿಕ ಪ್ರಸಂಗಿ! ದುಷ್ಟ! ನನಗೆ ಬುದ್ಧಿ ಹೇಳುವಷ್ಟು ಧೂರ್ತನಾದೆ ನೀನು?

(ರೋಷದಿಂದ ಹಲ್ಲುಕಡಿಯುತ್ತ ಕೈಯೆತ್ತಿ ಮುಷ್ಟಿಯನ್ನು ಬಿಗಿಹಿಡಿದು ಒಂದೇ ಏಟಿಗೆ ಅಪ್ಪಳಿಸಿ ಮುಗಿಸಿಬಿಡುವಂತೆ ಸನಿಹಕ್ಕೆ ಜಿಗಿದಾಗ ಆ ಘನ ಘೋರ ದೃಶ್ಯವನ್ನು ನೋಡಲಾರದೆ ತಕ್ಷಣ ಕಣ್ಣು ಮುಚ್ಚುವನು ಪ್ರಹ್ಲಾದ. ಮೈಮೇಲೆ ಏಟು ಬಿತ್ತೋ ಇಲ್ಲವೋ ಅದು ಸಹ ತಿಳಿಯದು. ಆ ಮುಹೂರ್ತ ಅಷ್ಟು ಗಂಭೀರವಾಗಿತ್ತು)

ಹಿರಣ್ಯಕಶಿಪು—(ಘರ್ಜಿಸಿದ) ಹೂಂ, ಹೇಳು ಇನ್ನು ಮುಂದಾದರೂ ಸರಿಯಾಗಿರುತ್ತಿಯೋ, ಇಲ್ಲವೋ?

(ಪ್ರಹ್ಲಾದ ಏನೋ ಹೇಳಲು ಪ್ರಯತ್ನಿಸಿದನು, ತುಟಿಗಳು ಅಲುಗಿದರೂ ಮಾತು ಹೊರಡಲಿಲ್ಲ. ಮುಖಬಿಂಬ ಭಾವೋದ್ವೇಗದಿಂದ ಕನ್ನಡಿಯಂತೆ ಹೊಳೆಯುತಿತ್ತು. ಸಜಲನಯನಗಳು ಮಿಂಚಿನಂತೆ ಮಿಂಚುತಿದ್ದುವು)

ಹಿರಣ್ಯಕಶಿಪು—ನಡೆ ಇಲ್ಲಿಂದ. ನನ್ನ ಕಣ್ಣೆದುರು ನಿಲ್ಲಬೇಡ. ನಿನ್ನ ದರಿದ್ರ ಮುಖ ನಾನು ನೋಡಲಾರೆ.

(ಪ್ರಹ್ಲಾದ ಅಲ್ಲಿಂದ ಹೆಜ್ಜೆ ಕೀಳುವುದರೊಳಗಾಗಿ ತಾನೇ ಅಲ್ಲಿಂದ ದಡ ದಡನೆ ಹೊರಟ ಹಿರಣ್ಯಕಶಿಪು)

ಅಂತರ್ವಾಣಿ—ಇವನು ನಿನ್ನ ಮಗನಲ್ಲ. ಪರಮ ಶತ್ರು!

(ಎದೆಯಾಳದಲ್ಲಿ ಮೊಳಗಿದ ವಾಣಿ ಕರ್ಣಪಟಲಗಳ ಮೇಲೆ ಮತ್ತೆ ಮತ್ತೆ ಪ್ರತಿಧ್ವನಿಸುತ್ತಲೇ ಇತ್ತು. ಹಿರಣ್ಯಕಶಿಪು ತೀವ್ರ ಸಂತಾಪದಿಂದ ಆಸ್ಥಾನದಕಡೆ ಹೋಗುತ್ತಾನೆ. ಪ್ರಹ್ಲಾದ ತಂದೆಯ ಕೋಪ–ಅಸಮಾಧಾನ ಗಳನ್ನು ಅರಿತರೂ ವಿಚಲಿತನಾಗಲಿಲ್ಲ. ಅವನು ಪ್ರಾಂಗಣವನ್ನು ದಾಟಿ ಆಸ್ಥಾನದ ಕಡೆ ಹೋಗುವವರೆಗೂ ದೀನ ದೃಷ್ಟಿಯಿಂದ ನಿಟ್ಟಿಸುವನು. ಮನಸ್ಸು

ನೋವಿನ ಬೀಡಾಗಿತ್ತು. ಸ್ವಲ್ಪಹೊತ್ತು ಯೋಚನಾಭಂಗಿಯಲ್ಲಿ ನಿಂತಿದ್ದು ನೋವು ಸಂಕಟಗಳನ್ನೆಲ್ಲಾ ತನ್ನಲ್ಲೇ ಹುಗಿದಿಟ್ಟುಕೊಂಡು ತಾಯಿಯನ್ನು ನೋಡಿ ಹೋಗುವ ಉದ್ದೇಶದಿಂದ ಅಂತಃಪುರಕ್ಕೆ ಹೋಗುವನು. ಅವನನ್ನು ನೋಡಿ ಹೆತ್ತೊಡಲಿಗೆ ಅದೆಷ್ಟು ಸಂತಸ ಮೂಡಿತೋ, ಅಷ್ಟೇ ಸಂಕಟವೂ ಆಯಿತು ತಾಯಿಗೆ. ಒಡನೆ ಪ್ರಗಾಢವಾದ ಆಲಿಂಗನ ಮಾಡಿಕೊಂಡು ಒಂದೇ ಬಾರಿಗೆ ಸುಖದುಃಖಗಳ ನೆರೆಯನ್ನೇ ಹರಿಸಿದಳು ಅವಳು)

ತಾಯಿ—(ಸಂಕಟಪೂರ್ಣ ದನಿಯಲ್ಲಿ) ಮಗೂ, ಹೇಗಿದ್ದೀಯಪ್ಪಾ ? ನಿನ್ನ ವಿದ್ಯಾಭ್ಯಾಸ ಹೇಗೆ ನಡೆಯುತ್ತಿದೆ ?

ಪ್ರಹ್ಲಾದ—ಚೆನ್ನಾಗಿರುವೆ ಅಮ್ಮಾ. ವಿದ್ಯಾಭ್ಯಾಸವೂ ಸರಿಯಾಗಿದೆ.

ತಾಯಿ—ಪ್ರಹ್ಲಾದ, ನೀನು ನನ್ನ ಮಾತು ಕೇಳುವಿಯಾದರೆ ಒಂದು ದೊಡ್ಡ ಉಪಕಾರಮಾಡಿದಂತಾಗುತ್ತೆ. ಏನು ಹೇಳುತ್ತಿ ಮಗೂ ?

ಪ್ರಹ್ಲಾದ—ನಿನ್ನ ಮಾತನ್ನು ಕೇಳದಿದ್ದುದೂ ಉಂಟೇ ?

ತಾಯಿ—ಹಾಗಾದರೆ ನನ್ನ ಮಾತು ಕೇಳುವಿಯಾ ?

ಪ್ರಹ್ಲಾದ—ಏನು ಹೇಳು ಖಂಡಿತ ಕೇಳುವೆ.

ತಾಯಿ—ನೀನು ತಂದೆಯನ್ನು ಎದುರು ಹಾಕಿಕೊಳ್ಳದೆ ಅವರು ಹೇಳಿದಂತೆ ಕೇಳಿಕೊಂಡು ನೆಮ್ಮದಿಯಿಂದ ಇರುವುದು ತುಂಬ ಒಳ್ಳೆಯದು. ನಿನ್ನ ಭಕ್ತಿಯನ್ನು ತೊರೆದು ಬಿಡು ಎಂದೇನೂ ನಾನು ಹೇಳುವುದಿಲ್ಲ. ಆದರೆ ಅದನ್ನು ಪ್ರದರ್ಶಿಸದಿದ್ದರೆ ಬಹಳ ಒಳ್ಳೆಯದು.

(ಮೈದಡವಿ ಮುದ್ದಿಟ್ಟು ಪ್ರೀತ್ಯಾದರದಿಂದ ನುಡಿಯುತ್ತಾಳೆ)

ಪ್ರಹ್ಲಾದ—ನಾನೇ ನಾನಾಗಿ ಯಾವುದನ್ನೂ ಪ್ರದರ್ಶಿಸುತ್ತಿಲ್ಲ. ನಾನು ಧ್ಯಾನಿಸುವಾಗ ಎಲ್ಲರೂ ನೋಡುತ್ತಾರೆ ಅಷ್ಟೆ.

(ಚಿಂತಾಭಾವದಿಂದ ನಿಟ್ಟಿಸುವನು)

ತಾಯಿ ಪ್ರೀತಿ-ದೈನ್ಯತೆಗಳ ಒಕ್ಕೂಟವಾಗಿ ನೀನು ಏನು ಮಾಡುವುದಿದ್ದರೂ ಮರೆಯಲ್ಲಿ ಮಾಡು ಮಗೂ. ನಿನ್ನ ಪಾಠ ಪ್ರವಚನಗಳನ್ನು ದೂರೀ

ಕರಿಸಬೇಡ. ನಿನ್ನ ತಂದೆಗೆ ವಿಧೇಯನಾಗಿರು. ಗುರುಗಳ ಮಾತನ್ನು ಎಂದೂ ಮೀರಬಾರದು, ಮಗೂ.

ಪ್ರಹ್ಲಾದ—ನನ್ನಲ್ಲಿ ಕಿಂಚಿತ್ತೂ ಉದ್ಧಟತನ ಇಲ್ಲ ಅಮ್ಮಾ. ನನ್ನನ್ನು ನಂಬುವುದಾದರೆ ನಂಬು.

ತಾಯಿ—(ದುಃಖದಿಂದ) ನಿನ್ನ ವರ್ತನೆಯಿಂದ ಪ್ರಭುಗಳು ಶೀರ ಸಿಟ್ಟಾಗಿದ್ದಾರೆ ಗೊತ್ತೇ ?

ಪ್ರಹ್ಲಾದ—ಗೊತ್ತು ಅಮ್ಮಾ! ಅದಕ್ಕೆ ನಾನೇನು ಮಾಡಲಿ...? ಅವರ ಸ್ವಭಾವ ನಿನಗೊತ್ತು, ಆದರೂ ಸಹ ಚಿಂತೆ ಹಚ್ಚಿಕೊಂಡಿದ್ದಿ. ಅದ ರಿಂದೇನು ಪ್ರಯೋಜನ? ಏನಾಗಬೇಕೋ ಅದಾಗುತ್ತೆ. ನಾನಂತೂ ಶ್ರೀ ವಿಷ್ಣುಭಕ್ತಿಯನ್ನು ಬಿಟ್ಟುಕೊಡಲಾರೆ.

(ಮೆಲ್ಲನೆ ತಲೆಯಾಡಿಸುವನು. ಮುಖಬಿಂಬ ಅಪೂರ್ವ ಕಳೆಯಿಂದ ಶೋಭಿಸುವುದು)

ತಾಯಿ--ಹಾಗೆಂದರೆ ಪ್ರಭುಗಳು ಸುಮ್ಮನಿದ್ದಾರೆಯೆ ? ವಿಷ್ಣುವಿನ ವೈರತ್ವ ಕಟ್ಟಿಕೊಂಡವರು ನಿನ್ನ ವಿಷ್ಣು ಭಕ್ತಿಯನ್ನು ಸಹಿಸುವುದುಂಟೇ ? ನೀನೀಗ ನಿನ್ನನ್ನೇ ಸರಿಪಡಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಜೀವಕ್ಕೆ ಅಪಾಯ ! ಅದನ್ನೂ ಸಹ ನೀನು ಯೋಚಿಸಬೇಕು. ಈ ರಾಣಾರಂಪ ನಾನು ನೋಡಲಾರೆ.

(ಅವಳು ಮಗನನ್ನು ಮುದ್ದುಗೈದು ತಲೆಯನ್ನು ನೇವರಿಸಿ ಮತ್ತೆಮತ್ತೆ ಒತ್ತಾಯಿಸಿದಳು)

ಪ್ರಹ್ಲಾದ—ಅಮ್ಮಾ, ನಾನೇನೂ ಮಾಡಲಾರೆ; ಇದು ನನ್ನ ಹತೋಟಿಗೆ ಮೀರಿದ್ದು.

ತಾಯಿ—(ದೈನ್ಯವಾಣಿಯಲ್ಲಿ) ಹಾಗೆಂದರೆ ಹೇಗೆ ಮಗೂ, ಪ್ರಭುಗಳು ಇಷ್ಟಕ್ಕೆ ಸುಮ್ಮನಾದಾರೆ ?

ಪ್ರಹ್ಲಾದ—ನನ್ನನ್ನು ಕೊಲ್ಲಬಹುದು ಅಷ್ಟೇತಾನೆ? ಹೇಗಿದ್ದರೂ ಈ ದೇಹ ಒಂದಲ್ಲ ಒಂದು ದಿನ ಬಿದ್ದು ಹೋಗಲೇಬೇಕು. ಅದಿಂದೇ ಹೋಗಲಿ ಬಿಡು. ಅದಕ್ಕೇಕೆ ಚಿಂತೆ?

ತಾಯಿ—(ಅತ್ಯಂತ ಸಂಕಟದಿಂದ) ಹಾ....! ಹಾಗೆನ್ನಬಾರದು. ನಿನ್ನ ಕರ್ತವ್ಯ ಇಷ್ಟಕ್ಕೆ ಮುಗಿಯಲಿಲ್ಲ. ಮಗೂ, ನೀನು ಪ್ರಜ್ಞಾವಂತ; ಬ್ರಹ್ಮ ದೇವನ ವರದಿಂದ ಸಂಜನಿಸಿದವನು. ನೀನು ಮನಸ್ಸು ಮಾಡಿದರೆ ಇದನ್ನು ಸುಲಭವಾಗಿ ಪರಿಹರಿಸಬಲ್ಲೆ. ಅದರಿಂದ ನನ್ನ ಹೆತ್ತೊಡಲಿಗೂ ಸಮಾಧಾನ. ನಾನು ನಿರಾಳವಾಗಿ ಉಸಿರಾಡಲೂ ಬಹುದು. ನನ್ನ ಮನವನ್ನು ನೋಯಿಸ ಬೇಡಪ್ಪಾ; ನಿನ್ನನ್ನು ಬೇಡಿಕೊಳ್ಳುವೆ.

(ಅಕ್ಷರ ಅಕ್ಷರಗಳೂ ನೋವಿನ ಆಗರದಿಂದ ಕರುಳು ಕೋರೈಸುವಂತೆ ಹರಿದು ಬಂದುವು)

ಪ್ರಹ್ಲಾದ—ಅಮ್ಮಾ, ಇದನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳಬಾರದು. ಏನೇ ಬಂದರೂ ನನಗಾಗಿ ಸಹಿಸಿಕೊ. ನಾನೂ ಸಹ ಬರುವ ಸಂಕಷ್ಟವ ನ್ನೆಲ್ಲಾ ನಿನಗಾಗಿ ಸಹಿಸಿಕೊಳ್ಳುವೆ. ಚಿಂತೆಯಿಂದ ತನುಮನಗಳ ಸ್ವಾಸ್ಥ್ಯ ವನ್ನು ಕಳೆದುಗೊಳ್ಳುವುದು ವಿನಾ ಇನ್ಯಾವ ಕಾರ್ಯ ಸಾಧನೆಯೂ ಆಗ ಲಾರದು.

ತಾಯಿ—ಇಷ್ಟೆಲ್ಲಾ ಅರಿತುಕೊಂಡ ನೀನು ನನಗೆಂತಹ ಸಂಕಟ ತಂದಿಟ್ಟದ್ದಿ ಮಗುವೆ!

ಪ್ರಹ್ಲಾದ—ಅಮ್ಮಾ, ಬೇಸರಿಸಬೇಡ. ನಾನೇ ನಾನಾಗಿ ಯಾವ ಕ್ರಮ ವನ್ನೂ ಕೈಕೊಳ್ಳುತ್ತಿಲ್ಲ ಅಥವಾ ಅನುಸರಿಸುತ್ತಿಲ್ಲ. ಎಲ್ಲಾ ಭಗವಂತನ ಇಚ್ಛೆ.

(ತಾಯಿಯನ್ನು ಕೊರಳು ಕಟ್ಟಿಕೊಂಡು ಅತ್ಯಂತ ಸಮಾಧಾನಯುಕ್ತ ವಾಣಿಯಲ್ಲಿ ನುಡಿದು ಅವಳನ್ನು ಸಮಾಧಾನಿಸಲು ಪ್ರಯತ್ನಿಸುನು)

ತಾಯಿ—ಮಗೂ, ಈ ಹೆತ್ತೊಡಲಿನ ಸಂಕಟವನ್ನು ನೀನು ಅರಿಯೆ. ಅದಲಿಂದಲೇ ನನಗೆ ಈ ಅಗಾಧವಾದ ದುಃಖವನ್ನು ತಂದಿಟ್ಟದ್ದಿ. ನೀನು

ಪ್ರಯತ್ನಿಸಿದರೆ ಇದನ್ನು ನಿವಾರಿಸುವುದು ಹೆಚ್ಚು ಕಷ್ಟವೇನೂ ಆಗಲಾರದು. ಯೋಚಿಸು ಮಗೂ, ಇದು ನಿನ್ನ ಪ್ರಯತ್ನಕ್ಕೆ ಮೀರಿದ್ದಲ್ಲ. ಸುಖ ಶಾಂತಿಗಳು ನಿನ್ನಲ್ಲೇ ಇವೆ. ನೀನೇ ಅವನ್ನು ಎರಡೂ ಕೈಗಳಿಂದ ತಳ್ಳುತ್ತಿರುವುದರಿಂದ ನಿನಗೂ ಕಷ್ಟ; ನನಗೂ ಕಷ್ಟ. ನೀನಿನ್ನೂ ಚಿಕ್ಕವನಾಗಿರುವುದರಿಂದ ತಂದೆಯ ಆಣತಿಯಂತೆ ನಡೆಯಬೇಕಾದದ್ದು ನಿನ್ನ ಕರ್ತವ್ಯ.

ಪ್ರಹ್ಲಾದ—ನೋಡೋಣ; ನಮ್ಮ ಕೈಯ್ಯಲ್ಲೇನಿದೆ? ಎಲ್ಲವೂ ಭಗವಂತನ ಇಚ್ಛೆ.

ತಾಯಿ—(ಗಂಭೀರವಾಣಿಯಲ್ಲಿ) ಈಗ ನಮ್ಮ ಶಾಂತಿ ಕೆಡುತ್ತಿರುವುದು ನಿನ್ನಿಂದ ಎಂಬುದನ್ನು ನೀನು ಖಂಡಿತ ಮನಗಾಣಬೇಕು. ಅಂದರೆ, ನೀನಿದನ್ನು ತೊಡೆದು ಹಾಕಲು ಶಕ್ತನಾಗುವೆ.

ಪ್ರಹ್ಲಾದ—(ಕೈಮುಗಿದುಕೊಂಡು ನಮ್ರವಿನಮ್ರನಾಗಿ) ಅಮ್ಮಾ! ನಾನು ಭಗವಂತನ ಅಧೀನ.

(ಆ ಮಾತು ಕೇಳಿ ಅತ್ಯಂತ ನಿರಾಶೆಯ ಕುಂಡದಲ್ಲಿ ಬೇಯುತ್ತ ಮೂರ್ಛೆ ಹೋಗುತ್ತಾಳೆ ತಾಯಿ. ಕಣ್ಣುಗಳಲ್ಲಿ ಕಂಬನಿಗಳು ಫಳಫಳ ಮಿಂಚಿದುವು)

(ಪರದೆಯು ಬೀಳುವುದು)

ದೃಶ್ಯ–೬

(ಪ್ರಹ್ಲಾದನ ನಿಶ್ಚಲವಾದ ಅದ್ಭುತ ವಿಷ್ಣುಭಕ್ತಿ ಓರಗೆಯ ಮಕ್ಕಳಿಗೆ ಮನೋಹಾರೀ ಪ್ರಸಂಗ. ಅವನು ಧ್ಯಾನಸ್ಥನಾಗಿ ಸಂಪೂರ್ಣ ನೈವರಿತು ಲಿಖಿತ ಚಿತ್ರದಂತೆ, ರಚಿತ ಮೂರ್ತಿಯಂತೆ ಕುಳಿತುಬಿಟ್ಟರೆ ಅವನನ್ನು ಕಣ್ತುಂಬ ನೋಡುವುದರಲ್ಲಿ ಅವರಿಗೆ ಎಲ್ಲಿಲ್ಲದ ಆಸಕ್ತಿ. ಅವನ ಭಕ್ತಿ, ಧ್ಯಾನ, ಅವನ ಪದವಿಕ್ಷೇಪ, ಅವನ ಕಂಠಸ್ವನ, ಅವನ ದೃಷ್ಟಿ ಎಲ್ಲದರಲ್ಲೂ ಪ್ರಧಾನವಾಗಿ ಕಾಣಿಸುವುದು ಅಪೂರ್ವ ಛಂದೋಮಯತೆ. ಆದರೂ ಸಹ, ಎಲ್ಲರ ಮನದಲ್ಲೂ ಹೊಮ್ಮುವ ಭಾವ ತೀರ ಭಿನ್ನ ಭಿನ್ನ. ಒಮ್ಮೆ ಕೇವಲ ಬೆಪ್ಪು ಎಂಬ ಭಾವನೆ ಮೂಡಿಬಂದರೆ ಇನ್ನೊಮ್ಮೆ ಅರೆಹುಚ್ಚನಿರಬಹುದು ಎಂಬ ಏಕರೀತಿಯ ಊಹೆ. ಕ್ರಮಕ್ರಮೇಣ ಭೂತಪೀಡೆಗಳ ಅನುಮಾನದಿಂದ ಧಾನಸ್ಥ ಬಾಲಕನ ಬಳಿಗೆ ಹೋಗಲು ಹೆದರುತಿದ್ದುದೂ ಉಂಟು. ಕಾಲಕ್ರಮದಲ್ಲಿ ಮಕ್ಕಳ ಮನದಲ್ಲಿದ್ದ ಹೆದರಿಕೆ ಮಾಯವಾಗಿ ಅವನೇನು ಮಾಡುತ್ತಾನೆಂಬುದನ್ನು ತಿಳಿದುಕೊಳ್ಳುವ ಕುತೂಹಲ ಬೆಳೆದು ಬಂತು)

ವಜ್ರಮತಿ—ನೀನು ಕಣ್ಣು ಮುಚ್ಚಿಕೊಳ್ಳುವುದೇಕೆ ಪ್ರಹ್ಲಾದ ?

ಪ್ರಹ್ಲಾದ—ಭಗವಧ್ಯಾನ ಮಾಡಲು ತುಂಬ ಏಕಾಗ್ರತೆ ಬೇಕು, ಅದಕ್ಕಾಗಿ.

ಚಿತ್ರಸೇನ—ಧ್ಯಾನದಿಂದ ಆಗುವುದೇನು ?

ಪ್ರಹ್ಲಾದ—ಮನಸ್ಸಿಗೆ ಶಾಂತಿ; ಆತ್ಮಕ್ಕೆ ಆಹ್ಲಾದ.

ಧನಕೋಟಿ–ಇದಂತೂ ವಿಚಿತ್ರ....

ಪಾಂಡು—ಹಾಗೆಂದರೇನು ?

ಪ್ರಹ್ಲಾದ—ಪರಮಾತ್ಮನ ಚಿಂತನೆ ಮತ್ತು ಪ್ರಾರ್ಥನೆ.

ಧನಕೋಟಿ—ಸ್ವಲ್ಪ ಬಿಡಿಸಿ ಹೇಳಯ್ಯಾ, ಅರ್ಥವೇ ಆಗುವುದಿಲ್ಲವಲ್ಲಾ?

ಪ್ರಹ್ಲಾದ—ಭಗವಂತನನ್ನು ಕುರಿತು ಏಕಪ್ರಕಾರವಾಗಿ ನೆನೆಯುವುದು.

ಚಂಡಮಿತ್ರ—ಭಗವಂತ ಎಂದರೆ ಯಾರು ?

ವಜ್ರಮತಿ—ನಿನ್ನ ತಂದೆಯೇ ಇರಬೇಕು.

ಪ್ರಹ್ಲಾದ—(ಮೆಲ್ಲಗೆ ತಲೆಯಾಡಿಸುತ್ತ) ಅಲ್ಲಪ್ಪಾ, ನನ್ನ ತಂದೆ ಭಗವಂತನಾಗುವುದು ಹೇಗೆ? ಅವನು ರಾಕ್ಷಸರಾಜ ಮಾತ್ರ. ಭಗವಂತ ಎಂದರೆ ಸೃಷ್ಟಿಕರ್ತನಾದ ಶ್ರೀ ವಿಷ್ಣು ಎಂದು ತಿಳಿಯಬೇಕು. ಅವನೇ ಈ ವಿಶ್ವ ಪ್ರಪಂಚಕ್ಕೆಲ್ಲಾ ಒಡೆಯ ಮತ್ತು ಪಾಲಕ.

ಚಿತ್ರಸೇನ—ನಿನ್ನ ಮಾತು ಬಹಳ ವಿಚಿತ್ರವಾಗಿದೆ. ಹಾಗಾದರೆ ನಿನ್ನ ತಂದೆಗಿಂತಲೂ ದೊಡ್ಡವನೇ ?

ಪ್ರಹ್ಲಾದ—ಹೌದಪ್ಪಾ. ಶ್ರೀವಿಷ್ಣು ಎಲ್ಲರಿಗಿಂತಲೂ ದೊಡ್ಡವನು.

ಧನಕೋಟಿ—ನಿನ್ನ ತಂದೆಯೇ ಲೋಕೇಶ್ವರ. ಅವರೇ ನಮ್ಮೆಲ್ಲರ ಪಾಲಕ. ಇದೇನು ಹೀಗೆಂತಿ ?

ಪ್ರಹ್ಲಾದ—ಅದು ತಪ್ಪುಗ್ರಹಿಕೆ. ನನ್ನ ತಂದೆ ರಾಕ್ಷಸಕುಲಕ್ಕೆ ಮಾತ್ರ ಒಡೆಯ. ಈ ಬೃಹದ್‌ಲೋಕಕ್ಕೆ ಭಗವಂತನಲ್ಲದೆ ಇನ್ನಾರು ಒಡೆಯನಾಗಲು ಸಾಧ್ಯ?

ವಜ್ರಮತಿ—ಅದನ್ನು ಯಾವ ಆಧಾರದಮೇಲೆ ಹೇಳುತ್ತಿ ?

ಚಿತ್ರಸೇನ—ನೀನದನ್ನು ಸ್ವತಃ ಕಣ್ಣಿಂದ ಕಂಡಿಲ್ಲವಷ್ಟೆ ?

ಪ್ರಹ್ಲಾದ—ಕಣ್ಣಿಂದ ಕಾಣದಿದ್ದರೂ ಮನಸ್ಸಿನಿಂದ ಊಹಿಸಬಹುದು.

ಧನಕೋಟಿ—ಬರೀ ಊಹೆ....?

(ಒಡನೆ ಕಿಲಕಿಲನೆ ನಕ್ಕು ಬಿಟ್ಟ. ಎಲ್ಲರೂ ಅವನೊಂದಿಗೆ ದನಿಗೂಡಿಸುವರು)

ಪ್ರಹ್ಲಾದ—ಅದಕ್ಕೆ ನಗುವುದೇಕೆ? ಈ ಭವ್ಯ ಸೃಷ್ಟಿಯ ಒಂದೊಂದು ರೂಪುರೇಷೆಗಳನ್ನು ಸರಿಯಾಗಿ ತುಲನೆ ಮಾಡಿ ನೋಡಿದರೆ ನಿಮಗೆ ಸರ್ವತ್ರ ಅರ್ಥವಾದೀತು.

ಚಂಡಮಿತ್ರ—ನಿನ್ನ ರೀತಿಯೇ ವಿಚಿತ್ರ.

ಧನಕೋಟಿ—ಅದೇನೋ ಖಂಡಿತ ಹೌದು.

(ಎಲ್ಲರೂ ಮುಸು ಮುಸು ನಗುವರು)

ಪ್ರಹ್ಲಾದ—ಅಂದರೆ ...? ಸರಿಯಾಗಿ ಹೇಳಬಾರದೆ?

ಚಂಡಮಿತ್ರ—ಈಗ ಲೋಕಕ್ಕೊಡೆಯನಾದ ನಿನ್ನ ತಂದೆ ಕಣ್ಣಿಗೆ ಕಾಣಿಸಿಗುತ್ತಾನಷ್ಟೆ? ಅದೇ ನಿನ್ನ ದೇವರೇಕ ಕಾಣಸಿಗುತ್ತಿಲ್ಲ?

ಪ್ರಹ್ಲಾದ—ನನ್ನ ತಂದೆ ಸಾಮಾನ್ಯ ದೊರೆ. ಅವನು ಕಾಣಿಸಿಕೊಳ್ಳಲೇ ಬೇಕು! ಕಾಣಿಸಿಕೊಳ್ಳುತ್ತಾನೆ. ಭಗವಂತನನ್ನು ಈ ದರ್ಜೆಗೆ ಎಳೆಯುಲಾಗುವುದಿಲ್ಲ. ಅವನು ಗೋಚರಾತೀತ; ಅಪ್ರಮೇಯ.

ಚಿತ್ರಸೇನ—ಅಂದರೆ, ಅವನು ಕಾಣಿಸುವುದೇ ಇಲ್ಲವೇ?

ಪ್ರಹ್ಲಾದ—ಕಾಣಿಸುತ್ತಾನೆ, ಭಕ್ತಿಯಿಂದ ಭಜಿಸಿದರೆ ಮಾತ್ರ.

ವಜ್ರಮುಖಿ—ಅವನು ನಿನಗೆಂದಾದರೂ ಕಂಡಿದ್ದಾನೆಯೇ?

ಪ್ರಹ್ಲಾದ—ಆ ಭಾಗ್ಯ ಬರಬೇಕಾದರೆ ನಾವು ಇನ್ನೂ ಬಹಳಷ್ಟು ಎತ್ತರ ಏರಬೇಕು.

ಪಾಂಡು—ಹಾಗಾದರೆ ಇದೆಲ್ಲಾ ನಿನ್ನ ಬರಿಯ ಊಹೆ?

ಧನಕೋಟಿ—ಅಂದಮೇಲೆ ಅವನಿದ್ದಾನೆ ಎಂಬುದಕ್ಕೆ ನಿನಗೆ ಕುರುಹಾದರೂ ಏನು?

ಪಾಂಡು—ಯಾವ ಆಧಾರವೂ ಇಲ್ಲದ ನಿನ್ನ ನಂಬುಗೆ ಟೊಳ್ಳಲ್ಲವೇ?

ಪ್ರಹ್ಲಾದ—ವಿಶಾಲ ಜಗತ್ತಿನ ನಿಯಂತ್ರಣವೇ ಅದಕ್ಕೆ ಕುರುಹು. ಭಗವಂತನಿಲ್ಲದೆ ಇದು ಇನ್ನಾರಿಂದ ಸಾಧ್ಯ? ಯೋಚಿಸಿ ನೋಡಿರಿ.

ಚಂಡಮಿತ್ರ—ಹಾಗಾದರೆ ಅವನಿದ್ದಾನೆ ಎಂಬುದು ಶತಸಿದ್ಧ.

ಪ್ರಹ್ಲಾದ—ಹೌದು. ಅದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು.

ವಜ್ರಮತಿ—ಹೋಗಲಿ, ಅವನು ಯಾರಿಗಾದರೂ ಕಂಡಿದ್ದಾನೆಯೇ?

ಪ್ರಹ್ಲಾದ—ಹಾಗೆ ಕಂಡವರೆಷ್ಟು ಮಂದಿ ಇಲ್ಲ? ಬೇಕಾದಷ್ಟು ಮಂದಿ ಕಂಡಿದ್ದಾರೆ.

ಪಾಂಡು—ಅಂದರೆ ಅವನು ಹೇಗಿರುತ್ತಾನೆ ಹೇಳಯ್ಯಾ.

ಪ್ರಹ್ಲಾದ—ಅವನು ಸೂರ್ಯನಂತೆ ಪ್ರಕಾಶಮಾನವಾದವನು. ಅವನನ್ನು ನೋಡಲು ಈ ಎರಡು ಕಣ್ಣುಗಳು ಸಾಲವು ಎಂಬುದನ್ನು ಊಹಿಸಬಹುದು, ನೀವು ಪ್ರಯತ್ನಿಸಿದರೆ.

ಚಂಡಮಿತ್ರ—ನೀನು ಹೀಗೆ ಓದು ವಿದ್ಯೆ ಬಿಟ್ಟು ಸದಾ ಧ್ಯಾನಿಸುವುದರ ಲಾಭವೇನು?

ಪ್ರಹ್ಲಾದ—ನಾನವನನ್ನು ನೋಡಬಯಸುವೆ. ಧ್ಯಾನ ಭಕ್ತಿಗಳು ಬಲಿತ ಮೇಲೆ ಅವನ ದರ್ಶನವಾಗಬಹುದು ಎಂಬ ಅಭಿಲಾಷೆಯಿಂದ.

(ಆ ಉತ್ತರದಿಂದ ಎಲ್ಲರ ಕುತೂಹಲವೂ ಕೊನರಿತು)

ಪಾಂಡು—ಭಕ್ತಿಧ್ಯಾನಗಳು ಬಲಿತರೆ ಅವನ ದರ್ಶನವಾಗುವುದೇ?

ಪ್ರಹ್ಲಾದ—ಖಂಡಿತ.

(ಒಡನೆ ಎಲ್ಲರೂ ಉತ್ಸಾಹಿತರಾದರು)

ವಜ್ರಮತಿ—ಹಾಗಾದರೆ ಭಗವಂತನ ದರ್ಶನ ನಾವೂ ಮಾಡಬೇಕಲ್ಲ, ಏನು ಮಾಡೋಣ?

ಪ್ರಹ್ಲಾದ—ಎಲ್ಲರೂ ಅವನನ್ನು ಕುರಿತು ಧ್ಯಾನಮಾಡಿರಿ.

ಪಾಂಡು—ಧ್ಯಾನ ಅಂದರೆ ಏನು? ಅದರ ಕ್ರಮ ಹೇಗೆ?

ಪ್ರಹ್ಲಾದ—ಭಗವಂತ ಅಥವಾ ಶ್ರೀವಿಷ್ಣು ಎಂಬ ವ್ಯಕ್ತಿಯನ್ನು ಕುರಿತು

ಯೋಚಿಸುತ್ತ ಮನವನ್ನು ಆತನಲ್ಲೇ ನೆಟ್ಟು ಅತ್ತಿತ್ತ ಚಲಿಸದಂತೆ ಕಟ್ಟಿ ಹಾಕುವುದು.

ಚಂಡಮಿತ್ರ—(ಒಂದು ಕ್ಷಣ ಯೋಚಿಸಿ) ಅದು ಹೇಗೆ? ಒಂದಿಷ್ಟು ಸರಿಯಾಗಿ ವಿವರಿಸು. ನಾವು ತಿಳಿದುಕೊಳ್ಳೋಣ. ಅದರಿಂದ ನಮ್ಮ ಬುದ್ಧಿ ಭಾವಗಳು ಬೆಳೆಯುವುದಾದರೆ ಯಾರಿಗೆ ಬೇಡ?

(ಆಗ ಪ್ರಹ್ಲಾದ ಪರಮಾನಂದ ಪುಳಕಿತನಾಗಿ ಎಲ್ಲರನ್ನೂ ನೋಡುತ್ತಾನೆ. ಎಲ್ಲರ ಪ್ರಶ್ನೆಯಲ್ಲೂ ತುಂಬಿ ತುಳುಕುತಿದ್ದುದು ಆಶಾಭರಿತ ಕುತೂಹಲ; ವಿಷ್ಣು ತತ್ವದ ಪೂರ್ವಭಾವೀ ಸಂಕಲ್ಪ; ಎಲ್ಲರೂ ತನ್ನ ಹಾದಿಗೇ ಬರುತಿದ್ದಾರೆಂದರೆ ಕೇಳಬೇಕೆ? ಸಂತಸದ ಝುರಿ ಮೋಹಿನೀ ಮಂತ್ರದಂತೆ ಮೈಯ್ಯೆಲ್ಲಾ ಹರಿದಾಡಿ ಹೃದ್ಗಡಲು ಹಾಲ್ಗಡಲಿನಂತೆ ಉಕ್ಕೇರಿ ಬಂತು. ಒಡನೆ ಎಲ್ಲರನ್ನೂ ಸುತ್ತ ಮುತ್ತ ಕೂಡಿಸಿಕೊಂಡು ಭಜನೆಗೆ ಆರಂಭಿಸುತ್ತಾನೆ. ಹಾಗೇ ಸ್ವಲ್ಪ ಹೊತ್ತು ಕಳೆದಿರಬಹುದು. ಹೊರ ಹೋಗಿದ್ದ ಚಂಡಾಮರ್ಕರು ಗುರುಕುಲಕ್ಕೆ ಹಿಮ್ಮರಳಿದಾಗ ಒಳಗಡೆ ದೊಡ್ಡ ಕೋಲಾಹಲವೇ ನಡೆಯುತಿತ್ತು. ಭಜನೆಯ ಮತ್ತಿನಲ್ಲಿ ಕುಣಿಯುವವರು ಕೆಲವರು; ತಾಳಹಾಕುವವರು ಕೆಲವರು; ಅದರೊಂದಿಗೇನೇ ಸ್ತೋತ್ರಗಳ ಕಂಠಪಾಠ. ಎಲ್ಲರಿಗೂ ಮಧ್ಯೆ ಭೂಷಣವಾಗಿ ಮಂಡಿಸಿದ ಪ್ರಹ್ಲಾದ ಕಣ್ಮುಚ್ಚಿ ಆವೇಶಪೂರ್ಣವಾಗಿ ಭಕ್ತಿ ಪ್ರಧಾನವಾಗಿ ಸ್ತೋತ್ರಗೈಯ್ಯುತಿದ್ದಾನೆ!

ಬಾಗಿಲ ಹೊಸ್ತಿಲ ಬಳಿ ಚಂಡಾಮರ್ಕರು ಸ್ತಬ್ಧ ಹೃದಯರಾಗಿ ಡಂಗು ಬಡಿದವರಂತೆ ನಿಂತು ನೋಡಿದರು. ಆದರೂ ಹುಡುಗರಲ್ಲಿ ಯಾರಿಗೂ ತಮ್ಮ ಆಗಮನದ ಪರಿವೆಯೇ ಇಲ್ಲ. ಭಕ್ತಿ ಭಜನೆಗಳ ಮಂಪರ ಸರ್ವಾಂಗವಾಗಿ ಎಲ್ಲರನ್ನೂ ವ್ಯಾಪಿಸಿ ಬಿಟ್ಟಿದೆ. ಆ ಅನಿರೀಕ್ಷಿತ ಪ್ರಸಂಗ ಮತ್ತು ಅನಿರೀಕ್ಷಿತ ದೃಶ್ಯಗಳಿಂದ ಎದೆ ಈಗಲೀಗ ಬಿರಿಯುವಂತೆ ಭಾಸವಾಯಿತು ಗುರುಗಳಿಗೆ. ಆ ಕೆಟ್ಟ ಸೋಂಕು ಇತರ ಬಾಲಕರಿಗೂ ಹರಡಿದುದು ಅಸಹನೀಯವಾದ ವಿಚಾರ. ಕೋಪ-ತಾಪಗಳಿಂದ ಮೈಯೆಲ್ಲಾ ಬೆಂಕಿಯಂತೆ ಬೇಯತೊಡಗಿತು. ತಕ್ಷಣ ಒಳನುಗ್ಗಿ ಕೈಗೆ ಬೆತ್ತವನ್ನು ತೆಗೆದುಕೊಂಡು ಹಲ್ಲುಕಡಿಯುತ್ತ ಝಳಪಿಸಿದರು).

ಚಂಡಾಮರ್ಕ— (ರೋಷಾವೇಷದಿಂದ) ಎಲಾ, ಹುಡುಗರಿರಾ? ನೀವು ಮಾಡುತ್ತಿರುವುದೇನು ?ಇದೇನು ನಾಟಕ ಶಾಲೆ ಎಂದುಕೊಂಡಿರೋ ಹೇಗೆ?

(ಗುರು ಗರ್ಜನೆ ಹೊರಬಿದ್ದರೂ ಹುಡುಗರು ಸಂಪೂರ್ಣ ಮೈಮರೆತಿದ್ದುದರಿಂದ ಗುರುಗಳನ್ನು ಲವಲೇಶವೂ ಗಮನಿಸಲಿಲ್ಲ. ಆಗ ಚಂಡಾಮರ್ಕರ ಕೋಪ ನೆತ್ತಿಗೇರಿತು. ಬೆತ್ತವನ್ನು ಬಿಗಿಹಿಡಿದು ಎಲ್ಲರಿಗೂ ಚೆನ್ನಾಗಿ ಬಿಗಿದರು; ಏಟು ಪ್ರಹ್ಲಾದನಿಗೂ ತಪ್ಪಲಿಲ್ಲ. ಗುಂಪಿನಲ್ಲಿ ಕಂಡೂ ಕಾಣದಂತೆ ಅವನಿಗೆ ಜೋರಾಗಿಯೇ ಬಿಗಿದರು; ಕೆಲವರನ್ನು ಜುಟ್ಟು ಹಿಡಿದೆತ್ತಿ ನೆಲಕ್ಕೆ ಕುಕ್ಕಿದರು. ಗುರುಗಳ ಉಗ್ರಕೋಪವನ್ನು ನೋಡಿ ಕೆಲವರು ಭಯಭೀತರಾದರು. ಇನ್ನು ಕೆಲವರು ಧೈರ್ಯತಾಳಿ ಮಿಕಿಮಿಕಿ ನೋಡುತ್ತ ನಿಂತರು)

ಚಂಡಾಮರ್ಕ—(ಉಚ್ಚ ಸ್ವರದಲ್ಲಿ) ಏನಿದು ಈ ರಾಣಾರಂಪ?

(ಒಮ್ಮೆಗೇ ಭಕ್ತಿಯು ಹೆಗ್ಗಡಲು ಅಲ್ಲಾಡಿ ಹೋಯಿತು. ಬಾಲಕರು ವಿಸ್ಮಯ ಚಕಿತರಾದರು)

ಪಾಂಡು—(ಹುಬ್ಬೆತ್ತಿ ನೋಡುತ್ತ ಗಂಭೀರವಾಣಿಯಲ್ಲಿ) ನೀವೇಕೆ ಇಷ್ಟೊಂದು ಸಿಟ್ಟಾದಿರಿ ಗುರುಗಳೆ? ನಾವು ನಮ್ಮ ಪಾಠವನ್ನು ಮೊದಲೇ ಓದಿದ್ದೇವೆ.

ಚಂಡಾಮರ್ಕ—ಪಾಠ ಓದಿದ್ದರೆ ಭಜನೆ ಮಾಡು ಎಂದು ಅಪ್ಪಣೆ ಕೊಟ್ಟವರಾರು?

ಪ್ರಹ್ಲಾದ—(ಕುತೂಹಲ ಭರಿತ ಭಾವದಿಂದ) ಭಜನೆಮಾಡಲು ಅಪ್ಪಣೆಯೇಕೆ ಗುರುಗಳೇ! ಅದು ನಮ್ಮ ನಮ್ಮ ಆತ್ಮ ಪ್ರೇರಿತ.

ಚಂಡಾಮರ್ಕ—ನಿನ್ನಿಂದ ನನ್ನ ಗುರುಕುಲ ಹಾಳಾಯ್ತು! ನನ್ನ ಪರಿಶ್ರಮ ವ್ಯರ್ಥ! ಪಾಪಿ, ದುಷ್ಟ! ನೀನೇಕೆ ನನ್ನ ಗುರುಕುಲಕ್ಕೆ ಬಂದೆ ಹೇಳು?

(ಚಂಡಾಮರ್ಕರು ತೀವ್ರ ಅಸಮಾಧಾನದಿಂದ ತಲೆ ಚಚ್ಚಿಕೊಳ್ಳುವರು)

ಧನಕೋಟಿ—ವೃಥಾ ಆರೋಪಣೆ.... ತಪ್ಪು ಕಲ್ಪನೆ....

ವಜ್ರಮತಿ—ಗುರುಗಳೇ ಏಕಷ್ಟು ಕೋಪ? ಪ್ರಹ್ಲಾದ ಚೆನ್ನಾಗಿ ಭಜನೆ ಹೇಳಿಕೊಡುತ್ತಾನೆ. ಅದರಲ್ಲಿ ನೀವೂ ಕೂಡ ಪಾಲ್ಗೊಳ್ಳಬಹುದು. ದೇವರ ಭಜನೆ ಯಾರು ಬೇಕಾದರೂ ಮಾಡಬಹುದಂತೆ. ನೀವು ನಿಧಾನಿಸಿ ಯೋಚಿಸುವುದು ಒಳ್ಳೆಯದು. ಇಷ್ಟೊಂದು ಗಡಿಬಿಡಿ ಎಬ್ಬಿಸಿದರೆ ಏನರ್ಥವಾದೀತು?

ಚಂಡಾಮರ್ಕ—ಎಲೋ ಪುಂಡ! ನನಗೆ ಬುದ್ಧಿ ಹೇಳುವಷ್ಟು ಧೈರ್ಯವೇ ನಿನಗೆ? ನಿನ್ನ ಪುಂಡತನಕ್ಕೆ ಸರಿಯಾದ ಶಾಸ್ತಿ ಮಾಡಿಸುವೆ.

ಪ್ರಹ್ಲಾದ—ಗುರುಗಳೇ, ದಯವಿಟ್ಟು ಕೋಪಿಸಿಕೊಳ್ಳಬಾರದು.

ಚಂಡಾಮರ್ಕ—ಎಲೈ, ತಿಳಿಗೇಡಿ! ನೀನು ಉದ್ಧಾರವಾದದ್ದು ಸಾಲದೆ ಎಲ್ಲರನ್ನೂ ಉದ್ಧಾರಮಾಡುತಿದ್ದೀಯೇನು? ಇನ್ನು ಸಹಿಸಿಕೊಳ್ಳಲು ನನ್ನಿಂದ ಸಾಧ್ಯವೇ ಇಲ್ಲ. ಈಗಲೇ ಎಲ್ಲರೂ ನಡೆಯಿರಿ. ನಿಮಗೆ ಸರಿಯಾದ ಶಾಸ್ತಿಯಾಗದಿದ್ದರೆ ಬುದ್ಧಿ ಬರುವುದೇ ಇಲ್ಲ!

ಪಾಂಡು—ಗುರುಗಳೇ, ನಾವು ಮಾಡಿದ್ದು ಕೆಟ್ಟಕೆಲಸವಲ್ಲ ಭಗವಂತನ ಭಜನೆ. ಅದಕ್ಕೇಕೆ ಕೋಪ? ಅದರಿಂದ ನಮ್ಮ ಆತ್ಮೋದ್ಧಾರವಾದರೆ ಒಳ್ಳೆಯದಲ್ಲವೇ?

(ಚಂಡಾಮರ್ಕರಿಂದ ಇನ್ನು ತಡೆಯಲಾಗಲಿಲ್ಲ. ಅವರಲ್ಲಿ ಉಳಿದಿದ್ದ ಅಲ್ಪಸ್ವಲ್ಪ ಸೈರಣೆಯೂ ಗಾಳಿಯಲ್ಲಿ ತೂರಿ ಹೋಯಿತು. ಮುಂದಿನ ಭಯಂಕರ ಅನಾಹುತದಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಬೇರೆ ದಾರಿಕಾಣದೆ ಅವರೆಲ್ಲರನ್ನೂ ಕುರಿಗಳನ್ನು ಅಟ್ಟುವಂತೆ ಅಟ್ಟಿಕೊಂಡು ನೇರವಾಗಿ ಹಿರಣ್ಯಕಶಿಪುವಿನ ಆಸ್ಥಾನಕ್ಕೇ ಬಂದು ಬಿಟ್ಟರು! ಭಯ ಭೀತಿಯಿಂದ ಎದೆ ಡಬಡಬ ಹೊಡೆದುಕೊಳ್ಳುತಿತ್ತು. ಬಾಯಿ ಬಿಡಲೂ ಅಧೈರ್ಯ; ಹೇಳಿಕೊಳ್ಳಲೂ ಅಧೈರ್ಯ; ಸುಮ್ಮನೆ ಕೈಮುಗಿದು ಅಡ್ಡಬಿದ್ದು ಸ್ತಂಭೀಭೂತರಾಗಿ ನಿಂತುಬಿಟ್ಟರು. ತಗ್ಗಿಸಿದ ತಲೆಯನ್ನು ಎತ್ತಲೇ ಇಲ್ಲ)

ಹಿರಣ್ಯಕಶಿಪು—(ಉಚ್ಚಸ್ವರದಲ್ಲಿ) ಏನಿದು? ಏನು ಸಮಾಚಾರ?

(ದೃಷ್ಟಿ ಚಂಡಾಮರ್ಕರ ಕಡೆಗೂ ಹುಡುಗರ ಕಡೆಗೂ ದುಂಬಿಯಂತೆ ಹರಿದಾಡಿತು)

ಚಂಡಾಮರ್ಕ - ಸ್ವಾಮಿ, ಮಹಾಪ್ರಭೂ! (ಮುಂದೆ....ಪ್ರಯತ್ನಿಸಿದರೂ ಮಾತು ಹೊರಡಲಿಲ್ಲ)

ಹಿರಣ್ಯಕಶಿಪು—ಏಕೆ ಬಂದಿದ್ದೀರಿ, ಏನಾಯಿತು ?

ಚಂಡಾಮರ್ಕ —ಪ್ರಭುಗಳು...ಪರಾಂಬರಿಸಬೇಕು!(ಗಡಗಡ ನಡುಗುತ್ತ ಒಡಕು ದನಿಯಲ್ಲಿ) ಪ್ರಹ್ಲಾದ ಕು...ಮಾರನು...ಎಲ್ಲಾ ಮಕ್ಕಳಿಗೂ ದೇ....ವರ ....ಭಜನೆ ಹೇಳಿಕೊಟ್ಟು....ಅವರ ತಲೆಯನ್ನೆಲ್ಲಾ....ಕೆಡಿಸಿ....ಬಿಟ್ಟಿದ್ದಾನೆ....! ಈಗ ಎಲ್ಲರಿಗೂ ಅದೇ ಜಾ....ಡ್ಯ ಅಂಟಿಹೋಗಿದೆ....ಸ್ವಾ....ಮಿ, ಮಹಾಪ್ರಭೂ! ನಾನಿನ್ನು....ಈ....ಹುಡುಗರನ್ನು ಸಂಭಾಳಿಸಲಾರೆ....ನನ್ನ ಶಕ್ತಿಯೆಲ್ಲಾ ....ಉಡುಗಿ ಹೋಗಿದೆ. (ಮತ್ತೆ ಕೈಮುಗಿದು ಅಡ್ಡ ಬೀಳುವರು)

ಹಿರಣ್ಯಕಶಿಪು—(ಕೋಪಾವೇಶದಿಂದ ಮೈಯೆಲ್ಲಾ ಬೆಂಕಿಬೆಂಕಿಯಾಗಿ ಮಗನ ಕಡೆ ನೋಡುತ್ತ) ಲೋ, ಪ್ರಹ್ಲಾದ! ಶತಮೂರ್ಖ! ನಿನಗಿನ್ನೂ ಆ ಕೀಳು ಜಾಡ್ಯ ಬಿಡಲಿಲ್ಲವೋ ?

(ಪ್ರಹ್ಲಾದ ಬಾಗಿದ ತಲೆಯೆತ್ತಲಿಲ್ಲ. ತಂದೆಯ ಕೋಪದ ಕಾವು ಮೈ ನಡಗಿಸುವಂತಿತ್ತು. ಏನು ಹೇಳಲೂ ಬಾಯಿ ಬರಲಿಲ್ಲ)

ಹಿರಣ್ಯಕಶಿಪು—(ಮಗನನ್ನು ರಟ್ಟೆ ಹಿಡಿದು ದರದರನೆ ತನ್ನ ಸಮೀಪಕ್ಕೆ ಎಳೆತಂದು) ಈಗ ಹೇಳು! ಈ ಕೆಟ್ಟ ನಡತೆಯನ್ನು ಎಲ್ಲಿ ಕಲಿತೆ? ನಿನ್ನ ಉದ್ದೇಶವೇನು? ಏನು ಮಾಡಬೇಕೆಂದಿದ್ದಿ ?

ಪ್ರಹ್ಲಾದ—ನಾನೇ ಕಲಿತೆ ಅಪ್ಪಾಜಿ. ದೈವಭಕ್ತಿ–ವಿಷ್ಣು ಸ್ತೋತ್ರ ಕೆಟ್ಟದ್ದಲ್ಲ ಎಂದು ನನ್ನ ನಂಬುಗೆ.

ಹಿರಣ್ಯಕಶಿಪು—ಎಲೋ ಕೇಡಿ! ಕೆಟ್ಟದ್ದಲ್ಲವೇ ಇದು ?

ಪ್ರಹ್ಲಾದ—ನಿಮ್ಮ ತಿಳಿವಳಿಕೆ ತಪ್ಪು. ವಿಷ್ಣುವೇ ಸೃಷ್ಟಿಕರ್ತ. ಅವನನ್ನು ಪೂಜಿಸುವುದರಿಂದ ಯಾವ ದೋಷವೂ ಇಲ್ಲ, ಅಪ್ಪಾಜಿ!

ಹಿರಣ್ಯಕಶಿಪು—ಧೂರ್ತ! ನನಗೆ ತಿಳಿವಳಿಕೆ ನೀಡುವಷ್ಟು ಬುದ್ಧಿ ಬೆಳೆಯಿತಲ್ಲವೇ ನಿನಗೆ? ಈ ತಲೆ ಹರಟೆಯೇ ನಿನ್ನನ್ನು ಹಾಳು ಮಾಡಿದ್ದು! ಸಾಕು, ಮಾಡು! ನನಗೆದುರಾಡುವಷ್ಟು ಸೊಕ್ಕು ಬಂತೇ ನಿನಗೆ? ನನ್ನನ್ನು ಏನೆಂದು ತಿಳಿದುಕೊಂಡಿರುವೆ....?

ಪ್ರಹ್ಲಾದ—ತಮ್ಮನ್ನು ದೊಡ್ಡವರೆಂದೂ, ತಂದೆಯೆಂದೂ ತಿಳಿದು ಕೊಂಡಿರುವೆ.

ಹಿರಣ್ಯಕಶಿಪು—ಅಂದಮೇಲೆ ನಿನಗೆ ಬದುಕುವ ಆಸೆ ಇದೆಯಷ್ಟೆ?

ಪ್ರಹ್ಲಾದ—ಅಪ್ಪಾಜಿ, ನಾವು ನಿಮಿತ್ತ ಮಾತ್ರರು. ಸಾವು-ಬದುಕು ಒಳ್ಳಿತು-ಕೆಡಕು ದೈವಾಧೀನ!

ಹಿರಣ್ಯಕಶಿಪು—ಅದು ಹೇಗೆ? ನಾನೀಗ ನಿನ್ನನ್ನು ಕೊಲ್ಲಿಸಿದರೆ ನಿನ್ನ ಪೂಜ್ಯ ವಿಷ್ಣು ಬಂದು ತಪ್ಪಿಸಬಲ್ಲನೇ? ಏನೆನ್ನುವೆ ಹೇಳು?

ಪ್ರಹ್ಲಾದ—(ಧೈರ್ಯವಾಣಿಯಲ್ಲಿ) ತಂದೆಯೆ, ನಾನು ಬದುಕುವುದು ದೈವಸಂಕಲ್ಪವೇ ಆಗಿದ್ದಲ್ಲಿ ಖಂಡಿತ ಬದುಕುವೆ.

ಹಿರಣ್ಯಕಶಿಪು—(ಅಟ್ಟಹಾಸದಿಂದ) ಹಾಗಾದರೆ ಅದನ್ನು ಈಗಲೇ ಪರೀಕ್ಷಿಸಿ ಬಿಡುವೆ. ಆ ಕಪಟಿ-ವಿಷ್ಣುವನ್ನು ನಂಬಿ ಹೀಗಾಡುತ್ತಿರುವೆಯಲ್ಲವೇ? ನೋಡೋಣ, ಅವನ ಸಂಕಲ್ಪವಾದರೂ ಏನು? (ಬಾಗಿಲ ಕಡೆ ಮುಖಮಾಡಿ) ಲೋ, ಯಾರಲ್ಲಿ?

(ಹೊರಗಿದ್ದ ದೂತರು ಒಳಬಂದು ಕೈಮುಗಿಯುವರು)

ಹಿರಣ್ಯಕಶಿಪು—ಲೋ! ಹೀಗೆ ಬಾ.

(ದೂತರು ಸಮೀಪಕ್ಕೆ ಬರುವರು)

ಹಿರಣ್ಯಕಶಿಪು—(ಅಧಿಕಾರ ವಾಣಿಯಲ್ಲಿ) ಈ ಪ್ರಹ್ಲಾದನನ್ನು ಈಗಲೇ ಎಳೆದುಕೊಂಡು ಹೋಗಿ ಕೊಲ್ಲಿಸಿ ಬಿಡು! ಅಯೋಗ್ಯನಾದ ಗುರುವನ್ನು ಸೆರೆಮನೆಯ ಕತ್ತಲೆ ಕೋಣೆಗೆ ತಳ್ಳು! ಈ ದುಷ್ಟ ಹುಡುಗರನ್ನೆಲ್ಲಾ ಚೆನ್ನಾಗಿ ಥಳಿಸಿ

ಅಟ್ಟಿ ಬಿಡು !

(ಹಿರಣ್ಯಕಶಿಪು ಅಷ್ಟೀ ಕ್ರೂರವಾದ ಆಜ್ಞೆಯನ್ನು ವಿಧಿಸಿದನಂತರ ಆಸನ ಬಿಟ್ಟೆದ್ದು ಹೊರಡಲನುವಾದನು)

ಪ್ರಹ್ಲಾದ—(ವಿನಾಕಾರಣ ತಮ್ಮವರಿಗಾದ ಶಿಕ್ಷೆಯಿಂದ ವ್ಯಥೆಗೊಂಡು) ಅಪ್ಪಾಜಿ, ನನಗೆ ಯಾವ ಶಿಕ್ಷೆ ವಿಧಿಸಿದರೂ ಸರಿಯೇ. ಆದರೆ, ನಮ್ಮ ಗುರುಗಳು ಏನೂ ಮಾಡಿಲ್ಲ. ನನ್ನ ಸಹಪಾಟಿಗಳೂ ಅಷ್ಟೆ. ದಯಮಾಡಿ ಅವರನ್ನೆಲ್ಲಾ ಕ್ಷಮಿಸಿ ಬಿಟ್ಟು ಬಿಡಿ. ನಿಮ್ಮನ್ನು ಕೈಮುಗಿದು ಬೇಡಿಕೊಳ್ಳುವೆ.

ಚಂಡಾಮರ್ಕ—(ಕೈ ಮುಗಿದುಕೊಂಡು ಕಂಪಿತವಾಣಿಯಲ್ಲಿ) ಜೀಯಾ, ಈ....ಬಡ....ಮುದುಕನ ಮೇಲೆ....ಕೋಪಗೊಳ್ಳಬಾರದು....ದಯಮಾಡಿ.... ಕ್ಷಮಿಸಿರಿ....

ಹಿರಣ್ಯಕಶಿಪು—(ಆ ಮಾತಿಗೆ ಇನಿತೂ ಬೆಲೆಕೊಡದೆ ಗರ್ಜಿಸಿದ) ಎಲಾ, ಏತಕ್ಕೆ ಎಲ್ಲಾ ಇಲ್ಲಿ ಸುಮ್ಮನೆ ನಿಂತಿರಿ? ಈ ಕ್ಷಣವೇ ನಿಮ್ಮ ನಿಮ್ಮ ಕೆಲಸ ವನ್ನು ಕೈಕೊಳ್ಳಿ!

ಮೊದಲದೂತ—(ತಲೆಬಾಗಿ ಕೈ ಮುಗಿದುಕೊಂಡು)ನನಗೇಪ್ಪಣೆ ಬುದ್ಧಿ?

ಹಿರಣ್ಯಕಶಿಪು—ಈ ಧೂರ್ತ ಗುರುವನ್ನು ಮೊದಲು ಸೆರೆಮನೆಗೆ ತಳ್ಳು.

(ಅವನು ಆಕ್ಷಣವೇ ಗುರುಗಳನ್ನು ಅಲ್ಲಿಂದ ದರದರನೆ ಎಳೆದುಕೊಂಡು ಹೋಗುವನು)

ಎರಡನೆ ದೂತ—(ಪ್ಯೆಬಾಗಿ ಕೈಮುಗಿದುಕೊಂಡು) ನನಗೇನಪ್ಪಣೆ ಬುದ್ಧಿ ?

ಹಿರಣ್ಯಕಶಿಪು—ಈ ಹುಡುಗರನ್ನೆಲ್ಲಾ ಚೆನ್ನಾಗಿ ಬಾರಿಸಿ ಅಟ್ಟಿಬಿಡು!

(ಅವನು ಎಲ್ಲಾ ಹುಡುಗರನ್ನೂ ಅಲ್ಲಿಂದ ತಕ್ಷಣವೇ ಕರೆದೊಯ್ಯುವನು)

ಮೂರನೆಯ ದೂತ—ಬೆನ್ನು ಬಾಗಿ ನಮ್ರವಿನಮ್ರನಾಗಿ ಕೈಮುಗಿದು ಕೊಂಡು) ನನಗೇನಪ್ಪಣೆ ಬುದ್ಧಿ ?

ಹಿರಣ್ಯಕಶಿಪು—ಪ್ರಹ್ಲಾದನನ್ನು ಈಕ್ಷಣವೇ ಇಲ್ಲಿಂದ ಎಳೆದುಕೊಂಡು ಹೋಗಿ ಊರ ಮಧ್ಯೆ ಮದ್ದಾನೆಯ ಕಾಲಿನಿಂದ ತುಳಿಸಿ ನರಿನಾಯಿಗಳಿಗೆ ಹಬ್ಬ ಮಾಡಿಸಿಬಿಡು!

(ಹಿರಣ್ಯಕಶಿಪು ಕಟ್ಟಾಜ್ಞೆಯನ್ನು ಮಾಡಿ ಅಲ್ಲಿಂದ ದಡದಡನೆ ಹೊರಟು ಹೋಗುವನು. ಆ ಭಯಂಕರ ಆಜ್ಞೆಯಿಂದ ಸಭೆಗೆ ಸಭೆಯೇ ಗಡಗಡ ನಡುಗಿ ಹೋಯಿತು! ಎಲ್ಲರೂ ಮುಖ ಮೈಗಳಲ್ಲಿ ಬೆವರ್ನೀರು ಬಸಿದು ಬಿಸಿಯುಸಿರು ಬಿಟ್ಟರು)

ಸಭೆ—ಛೀ! ಛೀ! ಏನಿದು? ಎಲ್ಲಿಯಾದರುಂಟೆ? ಅನ್ಯಾಯ, ಪರಮ ಅನ್ಯಾಯ !

(ಎಲ್ಲರೂ ತಮ್ಮತಮ್ಮಲ್ಲೇ ಮರ್ಮರಿಸಿದರು ಮೆಲುದನಿಯಲ್ಲಿ. ಆ ದೈತ್ಯ ರಾಜನ ಮುಂದೆ ಸೊಲ್ಲೆತ್ತಲು ಯಾರಿಗಾದರೂ ಕಿಂಚಿತ್ ಧೈರ್ಯ ಮೂಡಲಿಲ್ಲ. ಅಲ್ಲಿ ನಿಲ್ಲಲಾಗದ ಅನೇಕರು ಒಬ್ಬೊಬ್ಬರಾಗಿ ಅಲ್ಲಿಂದ ಚೆದುರಿದರು, ಮನಃ ಪ್ರಾಣಗಳು ಸಂಕಟದ ಮಡುವಾಗಿ)

ಪ್ರಹ್ಲಾದ—(ಆಗಲೇ ಆ ಸ್ಥಾನವನ್ನು ಬಿಟ್ಟು ಹೊರಹೊಗಿದ್ದ ತಂದೆಗೆ ಕೇಳಿಸುವಂತೆ ಉಚ್ಚ ಸ್ವರದಲ್ಲಿ) ಓ, ತಂದೆಯೆ, ನನಗೆ ಅಪ್ಪಣೆಕೊಡಿ. ನಾನು ದೂತನೊಂದಿಗೆ ತೆರಳುವೆ.

ಹಿರಣ್ಯಕಶಿಪು—ಹೋಗು! ಈಗಲೇ ಹೋಗು ! ಒಂದು ಕ್ಷಣವೂ ಇಲ್ಲಿ ನಿಲ್ಲಬಾರದು!

(ಅಲ್ಲಿಂದಲೇ ಗರ್ಜನೆ ಹೊರಬಿತ್ತು ಅವನು ತಿರುಗಿ ಸಹನೋಡಲಿಲ್ಲ)

ಪ್ರಹ್ಲಾದ—ಅಪ್ಪಣೆ ಅಪ್ಪಾಜಿ! ನಿಮಗೂ ತಾಯಿಗೂ ನನ್ನ ಅಂತಿಮ ನಮಸ್ಕಾರಗಳು!

(ದನಿ ಎದೆಯಾಳದಿಂದ ಹೊರಬಿತ್ತು ; ಆಸ್ಥಾನದ ಕಲ್ಲು ಕಂಬಗಳೂ ಮರುಗುವಂತೆ)

ಹಿರಣ್ಯಕಶಿಪು—ಹೋಗೋ ಮೂರ್ಖ! ನಿನ್ನ ನಮಸ್ಕಾರ ಯಾರಿಗೆ ಬೇಕು?

(ಹಿರಣ್ಯಕಶಿಪು ದಡದಡನೆ ಒಳಾಂಗಣಕ್ಕೆ ತೆರಳಿದನು. ಒಂದು ಕ್ಷಣ ಅತ್ತ ನೋಡಿದ ಪ್ರಹ್ಲಾದ ಗಂಭೀರಭಾವದಿಂದ ದೂತನ ಕಡೆ ನೋಡುವನು ತನ್ನನ್ನು ತಾನೇ ಒಪ್ಪಿಸಿಕೊಳ್ಳುವಂತೆ)

(ಹಿರಣ್ಯಕಶಿಪುವಿನ ರಾಕ್ಷಸಾಳುಗಳಲ್ಲಿ ಪಿಂಗಳ ಮೊದಲಿಗ. ದೊರೆಯ ಕಟ್ಟಾಜ್ಞೆಗೆ ಗುರಿಯಾಗುವವರ ಕೊಲೆಯ ಸೂತ್ರ ಅವನ ಕೈಯಲ್ಲಿ. ಯಾವುದನ್ನು ವಹಿಸಿದರೂ ಅವನು ಅಚ್ಚುಕಟ್ಟಾಗಿ ನಡೆಸುವನೆಂದು ದೊರೆಯ ಮೆಚ್ಚಿಕೆಗೆ ಪಾತ್ರನಾಗಿ ಉಂಬಳಿ ಪಡೆದವನು. ದಯೆ–ದಾಕ್ಷಿಣ್ಯಗಳು ಅವನ ಹತ್ತಿರವೂ ಸುಳಿಯವು. ಅವನು ಕ್ರೂರರೊಳಗೆ ಕ್ರೂರಿ; ಧೂರ್ತರೊಳಗೆ ಧೂರ್ತ; ರಾಕ್ಷಸರೊಳಗೆ ರಾಕ್ಷಸ. ಹೊಲೆಗೆಲಸ–ಕೊಲೆಗೆಲಸ ಅವನಿಗೆ ನಿರಾಯಾಸ ಮಾತ್ರವಲ್ಲ; ಅತಿಶಯವಾದ ಆನಂದವನ್ನು ಮೂಡಿಸುತ್ತವೆ. ರಾಜಾಗ್ರಹಕ್ಕೆ ತುತ್ತಾದವರು ಅವನ ಪರಮ ಅತಿಥಿಗಳು!

ಅಂತಹವನ ಕೈಯಲ್ಲಿ ಪ್ರಹ್ಲಾದನ ಕೊಲೆಯು ದೂರಾಗುವುದುಂಟೆ? ಅವನಿಗೆ ರಾಜಕುಮಾರನಾದರೇನು? ಯಾರಾದರೇನು? ರಾಜಾಜ್ಞೆ ರಾಜಾಜ್ಞೆಯೇ. ಅದರಲ್ಲಿ ಹಿರಿದುಕಿರಿದಿಲ್ಲ; ಮೇಲುಕೀಳಿಲ್ಲ. ಅತ್ಯಂತ ಉತ್ಸಾಹದಿಂದ ತನ್ನ ಧೂರ್ತ ಆತಿಥ್ಯಕ್ಕೆ ಪ್ರಹ್ಲಾದನನ್ನು ಪಡೆದುಕೊಳ್ಳಲು ಮುಂದಾಗುತ್ತಾನೆ)

ಪಿಂಗಳ—(ದುರುದುರು ನೋಡುತ್ತ) ನಡೆ....ನಡೆ. ದುಷ್ಟತನಕ್ಕೆ ಇದೇ ಸರಿಯಾದ ಮದ್ದು!

ಪ್ರಹ್ಲಾದ—ಎಲ್ಲವೂ ದೈವೇಚ್ಛೆ!

ಪಿಂಗಳ—ಇಷ್ಟಾದರೂ ನಿನ್ನ ಸೊಕ್ಕು ಇಳಿಯಲಿಲ್ಲವಲ್ಲಾ. ಅದೇ ವಿಶೇಷ!

(ಆಕ್ಷಣವೇ ಅವನನ್ನು ಪಿಂಗಳ ದರದರನೆ ಎಳೆದೊಯ್ಯುವನು. ಸಭಿಕರು ಗೋಳಿಡುವರು)

ಸಭಿಕರು—ಅನ್ಯಾಯ....ಪರಮ ದೌರ್ಜನ್ಯ !

(ದನಿ ಮಾಡುಮುಟ್ಟುವಂತೆ ಮರ್ಮರಿಸುವುದು)

ಸಭಿಕರು—ಅಯ್ಯೋ ಬ್ರಹ್ಮದೇವ ! ನೀನೇ ಕಾಪಾಡಪ್ಪ.

(ಎಲ್ಲರ ಪ್ರಾರ್ಥನೆ ಒಕ್ಕೊರಲಿಂದ ಹರಿಯುತ್ತಿರುವಾಗಲೇ ಪರದೆಯು ಬೀಳುವುದು)

ದೃಶ್ಯ–೭

(ಅರಮನೆಯ ಗಜಶಾಲೆಯ ಅಧಿರಾಜನಾದ ಗಜರಾಜ ಮೊದಲೇ ಬಹಳ ಪ್ರಚಂಡ ಭಯಂಕರ! ಅದು ಗಜಶಾಲೆಯ ಪ್ರಾವರಣದಿಂದ ಬಿಡುಗಡೆ ಹೊಂದಿ ನಗರ ಮಧ್ಯದ ವಿಶಾಲವಾದ ಬಯಲಿಗೆ ಬಂದಾಗಲೇ ಮತ್ತಷ್ಟು ಹುರುಪುಗೊಂಡಿತ್ತು. ಆ ಬಯಲಿನ ಸಂಸರ್ಗ ಮತ್ತು ಸುದೀರ್ಘಕಾಲದ ಅನುಭವ ಇವುಗಳಿಂದ ತನಗೊದಗಲಿರುವ ಆಹುತಿಯ ಅರಿವುಂಟಾಗಿ ಮತ್ತೇರಿದಂತೆ ಔದ್ಧತ್ಯ ವರ್ತನೆಗಿಳಿದು ಅತ್ತಿತ್ತ ಪದಚಾರಣ ಮಾಡಿ ಧೂಳೆಬ್ಬಿಸುತ್ತ ಪಿಂಗಳನ ಪ್ರತೀಕ್ಷೆಯಲ್ಲೇ ಇರುವುದು. ಮರಣಶಿಕ್ಷೆಗೊಳಪಟ್ಟ ಅಪರಾಧಿಯನ್ನು ತಂದು ಎದುರಿಗೆ ನಿಲ್ಲಿಸಿದರೆ ಸಾಕು. ತತ್‌ಕ್ಷಣವೇ ಅದು ಸೊಂಡಿಲಿನಿಂದ ಎಳೆದು ಕಾಲಡಿಗೆ ತಳ್ಳಿ ತುಳಿದು ಹೊಸಕಿ ಸಿಗಿಸಿಗಿದು ಎಸೆದು ಬಿಡುವುದು. ಅದಕ್ಕೆ ಅದೊಂದು ಉತ್ಸಾಹ ಪೂರ್ಣವೂ ಆನಂದದಾಯಕವೂ ಆದ ಶೈಕ್ಷಣಿಕೆ ಕ್ರೀಡೆ.

ಧೂರ್ತ ಪಿಂಗಳ ಆ ಭೀಭತ್ಸ ಪ್ರದರ್ಶನದ ನಾಯಕತ್ವದ ಹುರುಪಿನಿಂದ ಪರಮಾನಂದಭರಿತನಾಗಿ ಪ್ರಹ್ಲಾದನೊಡನೆ ಹೊರಡುವನು. ಪುರಜನರು. ಆರ್ತ ಹೃದಯದಿಂದ ಹನಿಗಣ್ಣಾಗಿ ಹಿಂಬಾಲಿಸುವರು. ತಾಣದಲ್ಲಿ ಅಸಂಖ್ಯ ಜನರ ಅಸಂಖ್ಯ ಧ್ವನಿಗಳಿಂದ ಕೂಡಿದ ಮರ್ಮರಧ್ವನಿ ಶೋಕಗೀತೆಯನ್ನು ಬಿತ್ತರಿಸುತ್ತಿತ್ತು. ಒಮ್ಮೆ ಹಾಹಾಕಾರ; ಇನ್ನೊಮ್ಮೆ ಭೀಕರ ಮೃತ್ಯುಮೌನ.

ಅದೇ ಪ್ರಹ್ಲಾದನಿಗೆ ಮೃತ್ಯುಭಯ ತಟ್ಟುವ ಮಾತಿರಲಿ, ವಿಷ್ಣುಧ್ಯಾನದಿಂದ ಮನಃಪ್ರಾಣಗಳೆರಡೂ ವಿಷ್ಣುಮಯವಾಗಿ, ನಿಮೀಲಿತನಯನಗಳಲ್ಲಿ ಭಕ್ತಿಸ್ಫೂರ್ತಿಯ ಕಳೆಯನ್ನು ಸ್ಫುರಿಸುವನು. ಶಾಂತ ಪ್ರಶಾಂತ ಮುಖದಲ್ಲಿ

ಭಾವವಿಲಯದ ಸುಳಿವೇ ಇರಲಿಲ್ಲ)

ಪಿಂಗಳ—(ದರ್ಪದಿಂದ ಪ್ರಹ್ಲಾದನನ್ನು ಕುರಿತು) ಮಹಾಪ್ರಭುಗಳು ಇದೇ ಆನೆಯಿಂದ ನಿನ್ನನ್ನು ತುಳಿಸಲು ಹೇಳಿದ್ದು ತಿಳಿಯಿತೇ?

(ಪ್ರಹ್ಲಾದ ಆ ಮಾತಿಗೆ ಉತ್ತರಿಸದೆ ನಿಶ್ಚಲಭಂಗಿಯಲ್ಲಿ ಸುವರ್ಣ ಪುತ್ಥಳಿಯಂತೆ ನಿಂತಿರುವನು)

ಪಿಂಗಳ—ಇದೋ ಗಜರಾಜ! ನಿನಗಿಂದು ಒಳ್ಳೆಯ ಆಹುತಿಯನ್ನೇ ಕೊಡುವೆ, ಸ್ವೀಕರಿಸು.

(ಆ ಕೂಡಲೆ ಪಿಂಗಳ ಮದಗಜವನ್ನು ಉದ್ರೇಕಿಸಲು ಭರ್ಚಿಯಿಂದ ಜೋರಾಗಿ ಇರಿಯುತ್ತಾನೆ. ಆ ನೋವನ್ನು ತಾಳಲಾರದ ಆನೆ ಘೀಳಿಟ್ಟು ಮುಂದಕ್ಕೆ ನುಗ್ಗಿ ಬರುತ್ತದೆ)

ಜನ—(ಒಕ್ಕೊರಲಿಂದ) ಅಯ್ಯೋ....ಅಯ್ಯೊಯ್ಯೋ!

(ಶೋಕಾರ್ತದನಿಯು ಅಲೆಯಲೆಯಾಗಿ ಮರ್ಮರಿಸುತ್ತದೆ)

ಪ್ರಹ್ಲಾದ—(ಕೈಮುಗಿದುಕೊಂಡು) ಓಂ ಮಹಾವಿಷ್ಣವೇ ನಮಃ!

ಪಿಂಗಳ—(ಅಸಹ್ಯ ಭಾವದಿಂದ) ಓ....ನಿನ್ನ ಅಹಂಕಾರ ಇನ್ನೂ ಇಳಿಯಲಿಲ್ಲವಲ್ಲ? ಮಹಾಪ್ರಭುಗಳ ಮನಸ್ಸು ಕೆಟ್ಟದ್ದು ಇದರಿಂದಲೇ....ನಡಿ.... ನಡಿ.

(ಎಂದವನೇ ಪ್ರಹ್ಲಾದನನ್ನು ಅತ್ಯಂತ ನಿರ್ದಯತೆಯಿಂದ, ಧೂರ್ತತನದಿಂದ ಆನೆಯಕಡೆ ತಳ್ಳುವನು. ಪ್ರಹ್ಲಾದ ಆ ರಭಸಕ್ಕೆ ಮುಗ್ಗರಿಸಿ ಆನೆಯ ಕಾಲಿನ ಬಳಿ ಉರುಳುರುಳಿ ಬೀಳುವನು. ಕಲ್ಲನ್ನೂ ಕರಗಿಸುವಂತಹ ಆ ಸನ್ನಿವೇಶದಲ್ಲಿ ಜನತೆ ಮತ್ತೆ 'ಹೋ' ಎಂದು ಗೋಳಿಡುವುದು)

ಪ್ರಹ್ಲಾದ—ಓಂ ಮಹಾ ವಿಷ್ಣುವೇ ನಮಃ.

(ಆನೆಯು ಪ್ರಹ್ಲಾದನನ್ನು ನೋಡುತ್ತಲೂ ಆ ಕ್ಷಣದಲ್ಲಿಯೇ ಅದರ ಉದ್ರೇಕವು ಸಾಗರದುಬ್ಬರವಿಳಿದಂತೆ ತಟ್ಟನೆ ಇಳಿದುಹೋಯಿತು! ಅದು ನಿಂತ

ಲ್ಲಿಂದ ಹೆಜ್ಜೆ ತೆಗೆಯದೆ ಅವನನ್ನು ಮೂಸಿನೋಡಿ ಮುಖ ಮೈಗಳ ಮೇಲೆ ಪ್ರೀತಿಯಿಂದ ಸೊಂಡಿಲಾಡಿಸಿ, ಬಳಿಕ ಅವನ ಸೊಂಟಕ್ಕೆ ಸೊಂಡಿಲನ್ನು ಸುತ್ತಿ ತನ್ನ ಕುತ್ತಿಗೆಯ ಮೇಲೆ ಎತ್ತಿ ಕುಳ್ಳಿರಿಸಿಕೊಂಡಿತು)

ಜನ—(ಸಂತೋಷದಿಂದ) ಪ್ರಹ್ಲಾದಕುಮಾರನಿಗೆ ಜಯವಾಗಲಿ!

ಜನ—ದೇವರಿದ್ದಾನೆ ಎಂಬುದಕ್ಕೆ ಇದೇ ಸಾಕ್ಷಿ!

ಜನ—ಸತ್ಯಮೇವ ಜಯತೇ!

ಸ್ತ್ರೀಜನ—ಎಷ್ಟು ಮಂದಿ ಅದೃಷ್ಟಹೀನರನ್ನು ಕೊಂದು ಸ್ವರ್ಗಕ್ಕೆ ರವಾನಿಸಿದ ಆನೆ ಮಗುವನ್ನು ಮುದ್ದಿಟ್ಟು ಸನ್ಮಾನಿಸಿದ ಬಗೆ ಸಾಮಾನ್ಯವಲ್ಲ! ಮಕ್ಕಳಿದ್ದರೆ ಇಂತಿರಬೇಕು! ಜೈ, ಪ್ರಹ್ಲಾದ!

(ಜನಕೋಟಿಯ ವಿವಿಧ ಅಭಿಪ್ರಾಯ ಸಂತಸಧಾರೆಯ ಝೇಂಕಾರ ದೊಂದಿಗೆ ಕಿವಿ ಕಿವುಡಾಗುವಂತೆ ಹೊಮ್ಮುತಿತ್ತು. ಪಿಂಗಳ ಜನಾಬಿಪ್ರಾಯ ವನ್ನು ಗಮನಿಸಿದರೂ, ತನ್ನ ಪ್ರಥಮ ಪರಾಭವದ ಕಹಿಯನ್ನು ಅನುಭವಿಸಿ ಮತಿಭ್ರಾಂತನಾಗಿ ಮುಂದಿನ ಕ್ರಮದ ಕಡೆ ದೃಷ್ಟಿ ಹಾಯಿಸುವನು. ಇನ್ನೋರ್ವ ದೂತನ ಮುಖೇನ ಸುದ್ದಿ ಹಿರಣ್ಯಕಶಿಪುವನ್ನು ಮುಟ್ಟಿತು)

ಹಿರಣ್ಯಕಶಿಪು—(ಆಶ್ಚರ್ಯವಿಸ್ಫೃತಲೋಚನನಾಗಿ) ಏನು... ಏನು....? ಮದಗಜ ಅವನನ್ನು ತುಳಿಯಲಿಲ್ಲವೇ?....ನಿಜವಾಗಿ?

ದೂತ—(ಮುಗಿದ ಕೈ ಇಳಿಸದೆ) ಖಂಡಿತವಾಗಿಯೂ ಮಹಾಪ್ರಭೂ! ಆನೆ ಅವರನ್ನು ಮೂಸಿ ನೋಡಿ ಮೈದಡವಿ ಎತ್ತಿ ಕುತ್ತಿಗೆಯ ಮೇಲೆ ಕೂಡಿಸಿ ಕೊಂಡಿತು! ಪಿಂಗಳ ಮೊದಲೇ ಭರ್ಜಿಯಿಂದ ಚುಚ್ಚಿ ಅದನ್ನು ಉದ್ರೇಕ ಗೊಳಿಸಿದ್ದ! ಆದರೂ....ಅದು....

ಹಿರಣ್ಯಕಶಿಪು—ಎಂತಹ ಆಶ್ಚರ್ಯ! (ಸ್ವಲ್ಪ ಹೊತ್ತು ಯೋಚಿಸಿ) ಅವ ನನ್ನು ವಿಷಸರ್ಪದಿಂದ ಕಚ್ಚಿಸಿ ಕೊಂದು ಬಿಡಲು ಹೇಳು! ಈಗಲೇ ಹೋಗು!

(ಆ ಆಜ್ಞೆಯನ್ನು ಕೇಳಿ ಒಡಲು ಸಂಕಟದ ಮಡುವಾಯಿತು. ದೂತ ಭಯಭೀತಿಯಿಂದ ಓಡುತ್ತಲೇ ಹೋಗುವನು ಅಲ್ಲಿಂದ)

ದೂತ—(ಪಿಂಗಳನನ್ನು ಕುರಿತು) ಪ್ರಭುಗಳು ವಿಷಸರ್ಪದಿಂದ ಕಚ್ಚಿಸಿ ಕೊಲ್ಲಬೇಕೆಂದು ಆಜ್ಞೆ ಮಾಡಿದ್ದಾರೆ. (ಸ್ವಗತ) ನಮ್ಮಪ್ಪಾ, ಬ್ರಹ್ಮದೇವಾ! ನೀನೇ ಮಗುವನ್ನು ಕಾಪಾಡಪ್ಪಾ! (ನಿಡುಸುಯ್ಯುವನು)

ಪಿಂಗಳ—(ಅಟ್ಟಹಾಸದಿಂದ) ನಾನೂ ಅದೇ ಯೋಚನೆಯಲ್ಲಿದ್ದೆ!

(ರಾಜಧಾನಿಯ ಪರಿಸರದ ಅರಣ್ಯದಲ್ಲಿ ಘೋರ ಸರ್ಪಗಳಿಗೇನೂ ಕೊರತೆಯಿರಲಿಲ್ಲ. ಅದು ಪಿಂಗಳನಿಗೆ ತಿಳಿಯದ ವಿಷಯವಲ್ಲ. ಅವನು ದರ್ಪ–ಸಿಟ್ಟು–ಉತ್ಸಾಹಗಳ ಗಣಿಯಾಗಿ ಬಾಲ ಪ್ರಹ್ಲಾದನನ್ನು ಅಲ್ಲಿಗೆ ಕರೆದೊಯ್ಯುವನು. ಅಲ್ಲಿ ನೆರೆದಿದ್ದ ಜನಸಂದಣಿ ಕಾತರಭಾವದಿಂದ ಅರಣ್ಯಕ್ಕೂ ಧಾವಿಸಿತು. ಒಡಲು ಮುಗ್ಧ ಬಾಲಕನಿಗಾಗಿ ದುಃಖ ಸಂಕಟಗಳಿಂದ ತುಂಬಿಹೋಗಿದ್ದರೂ ಇನ್ನಾವ ಆಶ್ಚರ್ಯ ನಡೆಯಲಿಹುದೋ ಎಂಬ ಆತ್ಯಂತಿಕ ಕುತೂಹಲ ಬೇರೆ.

ದಟ್ಟಡವಿಯಲ್ಲಿದ್ದ ಬಿದಿರು ಮೆಳೆಯ ಬಳಿ ವಿಷಧರ ಸರ್ಪವೇಷ್ಟಿತ ಬಾಲ ಚಂದನತರು. ಅದರ ಬುಡದಲ್ಲಿ ಒಂದು ಭಾರಿ ಹುತ್ತ. ಅದರಲ್ಲಿ ಇನ್ನೆಂತಹ ಸರ್ಪ ಸಂಸಾರವೋ, ಅದಕ್ಕನುಗುಣವಾಗಿ ಹುತ್ತದ್ವಾರಗಳೂ ಹಲವಾರು. ಆ ಭೀಷಣ ಮನೋಹರ ದೃಶ್ಯ ಕಣ್ಣಿಗೆ ಬಿದ್ದಾಗಲೇ ಎದೆ ಅಳುಕಿತು. ಎಳೆ ಬಿಸಿಲಿಗೆ ಮೈಗೊಟ್ಟು ಹೆಡೆಬಿಚ್ಚಿದ್ದ ಫಣಿ ಮನುಷ್ಯಗಂಧದಿಂದ ಕೆರಳಿದಂತೆ ದೃಷ್ಟಿಯನ್ನು ಅತ್ತಿತ್ತ ಹೊರಳಿಸಿ ನೋಡತೊಡಗಿದಾಗಲೇ ಪಿಂಗಳ ಲಗುಬಗನೆ ಪ್ರಹ್ಲಾದನ ಕೈಕಾಲುಗಳಿಗೆ ಅಲುಗದಂತೆ ಹಗ್ಗ ಬಿಗಿದು ಹುತ್ತದ ಬಳಿ ಉರುಳಿಸುವನು)

ಪ್ರಹ್ಲಾದ—(ಭಕ್ತಿಭಾವದಿಂದ) ಓಂ ವಿಷ್ಣವೇ ನಮಃ!

(ವಿಷ್ಣು ನಮನ ನಡೆಯುತ್ತಲೇ ಇತ್ತು. ಪ್ರಹ್ಲಾದ ಮುಚ್ಚಿದ ಕಣ್ಣು ತೆರೆಯಲಿಲ್ಲ. ಮೃತ್ಯುಭಯ ಅವನನ್ನು ಮುಟ್ಟಲೂ ಇಲ್ಲ. ಬಾಲಕನ ದುರ್ದೆಶೆಯನ್ನು ಕಂಡು ಮನಕರಗಿದ ಜನತೆ ಕಂಬನಿ ಮಿಡಿಯುತ್ತಿದ್ದರೂ ಪಿಂಗಳ ಇನಿತೂ ವಿಚಲಿತನಾಗದೆ ನಾಗರಹಾವು ಮರದಿಂದ ಇಳಿದು ಬರುವುದನ್ನು ಗಮನಿಸುತ್ತಿರುವಾಗಲೇ ಹಾವಿನ ದೃಷ್ಟಿ ಪ್ರಹ್ಲಾದನ ಮೇಲೆ ಹರಿದು ಮೆಲ್ಲ ಮೆಲ್ಲನೆ ಇಳಿದು ಬರತೊಡಗುವುದು. ಅದು ಸಮೀಪಿಸಿದಷ್ಟೂ ಜನಸಾಂದ್ರತೆ

'ಹೋ' ಎಂದು ಗೋಳಿಡುವುದು; ಧೂರ್ತ ಪಿಂಗಳನಿಗಾದರೋ ಅಷ್ಟೇ ಸಂತಸ! ಪ್ರಹ್ಲಾದನ ಭಗವಧ್ಯಾನ ಕ್ಷಣಕ್ಷಣಕ್ಕೂ ಘನೀಭೂತವಾಗುವುದು.

(ಆಗ ಅಲ್ಲಿಯೂ ಒಂದು ಆಶ್ಚರ್ಯಕರ ಘಟನೆ ನಡೆದುಹೋಯಿತು. ಅದೇ ಸಮಯಕ್ಕೆ ಎಲ್ಲಿಂದಲೋ ಹಾರಿಬಂದ ಗರುಡವೊಂದು ಸರ್ಪವನ್ನು ಎತ್ತಿಕೊಂಡು ಭರ್ರನೆ ಹಾರಿ ಗಗನಾಂತರದಲ್ಲಿ ಕಣ್ಮರೆಯಾಗುವುದು)

ಜನ—(ಆನಂದೋತ್ಸಾಹದಿಂದ ಹಿರಿಹಿರಿ ಹಿಗ್ಗಿ) ಜಯ ಜಯ ರಾಜ ಕುಲ ತಿಲಕ! ಜಯ ಜಯ ಪ್ರಹ್ಲಾದ!

(ಪಿಂಗಳ ಆ ವಿಚಿತ್ರ ಘಟನೆ ಕಂಡು ಬೆಕ್ಕಸ ಬೆರಗಾಗಿ ಹಿರಣ್ಯಕಶಿಪುವಿಗೆ ಸುದ್ದಿಯನ್ನು ಆ ತಕ್ಷಣವೇ ಕಳಿಸುವನು. ಜನ ಪ್ರಹ್ಲಾದನನ್ನು ಬಿಡುಗಡೆ ಮಾಡಿ ನಲ್ಮೆಯಿಂದ ಎತ್ತಿಕೊಂಡು ಮುದ್ದಾಡುವರು. ದೂತ ಏದುಸಿರು ಬಿಡುತ್ತ ಮತ್ತೆ ಎದುರಿಗೆ ಬಂದು ನಿಂತಾಗ ಹಿರಣ್ಯಕಶಿಪುವಿಗಾದ ಆಶ್ಚರ್ಯಕ್ಕೆ ಎಣೆಯೇ ಇರಲಿಲ್ಲ)

ಹಿರಣ್ಯಕಶಿಪು—(ಕಾತುರ-ಕುತೂಹಲಗಳಿಂದ ತುಂಬಿ ಉದ್ರೇಕದಿಂದ) ಮತ್ತೇಕೆ ಬಂದೆ? ಏನಾಯಿತು? ನಾಗರಹಾವು ಪ್ರಹ್ಲಾದನನ್ನು ಕಚ್ಚಿತೆ?

ದೂತ—(ಮೈಬಾಗಿ ಕೈಮುಗಿದುಕೊಂಡು) ಇಲ್ಲ ಮಹಾಸ್ವಾಮಿ!

ಹಿರಣ್ಯಕಶಿಪು—ಹಾಗಾದರೆ ಏನು ಸಮಾಚಾರ?

ದೂತ—(ಬಾಗಿದ ತಲೆಯೆತ್ತದೆ) ಪ್ರಭೂ ನಾಗರಹಾವು ಬಂದು ಕಚ್ಚಲಿರುವಾಗಲೇ ಎಲ್ಲಿಂದಲೋ ಹಾರಿ ಬಂದ ಗರುಡಪಕ್ಷಿ ಅದನ್ನು ಎತ್ತಿಕೊಂಡು ಗಗನಾಂತರಕ್ಕೆ ಹಾರಿಹೋಯಿತು! ಪ್ರಹ್ಲಾದಕುಮಾರ ಬದುಕಿಕೊಂಡರು!

(ದೂತ ಒಡಲ ಸಂಕಟವನ್ನು ಅದುಮಿ ಅಪಾರವಾದ ಭಯದಿಂದ ವಿಷಯವನ್ನು ತ್ರಾಸಿನಮೇಲೆ ಇಟ್ಟು ತೂಗಿದಂತೆ ನುಡಿದು ಪ್ರಭುವಿನ ಅಪ್ಪಣೆಗಾಗಿ ಕಾದಿರುವನು)

ಹಿರಣ್ಯಕಶಿಪು—(ದೂತನ ಕಡೆ ದುರುದುರು ನೋಡುತ್ತ)ನಿಜವಾಗಿಯೂ ಆ ಘಟನೆ ನಡೆಯಿತೆ? ಅಥವಾ ಸುಳ್ಳು ಹೇಳುತ್ತಿದ್ದೀಯೋ?

(ಗರ್ಜನೆ ಘನ ಘೋರವಾಗಿತ್ತು)

ದೂತ—(ನಡುಗುತ್ತ) ಸ್ವಾ....ಮಿಾ...ಸುಳ್ಳ....ಲ್ಲ!

ಹಿರಣ್ಯಕಶಿಪು—ಆಶ್ಚರ್ಯ....ಪರಮಾಶ್ಚರ್ಯ!

ದೂತ—(ಕೈಮುಗಿದುಕೊಂಡು ಸುಖದುಃಖಗಳ ಗಣಿಯಾಗಿ) ಹೌದು ಮಹಾಪ್ರಭೂ! ಖಂಡಿತವಾಗಿಯೂ ಹೌದು! ಎಲ್ಲರ ಕಣ್ಮುಂದೆಯೇ ಆ ಘಟನೆ ನಡೆಯಿತು. ಎಲ್ಲರೂ ಬೆಕ್ಕಸಬೆರಗಾಗಿ ನೋಡಿದರು.

ಹಿರಣ್ಯಕಶಿಪು—(ಆಶ್ಚರ್ಯಾತಿರೇಕದಿಂದ) ನಾಗರಹಾವನ್ನು ನೋಡಿ ಪ್ರಹ್ಲಾದ ಹೆದರಲಿಲ್ಲವೇ?

ದೂತ—ಇಲ್ಲ, ಮಹಾಪ್ರಭೋ! ಅವರಿಗೆ ಅದರ ಅರಿವೇ ಇರಲಿಲ್ಲ. (ಸ್ವಗತ) ಬ್ರಹ್ಮದೇವನ ಕೃಪೆ.

ಹಿರಣ್ಯಕಶಿಪು–(ಆಲೋಚನಾ ಸುಳಿಯಲ್ಲಿ ಸಿಕ್ಕಿ ವಿಚಾರ ಗಂಭೀರನಾಗಿ). ಹಾಗಾದರೆ ಅವನನ್ನು ಅಗ್ನಿಕುಂಡಕ್ಕೆ ತಳ್ಳಿ ಸುಟ್ಟುಬಿಡಲು ಹೇಳು!

(ಆ ಮಾತು ಅಂತಃಸ್ಥಲವನ್ನು ಈಟಿಯಂತೆ ಇರಿಯಿತು. ತನುಮನಗಳು ಅಗಾಧವಾದ ಸಂಕಟ ತುಂಬಿ ಬಿರುಕಂಪನಕ್ಕೊಳಗಾದುವು. ಹೃದಯಕುಂಡ ಕಲ್ಲು ಹೊತ್ತಂತೆ ಭಾರವಾಗಿತ್ತು. ವಾಸ್ತವವಾಗಿ ಅವನಲ್ಲಿ ಇನಿತೂ ಸ್ಥಿರತೆ ಉಳಿಯಲಿಲ್ಲ. ಹೇಗಾದರೂ ಹೋಗಿ ರಾಜಾಜ್ಞೆಯನ್ನು ಒದರಿ ಬಿಡಲೇಬೇಕು. ಕೆಲವು ಕ್ಷಣ ಸುಧಾರಿಸಿಕೊಳ್ಳುತ್ತೇನೆಂದರೂ ಸಾಧ್ಯವಾಗಲಿಲ್ಲ. ರಾಜಾಜ್ಞೆಯಲ್ಲಿ ಭಯರೂಪದ ನಿಷ್ಠೆಯಾದರೆ ಮಗುವಿನ ಮೇಲೆ ಕಾರುಣ್ಯ–ಪ್ರೇಮಗಳ ಅಭಿಭಾವುಕತೆ. ಅಂತೂ ಭಾವವಿಭಾವಗಳ ಹೊಯ್ದಾಟದಲ್ಲಿ ಮನಃಪ್ರಾಣಗಳು ದಣಿದರೂ ಶರೀರವು ಭೀಮವೇಗದಲ್ಲಿ ಪಿಂಗಳನೆಡೆಗೆ ಧಾವಿಸಿತು)

ಪಿಂಗಳ—(ಆತುರವಾಗಿ) ಏನೆಂದರು ಪ್ರಭುಗಳು?

ದೂತ—ಅಗ್ನಿ....ಕುಂ....ಡಕ್ಕೆ ತಳ್ಳಿ....ಸುಟ್ಟು....ಬಿಡ....ಲು ಹೇಳಿದ್ದಾರೆ!

ಪಿಂಗಳ—(ತಲೆದೂಗುತ್ತ) ಅದೇ ಸರಿ....ಅದೇ ಸರಿ.

ಜನ—ಹಾಯ್....ಹಾಯ್ !

(ಅರಮನೆಯ ಸನಿಹದಲ್ಲಿ ಒಂದು ವರ್ತುಲಾಕಾರವಾದ ದೊಡ್ಡ ಗುಳಿ. ಅದರಲ್ಲಿ ಅನುಗಾಲವೂ ಧಗಧಗಿಸುವ ಅಗ್ನಿರಾಶಿ. ಅದೊಂದು ರಾಕ್ಷಸ ಕಟುತ್ವದ ಮೂರ್ತರೂಪ. ರಾಜ್ಯದಲ್ಲಿ ಕಾಲಾನುಕಾಲದಿಂದ 'ಅಪರಾಧಿ' ಎನ್ನಿಸಿ ಕೊಂಡವರನ್ನು ಅಗ್ನಿಗಾಹುತಿ ಕೊಡುವುದು ಅಲ್ಲಿಯೆ. ರಾಕ್ಷಸೇಂದ್ರನು ಅರಮನೆಯ ಬಿಸಿಲು ಮಚ್ಚಿನಿಂದ ನೋಡುತ್ತಿರುವಾಗಲೇ ಸತದೃಷ್ಟ ಮಂದಿಯ ದೇಹಗಳು ಪಟಪಟಾಯಮಾನವಾಗಿ ಬೇಯುತ್ತವೆ ಅಲ್ಲಿ. ಆ ಬೃಹದ್ ಅಗ್ನಿದೇವನ ಕೆನ್ನಾಲಿಗೆಗಳು ಗಗನಗಾಮಿಯಾಗಿ ಏರುತ್ತ ನಿಟನಿಟ ಲಟಲಟ ಸದ್ದಿನೊಡನೆ ಭಯಂಕರವಾಗಿ ಪ್ರಜ್ವಲಿಸುವುದನ್ನು ನೋಡಿದರೆ ಮನಃಪ್ರಾಣ ಗಳು ಎಂತಹವರಿಗೂ ಪ್ರಕಂಪಿತಗೊಳ್ಳುವುದು ಸಹಜ.

ಹಿರಣ್ಯಕಶಿಪು ಅರಮನೆಯ ಬಿಸಿಲು ಮಚ್ಚಿನಲ್ಲಿ ನಿಂತು ಪಿಂಗಳನು ತನ್ನಾಜ್ಞೆಯ ಪ್ರಕಾರ ಪ್ರಹ್ಲಾದನನ್ನು ಅಲ್ಲಿಗೆ ಕರೆತಂದುದನ್ನು ನೋಡುತ್ತಲೇ ಇದ್ದಾನೆ! ಹಿಂಬಾಲಿಸಿ ಬಂದ ಜನಸಂದಣಿ ಬಹುದೂರದವರೆಗೂ ಹಬ್ಬಿದೆ. ಎಲ್ಲರ ಹೃದಯ ತಂತುಗಳಲ್ಲೂ ದುರ್ವಾರ ಮನೋವೇದನೆ ಶೋಕಗೀತೆಯನ್ನು ಮಿಡಿಸುತಿತ್ತು ಬೀಸುಗಾಳಿಯಲ್ಲಿ ಅಲೆಯಲೆಯಾಗಿ ತೇಲಿ ಹೋಗುವಂತೆ.

ಪ್ರಹ್ಲಾದ ಬಾಹ್ಯಪ್ರಜ್ಞೆಯೇ ಇಲ್ಲದಷ್ಟು ಧ್ಯಾನಾಂಧನಾಗಿದ್ದು ಮುಚ್ಚಿದ ಕಣ್ಣುಗಳನ್ನು ತೆರದೇಯಿರಲಿಲ್ಲ. ಮುಗಿದ ಕೈಗಳೂ ಇಳಿಯಲಿಲ್ಲ. ಸುತ್ತುವರಿದು ನೆರೆದಿದ್ದ ಜನಸಾಮಾನ್ಯರಿಗೆ ಈ ಸಲ ಪ್ರಹ್ಲಾದ ಬದುಕುಳಿಯುವ ಭರವಸೆ ಉಳಿ ಯಲಿಲ್ಲ. ಎಲ್ಲರ ಕಣ್ಣುಗಳಲ್ಲೂ ಕಂಬನಿಯ ಕೋಡಿ ಹರಿಯುವುದು. ಅದೇ ಪಿಂಗಳನಿಗಾದರೋ ಆತ್ಮವಿಶ್ವಾಸವು ನೂರ್ಮಡಿಯಲ್ಲಿ ಮೈಗೂಡಿಕೊಂಡು ಹುರುಪು ತಾನೇ ತಾನಾಗಿತ್ತು! ಅವನು ಉದ್ದನೆಯ ಬಿದಿರು ಗಣೆಯೊಂದನ್ನು ತೆಗೆದುಕೊಂಡು ಪ್ರಹ್ಲಾದನನ್ನು ಅಗ್ನಿಕುಂಡಕ್ಕೆ ತಳ್ಳಲು ಉದ್ಯುಕ್ತನಾದ. ಆಗ ಇನ್ನೊಂದು ಅಪೂರ್ವವಾದ ಅಚ್ಚರಿ! ಕಾರ್ಮೋಡಗಳಿಲ್ಲದ ತಿಳಿಯಾಗಸದಲ್ಲಿ ಬೃಹದ್ ಬೆಳ್ಮೋಡವೇ ಕಳಚಿಬಿದ್ದಂತೆ ಕುಂಭದ್ರೋಣ ಮಳೆ ಭೋರಿಟ್ಟು

ಸುರಿದು ಆ ಅಗ್ನಿರಾಶಿಯನ್ನು ಕ್ಷಣಮಾತ್ರದಲ್ಲಿ ಆರಿಸಿಬಿಟ್ಟಿತು! ಮಳೆಯ ಆರ್ಭಟ ವನ್ನು ತಡೆಯಲಾರದೆ ಪಿಂಗಳನೇ ಮೊದಲಾದ ದೂತರೆಲ್ಲಾ ಅಲ್ಲಿಂದ ಓಟ ಕಿತ್ತರೂ ಪ್ರಹ್ಲಾದ ಕಿಂಚಿತ್ತೂ ಅಲುಗದೆ ಭಗವಧ್ಯಾನದಲ್ಲಿ ತನ್ಮಯನಾಗಿದ್ದಾನೆ.

ಅರಮನೆಯ ಬಿಸಿಲು ಮಚ್ಚಿನಲ್ಲಿ ಎಲ್ಲವನ್ನೂ ಸ್ವತಃ ಆಲೋಕಿಸುತಿದ್ದ ಹಿರಣ್ಯಕಶಿಪುವಿಗೆ ಒಂದು ಕ್ಷಣವೂ ಅಲ್ಲಿ ನಿಲ್ಲಲಾಗಲಿಲ್ಲ. ಅಂತರ್ಯದಲ್ಲಿ ಅಸಹ ನೀಯ ಕೋಲಾಹಲ ನಡೆಯತೊಡಗಿತು. ಪಡಸಾಲೆಯಲ್ಲಿ ಎರಡೂ ಕೈಗಳನ್ನು ಕಟಕಟೆಯ ಮೇಲೆ ಊರಿ, ನಸುದೂರದ ಅಜಿರಭೂಮಿಯಲ್ಲಿ ಮಳೆಯಿಂದ ಚದರಿ ದಿಕ್ಕಾಪಾಲಾಗಿ ಓಡಿಹೋಗುತಿದ್ದ, ತೊಯ್ದು ಮುದ್ದೆಯಾದ ಜನ ಸಾಂದ್ರತೆಯ ಮೇಲೆ ದಿಟ್ಟಿಯನ್ನು ನೆಡುವನು. ಕೋಪತಾಪಗಳ ಮಹಾಜ್ವಾಲೆ ಯಿಂದ ಒಡಲ ಬಳ್ಳಿ ಬೇಯುತಿತ್ತು. ಆರ್ದ್ರಕೇಶಗಳಿಂದ ನೀರು ತೊಟ್ಟಿಕ್ಕಿ ನ್ಯೈ ಇನ್ನಷ್ಟು ತೊಯ್ದು ಉಡುಪು ಭಾರವಾದರೂ ಅರ್ಧೋನ್ಮಿಸ್ಥಿತ ಅವಸ್ಥೆ ಯಲ್ಲಿಯೇ ನಿಂತಿದ್ದಾನೆ. ಹೆಜ್ಜೆಹೆಜ್ಜೆಗೂ ಸಂದ ಸೋಲು ರಾಕ್ಷಸ ಪ್ರವೃತ್ತಿ ಯನ್ನು ಕೆರಳಿಸಿ ಮುಂದಿನ ಕಾರಸ್ಥಾನಕ್ಕೆ ಆಗಲೇ ಅನುಗೊಳಿಸಿದೆ.

ಆ ವೇಳೆಗೆ ಪಿಂಗಳನ ಕಡೆಯಿಂದ ಬಂದ ದೂತ ಬಾಗಿಲಿನಲ್ಲಿ ಕಾಣಿಸಿ ಕೊಳ್ಳುವನು. ಸಖೇದಾಶ್ಚರ್ಯದಿಂದ—ಸೋಲುಸಂಕಟಗಳಿಂದ ಏರಿಳಿತಗಳ ಉಬ್ಬರಕ್ಕೆ ಸಿಕ್ಕಿ ಮಾತು ಹೊರಡದಷ್ಟು ಗಂಭೀರ ಪರಿಸ್ಥಿತಿ. ಅವನು ಸ್ವಲ್ಪ ಸಮಯ ಏನೂ ಹೇಳಲಾಗದೆ ತಲೆಬಾಗುವನು. ರಂಗುರಂಗಾದ ಕಣ್ಣುಗಳು ಮನೋಜನಿತ ವ್ಯಾಪಾರವೆಲ್ಲ ಸೂಸುವಷ್ಟು ಭಾವಪೂರ್ಣವಾಗಿದ್ದುವು)

ಹಿರಣ್ಯಕಶಿಪು—(ಉದಾಸೀನದಿಂದ) ಏಕೆ ಬಂದೆ....?

ದೂತ—(ಕೈಮುಗಿದು, ಅಡ್ಡಬಿದ್ದು)ಜೀಯಾ....ಪರಾಂಬ....ರಿಸಬೇಕು.

ಹಿರಣ್ಯಕಶಿಪು—ಏನು ?

ದೂತ—ಜಡಿಮಳೆ ಬಿದ್ದು ಬೆಂಕಿಯೂ ಆರಿಹೋಯಿತು....!

ಹಿರಣ್ಯಕಶಿಪು—ಹೋಗಲಿ, ಈಸಲ ಕೈಕಾಲುಕಟ್ಟಿ ಸಮುದ್ರಕ್ಕೆ ಎಸೆದು ಬಿಡಿ! ಅದರಲ್ಲಿ ಮುಳುಗಿ ಸಾಯಲಿ !

ದೂತ—(ಆರ್ತಧ್ವನಿಯಲ್ಲಿ) ಅಪ್ಪಣೆ ಮಹಾಪ್ರಭೂ!

ಹಿರಣ್ಯಕಶಿಪು—ಈಗಲೇಹೋಗು, ತಡಮಾಡಬೇಡ!

ದೂತ—ಆಗಲಿ, ಪ್ರಭೂ!

(ರಾಕ್ಷಸರಾಜನಿಗೆ ದೂತ ಅಡ್ಡಬಿದ್ದು ಎದ್ದಾಗ ತಲೆ ಮೆಲ್ಲನೆ ಸುತ್ತುತ್ತಿರುವುದು ಗಮನಕ್ಕೆ ಬಂತು. ವನಃಪ್ರಾಣಗಳು ಕಲ್ಲಿಗಿಂತ ಕಲ್ಲಾಗಿದ್ದರೂ ಹೃದಯ ಬಿರಿಯುವಷ್ಟು ತಾಪ-ಪರಿತಾಪ. ಆದರೂ ಸಾವರಿಸಿಕೊಳ್ಳುತ್ತ ರಾಜಾಜ್ಞೆಯ ಭಾರವನ್ನು ಶಿರಸಾಹೊತ್ತು ಪಿಂಗಳನೆಡೆಗೆ ಧಾವಿಸುವನು)

ಪಿಂಗಳ—ಏನಯ್ಯ ತೇಲುತ್ತ ಬರುತಿದ್ದಿ ?

ದೂತ—ಅಯ್ಯಾ, ಇಲ್ಲಿಗೆ ಈ ಪ್ರಕರಣ ಮುಗಿಸಿದ್ದರೆ ಸಾಕಾಗಿತ್ತು.

ಪಿಂಗಳ—ಇರಲಿ ನಿನ್ನ ವ್ಯಾಖ್ಯಾನ. ಪ್ರಭುಗಳು ಏನೆಂದರು ಹೇಳು ?

ದೂತ—ಅಯ್ಯೋ, ಇಷ್ಟು ಪರೀಕ್ಷೆ ಸಾಲದೇ ? ಇನ್ನೇಕೆ ರೋಷ ?

ಪಿಂಗಳ—ಮೊದಲು ಹೇಳಯ್ಯಾ, ಅವರು ಏನೆಂದರು ?

ದೂತ—ರಾಜಕುಮಾರನನ್ನು....ಕೈಕಾಲು ಕ....ಟ್ಟಿ....ಸ....ಮುದ್ರಕ್ಕೆ ....ಎಸೆದು....ಬಿಡಿ....ಎಂದಿದ್ದಾರೆ!

(ಬಿಕ್ಕುತ್ತ ಅಲ್ಲೇ ಕುಸಿದು ಬೀಳುವನು ದೂತ. ಆದರೆ ಪಿಂಗಳನಿಗೆ ಅಷ್ಟೇ ಸಂತೋಷ. ಈ ಸಲವಂತೂ ಸೋಲುವ ಪ್ರಸಂಗವೇ ಇಲ್ಲ, ಎಂಬ ಮಹದಾನಂದ)

ಪಿಂಗಳ—(ನೂರ್ಮಡಿಯ ಉತ್ಸಾಹದಿಂದ ಪ್ರಹ್ಲಾದನನ್ನು ಕುರಿತು) ನಡೆ, ನಡೆ! ಈ ಸಲ ನೀನು ಬದುಕಿ ಬರುವುದು ಕನಸಿನ ಮಾತು. ನೀನು ಇನ್ನೂ ಎಷ್ಟು ಆಟ ಆಡಿಸುವೆಯೋ ಅದನ್ನೂ ನೋಡಿಬಿಡುವೆ!

ಜನಕೋಟಿ—ಹಾಯ್! ಹಾಯ್! ಈ ಘೋರ ಹಿಂಸೆ ನೋಡಲಾರೆವೋ.

ಪಿಂಗಳ—ಅವನಿಗೆಲ್ಲಿಯ ಹಿಂಸೆ? ಕಣ್ಮುಚ್ಚಿಕೊಂಡು ಹಾಯಾಗಿದ್ದಾನೆ.

ಇವನಿಂದ ನಮಗೀಗ ಶಿಕ್ಷೆ!

(ಪ್ರಹ್ಲಾದ ಏನೂ ಹೇಳಲಿಲ್ಲ. ಧೈರ್ಯಗಾಂಭೀರ್ಯಗಳಲ್ಲಿ ಶಾಂತ ಧರಿತ್ರಿಯನ್ನೇ ಪರಾಭೂತಗೊಳಿಸುವಷ್ಟು ದೃಢತೆ; ಮನದಲ್ಲಿ ಎಣೆಯಿಲ್ಲದ ವಿಷ್ಣುಧ್ಯಾನ. ಪಿಂಗಳನಿಗೆ ಅವನ ರೀತಿಯನ್ನು ನೋಡಿದಷ್ಟೂ ಕಿಚ್ಚು ಕೆರಳು ವುದು ಸಹಜ. ಆಕ್ಷಣವೇ ಅವನನ್ನು ಸಮೀಪದ ಸಮುದ್ರತೀರಕ್ಕೆ ಕರೆದೊಯ್ಯು ವನು. ಸಮುದ್ರದಂಚಿನಲ್ಲಿ ಆನೆಗಳಂತೆ ಮೈಚಾಚಿದ ಹೆಬ್ಬಂಡೆಗಳ ಸಮೂಹ. ಅದರಲ್ಲೊಂದು ಎತ್ತರವಾದ ಕರ್ರನೆಯ ಕೋಡುಗಲ್ಲು. ಸಮುದ್ರದ ದೊಡ್ಡ ದೊಡ್ಡ ಅಲೆಗಳು ಮುನ್ನುಗ್ಗುವಾಗ ಬಾರಿಬಾರಿಗೂ ಅದನ್ನು ಅಪ್ಪಳಿಸಿ ಘೋರನೆ ಘೋರಿಟ್ಟು ಹಿಮ್ಮರಳುತ್ತವೆ. ಅದರ ನೆತ್ತಿಯನ್ನೇರಿ ಕೆಳಗಡೆ ನೋಡಿದರೆ ತಲೆ ಗಿರ್ರನೆ ತಿರುಗುವಂತಹ ಅಗಾಧವಾದ ಸುನೀಲ ಜಲರಾಶಿ. ಪಿಂಗಳ ಆ ಬಂಡೆಯ ಮೇಲಕ್ಕೆ ಪ್ರಹ್ಲಾದನನ್ನು ಕರೆತಂದಾಗ ಅವನ ತಲೆಯೇ ಗಿರ್ರನೆ ತಿರುಗಿತು ಅಪರ ಸಮುದ್ರದ ಮಹಾ ರಭಸಕ್ಕೆ ಅಂಜಿ. ಆದರೆ ಬಾಲಕ ಪ್ರಹ್ಲಾದನಿಗೆ ಅದು ಗಣನೆಗೆ ಬಂದೇ ಇರಲಿಲ್ಲ. ಸ್ಮಯಮಾನ ಮುಖಬಿಂಬ ದಲ್ಲಿ ಆತ್ಮಪ್ರಭೆ ಬೆಳಗುತಿತ್ತು. ನೀಲ ಭಿತ್ತಿಯ ಮೇಲೆ ದೀಪ್ತ ದೃಷ್ಟಿಯನ್ನು ನೆಟ್ಟು ಶ್ರೀ ವಿಷ್ಣು ಧ್ಯಾನದಲ್ಲಿ ತನ್ಮಯನಾಗಿದ್ದಾನೆ. ಪಿಂಗಳನಿಗೆ ಭೀಕರ ಮೃತ್ಯು ತನ್ನನ್ನೇ ಭದ್ರವಾದ ಪಾಶದಿಂದ ಎಳೆಯುತ್ತಿರುವಂತೆ ಅನಿರೀಕ್ಷಿತ ಭಯಭೀತಿ ಮನದಲ್ಲಿ. ಅಡಿಯಿಂದ ಮುಡಿಯವರೆಗೂ ಕಂಪನದ ಅಲೆ ಝಿಲ್ಲನೆ ಹರಿದಾಡಿತು. ಅಲ್ಲಿ ಒಂದು ಕ್ಷಣವೂ ನಿಲ್ಲಲಾಗದೆ ಪ್ರಹ್ಲಾದನನ್ನು ರಭಸದಿಂದ ಸಮುದ್ರಕ್ಕೆ ತಳ್ಳಿ ತಾನು ತರಾತುರಿಯಿಂದ ಇಳಿದು ಬರುವಾಗ ಕಾಲು ಜಾರಿ ಸಮುದ್ರದೊಳಗೆ ಬಿದ್ದು ಮುಳುಗಿಹೋಗವನು!

ತೀರದಲ್ಲಿ ಕಾದಿದ್ದ ಜನರಾಶಿ ಮತ್ತೆ ಹುಯ್ಯಲಿಟ್ಟಿತು. ಪಿಂಗಳ ಮುಳುಗಿದುದು ಎಷ್ಟು ಸಂತೋಷಪ್ರದವೋ ಪ್ರಹ್ಲಾದ ಮುಳಗಿದುದಕ್ಕೆ ಅಷ್ಟೇ ದುಃಖ. ಅಳುದನಿಯ ಆಲಾಪ ಸಮುದ್ರ ಮೊರೆತಕ್ಕೆ ಪ್ರತಿಸ್ಪಂದಿಯಾಗಿ ಹೊಮ್ಮುವುದು.

ಪ್ರಹ್ಲಾದ ಎತ್ತರದಿಂದ ಬಿದ್ದ ರಭಸಕ್ಕೆ ಆಳದಲ್ಲಿ ಮುಳುಗಿ ಮೇಲೆದ್ದು

ಅಲೆಗಳಿಂದ ಹಲವಾರು ಮಾರು ಕೊಚ್ಚಿಕೊಂಡು ಹೋಗಿ ದೂರದಲ್ಲಿ ಕಣ್ಮರೆ ಯಾಗುವನು. ಆ ಪುರ ನಿವಾಸಿಗಳು ಕರುಣಕಾತರ ಕಂಠದಿಂದ ಬೊಬ್ಬೆ ಇಡುವರು. ಅನಂತರ ಅದೆಂತಹ ಆಶ್ಚರ್ಯ!

ಬೃಹದ್ ಅಲೆಯೊಂದು ಭೋರನೆ ತೀರದೆಡೆಗೆ ನುಗ್ಗಿ ಬಂದಾಗ ತಾಯಿ ಯಾದವಳು ಮಗುವನ್ನು ಎರಡೂ ಕೈಗಳಿಂದ ಎತ್ತಿಕೊಂಡು ಬರುವಂತೆ ಪ್ರಹ್ಲಾದನನ್ನು ಸುಖವಾಗಿ ಎತ್ತಿತಂದು ತೀರದಲ್ಲಿ ಇಳಿಸಿ ವಿನಮ್ರತೆಯಿಂದ ಹಿಮ್ಮರಳಿ ಹೋಯಿತು)

ಜನ—ಪ್ರಹ್ಲಾದನಿಗೆ ಮಂಗಳವಾಗಲಿ! ರಾಜಕುಮಾರನಿಗೆ ಶುಭವಾಗಲಿ!

(ಎಲ್ಲರೂ ಮುನ್ನುಗಿ ಅತ್ಯಾನಂದದಿಂದ ಬಾಲಕನನ್ನು ಕೈಯಿಂದ ಕೈಗೆ ಎತ್ತಿಕೊಂಡು ಮುದ್ದಾಡುವರು. ಒಕ್ಕೊರಲ ದನಿ ಪುನಃ ಮೊಳಗುವುದು)

ಜನ—ಪ್ರಹ್ಲಾದಕುಮಾರ ನೂರ್ಕಾಲ ಬಾಳಲಿ!

ಪ್ರಹ್ಲಾದ—ಓಂ ಶ್ರೀ ವಿಷ್ಣುವೇ ನಮಃ.

(ದೂರದಲ್ಲಿ ಸಿಂಗಳ ಮೇಲೆದ್ದು ಒದ್ದಾಡಿ ಮತ್ತೆ ಮುಳುಗಿ ಹೋಗು ವನು)

ಜನ—(ಏಕಕಂಠದಿಂದ) ಅವನಿಗೆ ಸರಿಯಾದ ಶಾಸ್ತಿಯಾಯಿತು! ಎಂತಹ ಬುದ್ಧಿಯೋ ಅಂತಹ ಶಿಕ್ಷೆ!

ಪ್ರಹ್ಲಾದ—ಓಂ ಶ್ರೀ ವಿಷ್ಣುವೇ ನಮಃ

ಜನ—ಇನ್ನಾದರೂ ಪ್ರಭುಗಳಿಗೆ ಬುದ್ಧಿ ಬರಲಿ!

ಜನ—ಈ ಸಲ ಖಂಡಿತ ಪಾಠ ಕಲಿಯಲೇಬೇಕು. ಕಲಿತೇ ಕಲಿಯು ತ್ತಾರೆ. ಸ್ವಂತ ಮಗುವನ್ನು ಗುರುತರವಾದ ಶಿಕ್ಷೆಗೆ ಗುರಿಪಡಿಸುವುದುಂಟೆ? ಹೇ ಬ್ರಹ್ಮದೇವ, ನೀನೇ ರಕ್ಷೆ!

ಪ್ರಹ್ಲಾದ—ಓಂ ಶ್ರೀ ವಿಷ್ಣುವೇ ನಮಃ.

ಜನ—ಪ್ರಹ್ಲಾದನಿಗೆ ಜಯವೆನ್ನಿ, ಜಯ ಜಯ ಜಯ!

ಪ್ರಹ್ಲಾದ—ಓಂ ಶ್ರೀ ವಿಷ್ಣುವೇ ನಮಃ.

ಜನ—ಸತ್ಯಮೇವ ಜಯತೇ !

ಪ್ರಹ್ಲಾದ—ಓಂ ಶ್ರೀ ವಿಷ್ಣುವೇ ನಮಃ.

ಜನ—ಜಯ ಜಯ ಜಯ ಜಯಹೇ !

(ಜನವಾರ್ಧಿಯ ಜಯಕಾರ ಮತ್ತು ಹರ್ಷಘೋಷ ಬಹಳ ಹೊತ್ತಿನವರೆಗೆ ನಡೆದರೂ ಪ್ರಹ್ಲಾದ ಅದಾವುದನ್ನೂ ಅರಿಯದೆ ಧ್ಯಾನಮಗ್ನನಾಗಿಯೇ ಇದ್ದಾನೆ.

ಜನರು ಪ್ರಹ್ಲಾದನನ್ನು ಅತ್ಯಾನಂದದಿಂದ ಎತ್ತಿಕೊಂಡು ಊರಿಗೆ ಹಿಮ್ಮರಳುತ್ತಾರೆ. ಹಿರಣ್ಯಕಶಿಪುವಿಗೆ ಸುದ್ದಿ ಆ ಕೂಡಲೇ ಮುಟ್ಟಿತು. ಅವನು ಕೋಪದಿಂದ ಕುದಿಯುತ್ತ ಅಂತಃಪುರಕ್ಕೆ ಬಂದಾಗ ಪದಾಘಾತಕ್ಕೆ ಅಂತಃಪುರವೇ ಧಣಧಣ ಅದುರಿತು. ರಾಣಿ ಕಂಪಿಸುತ್ತ ಎದ್ದು ನಿಲ್ಲುವಳು. ಪತಿಯ ದೃಷ್ಟಿಯಲ್ಲಿ ಆಕೆ ಮಹಾ ಅಪರಾಧಿನಿ. ಕೊನೆಗಾಣಿಸಲಾರದಂತಹ ಧೂರ್ತ ಮಗನನ್ನು ಹೆತ್ತು ಯಾರೂ ಮಾಡಿರದ ತಪ್ಪು ಮಾಡಿದ್ದಾಳೆ. ಒಡಲ ದುಃಖ ಉಕ್ಕುಕ್ಕಿ ಬರುತಿದ್ದರೂ ಬಹು ಕಷ್ಟದಿಂದ ಅದುಮಿ ಹಿಡಿದಳು. ಅವನ ರೌದ್ರಾವತಾರವನ್ನು ಹುಬ್ಬೆತ್ತಿ ನೋಡಲೂ ಸಹ ಅವಳಿಂದ ಸಾಧ್ಯವಾಗಲಿಲ್ಲ)

ಹಿರಣ್ಯಕಶಿಪು—(ಕಟುವಾದ ದನಿಯಲ್ಲಿ) ಇಂದು ನೀನೇ ನಿನ್ನ ಮಗನಿಗೆ ಉಗ್ರ ವಿಷ ಕುಡಿಸಿ ಕೊಲ್ಲಬೇಕು ತಿಳಿಯಿತೇ ?

(ರಾಣಿ ಮರುಮಾತಾಡದೆ ಮುಮ್ಮುಲ ಮರುಗಿ ಅತ್ತು ಕರೆದು ಗೋಳಾಡಿದಳು. ಆದರೆ, ಆ ರಾಕ್ಷಸನ ಮುಂದೆ ಅದೆಲ್ಲಾ ಎತ್ತ ? ಮರುಗಳಿಗೆಯಲ್ಲೇ ಉಗ್ರವಾದ ವಿಷ ಬಟ್ಟಲಲ್ಲಿ ಅಣಿಯಾಗಿ ಬಂತು. ಆ ವೇಳೆಗೆ ಪ್ರಹ್ಲಾದನೂ ಅಲ್ಲಿಗೆ ಚಿನ್ನದ ಪುತ್ಥಳಿಯಂತೆ ಮುದ್ದು ಮುದ್ದಾಗಿ ನಡೆದೈತರುತ್ತಾನೆ)

ರಾಣಿ—ಬಾ, ಕಂದ.

(ಎರಡೂ ಕೈಗಳಿಂದ ಮಗುವನ್ನು ಅಪ್ಪಿಕೊಂಡು ಗಳಗಳನೆ ಅಳುವಳು)

ಪ್ರಹ್ಲಾದ—ಅಮ್ಮಾ, ಚಿಂತಿಸಬೇಡ. ನಿನ್ನನ್ನು ನೋಡುವ ಅದೃಷ್ಟದಿಂದಲೇ ನಾನು ಬದುಕಿ ಬಂದಿರುವೆ.

ರಾಣಿ—ಈ ಘೋರಾತಿಘೋರ ಸಂಕಟವನ್ನು ಎಂತು ಸಹಿಸಲಿ ಮಗೂ?

ಪ್ರಹ್ಲಾದ—ಇದಕ್ಕೆಲ್ಲಾ ಇನಿತೂ ದುಃಖಿಸಬಾರದು; ಆಗು–ಹೋಗು ನಮ್ಮ ಕೈಯಲಿಲ್ಲ. ಅದನ್ನು ತಿಳಿದುಕೊಂಡರೆ ಯಾರಿಗೂ ದುಃಖವಿಲ್ಲ.

ರಾಣಿ—ಮಗೂ, ನನ್ನ ಕೈಯಿಂದಲೇ ನಿನಗೆ ವಿಷವೂಡಿಸುವಂತಾಯಿತೇ?

ಹಿರಣ್ಯಕಶಿಪು—(ಗರ್ಜಿಸುವನು)ಮಾತುಕತೆ ಇರಲಿ,ಮೊದಲುಕುಡಿಸು.

ಪ್ರಹ್ಲಾದ—ಎಲ್ಲಿ, ವಿಷದ ಬಟ್ಟಲು ಇತ್ತ ಕೊಡಮ್ಮಾ?

(ಹಿರಣ್ಯಕಶಿಪು ಖಡ್ಗಧಾರಿಯಾಗಿ ಅತೀ ಸಮೀಪದಲ್ಲೇ ನಿಂತು ಉರಿಗೊಳ್ಳಿಯಂತೆ ಅಡಿಯಿಂದ ಮುಡಿಯವರೆಗೆ ಕೋಪಾನಲದಿಂದ ಉರಿಯುತಿದ್ದಾನೆ)

ರಾಣಿ—(ಸ್ವಗತ) ಮಗುವಿಗೆ ವಿಷಕೊಟ್ಟಮೇಲೆ ಅದೇ ವಿಷದಿಂದ ನನ್ನ ಪ್ರಾಣಹರಣ ಮಾಡಿಕೊಳ್ಳುವೆ. (ಪ್ರಕಾಶ) ಮಗೂ, ನನಗೀಕಷ್ಟ ಏಕಪ್ಪಾ ಬಂತು?

ಪ್ರಹ್ಲಾದ—(ತಾಯಿಯ ತೊಡೆಯ ಮೇಲೆ ಕುಳಿತುಕೊಂಡು) ನೀನು ಸ್ವಲ್ಪವೂ ಚಿಂತಿಸಬೇಡಮ್ಮಾ.

ಹಿರಣ್ಯಕಶಿಪು—ಮೊದಲು ಬಟ್ಟಲು ತಗೋ?

(ಅಬ್ಬರಿಸುವನು)

ಪ್ರಹ್ಲಾದ—ಆಗಲಿ ತಂದೆಯೆ, (ತಾಯಿಯನ್ನು ಕುರಿತು) ಆ ವಿಷದ ಬಟ್ಟಲು ಎಲ್ಲಿದೆ ಅಮ್ಮಾ.

ರಾಣಿ—ಇಗೋ, ಇಲ್ಲಿದೆ ಕಂದಾ!

(ಗೋಳಾಡಿ ಕಂಬನಿ ಸೂಸುವಳು)

ಪ್ರಹ್ಲಾದ—(ಶಾಂತಿ ಸಮಾಧಾನಗಳ ಒಕ್ಕೂಟವಾಗಿ, ಮೃದು ಮಂದ ದನಿಯಲ್ಲಿ) ಅಮ್ಮಾ, ನಿಶ್ಚಿಂತೆಯಿಂದ ಕೊಡು. ನಮ್ಮ ನಮ್ಮ ಜನ್ಮಫಲವನ್ನು

ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಏನಾಗಬೇಕೋ ಅದು ಆಗಿಯೇ ತೀರಬೇಕು. ಅದಕ್ಕಾಗಿ ಚಿಂತಿಸಲೂ ಬಾರದು.

(ಆ ಮಾತು ಅಂತಃಸ್ಥಲವನ್ನು ಮುಟ್ಟಿದರೂ ಮಿದು ಮನದ ರಾಣಿ ಮೂರ್ಛೆಹೋದಳು. ಬಾಲಕ ತಾಯಿಯ ಮುಖವನ್ನು ನೇವರಿಸಿ ಹೂಮುತ್ತ ನಿಟ್ಟು ಉಗ್ರ ವಿಷವನ್ನು ತೆಗೆದುಕೊಂಡು ನೀರು ಕುಡಿದಷ್ಟು ಸರಾಗವಾಗಿ ಕುಡಿಯುವನು. ಆಗಲೂ ಅದರಿಂದ ಆವ ಪರಿಣಾಮವೂ ಅವನ ಮೇಲುಂಟಾ ಗಲಿಲ್ಲ. ಹಿರಣ್ಯಕಶಿಪುವಿನ ನವಿರು ನಿಮಿರಿ ದೇಹದಾದ್ಯಂತ ಕೋಪಾತಿಶಯದ ಝರಿ ವಿದ್ಯುಲ್ಲಹರಿಯಂತೆ ಹರಿದಾಡಿತು! ಸಲಸಲಕ್ಕೂ ಎದುರಿಸಿದ ಸೋಲಿ ನಿಂದ ತನ್ನನ್ನೇ ತಾನು ಮುಗಿಸಿಬಿಡುವಷ್ಟು ಕೋಪ–ಮಾತ್ಸರ್ಯ. ತಾಳಲಾರ, ತಳ್ಳಲಾರ)

ಹಿರಣ್ಯಕಶಿಪು—ಪೂರ್ತಿ ಕುಡಿದೆಯೋ, ಇಲ್ಲವೊ ?

ಪ್ರಹ್ಲಾದ—ಇಲ್ಲಿ ನೋಡಿ (ಬರಿದಾದ ಬಟ್ಟಲನ್ನು ಮುಂದೆ ಮಾಡುವನು)

(ಹಿರಣ್ಯಕಶಿಪು ದಿಗ್ಭ್ರಾಂತನಾದರೂ ಕೆಲವು ಕ್ಷಣ ಯೋಚಿಸಿದ; ಮುಂದೇನು ಮಾಡಬೇಕೋ ಹೊಳೆಯಲಿಲ್ಲ. ಕೋಪದ ಕಾವು ನೇರವಾಗಿ ನಡುನೆತ್ತಿಗೇರಿತು)

ಪ್ರಹ್ಲಾದ—ಓಂ ಮಹಾವಿಷ್ಣುವೇ ನಮಃ.

ಹಿರಣ್ಯಕಶಿಪು–(ಸ್ವಗತ) ಅಬ್ಬ! ಉಗ್ರ ವಿಷವೂ ಮುಟ್ಟಲಿಲ್ಲವೆಂದರೆ ವಿಶೇಷವೆ ಸೈ! ಇದು ಸ್ವಶಕ್ತಿಯೋ ಅಥವಾ ವಿಷ್ಣು ಮಾಯೆಯೋ ಊಹಿಸು ವುದು ಕಷ್ಟ. (ಸ್ವಲ್ಪ ಯೋಚಿಸಿ) ಮೊದಲು ವಿಷ್ಣುವನ್ನು ಕೊಂದರೆ ಅನಂತರ ಇವನನ್ನು ತೀರಿಸಬಹುದು. ಅಲ್ಲಿಯವರೆಗೆ ಇವನ ನಿವಾರಣೆ ಸಾಧ್ಯವೇ ಇಲ್ಲ. (ಪ್ರಕಾಶ) ಎಲವೋ, ಪ್ರಹ್ಲಾದ! ಉಗ್ರವಿಷವೂ ನಿನ್ನನ್ನು ಮುಟ್ಟಲಿಲ್ಲ. ಇಷ್ಟೆ ಲ್ಲಕ್ಕೂ ಕಾರಣ ಆ ವಿಷ್ಣುವೇ. ಅವನೆಲ್ಲಿದ್ದಾನೆ ಮೊದಲು ತೋರಿಸು !

ಪ್ರಹ್ಲಾದ–(ಅತಿ ಕರುಣ ಕಂಠದಿಂದ) ತಂದೆಯೇ ಅವನು ಎಲ್ಲೆಲ್ಲಿಯೂ ಇದ್ದಾನೆ. ನೋಡುವ ಕಣ್ಣುಗಳು ಪ... (ಅಷ್ಟಕ್ಕೆ ಸುಮ್ಮನಾಗುವನು)

ಹಿರಣ್ಯಕಶಿಪು—ಅಂದರೆ ಎಲ್ಲಿ? ಯಾವ ಸ್ಥಳದಲ್ಲಿದ್ದಾನೆ, ಈಗಲೇ ತೋರಿಸು.

ಪ್ರಹ್ಲಾದ—ಅವನೇ ವಿಶ್ವ ; ವಿಶ್ವವೇ ಅವನು. ಅವನಿಲ್ಲದ ತಳವೇ ಇಲ್ಲ.

ಹಿರಣ್ಯಕಶಿಪು—ಅಂದರೆ ಈ ಗೋಡೆಯಲ್ಲಿಯೂ ಇದ್ದಾನೆಯೇ ? (ಖಡ್ಗದಿಂದ ಗೋಡೆಯನ್ನು ಮುಟ್ಟುವನು)

ಪ್ರಹ್ಲಾದ—ಹೌದು ತಂದೆಯೆ.

ಹಿರಣ್ಯಕಶಿಪು—ಈ ಮಾಡಿನಲ್ಲಿ ?

ಪ್ರಹ್ಲಾದ—ಇದ್ದಾನೆ.

ಹಿರಣ್ಯಕಶಿಪು—ಈ ಸ್ತಂಭದಲ್ಲಿ ?

ಪ್ರಹ್ಲಾದ—ಇದ್ದಾನೆ ಅಪ್ಪಾಜಿ. ಅವನು ಸೂಕ್ಷ್ಮಾತಿಸೂಕ್ಷ್ಮ, ಎಲ್ಲೆಲ್ಲಿಯೂ ಇರಬಲ್ಲ!

ಹಿರಣ್ಯಕಶಿಪು—(ಉಗ್ರನಾಗಿ ಹುಬ್ಬುಗಂಟಿಕ್ಕಿ, ಕಣ್ಣುಗಳಲ್ಲಿ ಕಿಡಿಗಳನ್ನು ಕಾರುತ್ತ ಖಡ್ಗವನ್ನು ಸ್ತಂಭದ ಮೇಲೆ ಬೀಸುವನು) ಎಲ್ಲಿ ತೋರಿಸು ?

(ಖಡ್ಗಾಘಾತಕ್ಕೆ ಭಯಂಕರ ಸದ್ದು ಮೂಡಿ ಸ್ತಂಭ ಒಡೆದು ಚೂರಾಯಿತು. ಭವಭವಾಂತರಗಳ ಪುಣ್ಯಾಭಿಸಾರವೇ ಮೈವೆತ್ತಿ ಬಂದಂತೆ ಬಾಲಕ ಪ್ರಹ್ಲಾದ ಕಿಂಚಿತ್ತೂ ಮಿಸುಗದೆ ಭಗವಧ್ಯಾನತತ್ಪರನಾಗಿದ್ದಾನೆ. ಮುಗಿದ ಕೈ ಇಳಿಯಲಿಲ್ಲ. ರಾಕ್ಷಸಾಳುಗಳೂ, ಪುರಜನರೂ, ಚೇಟಿಯರೂ, ಸ್ವತಃ ಹಿರಣ್ಯಕಶಿಪುವೂ ನೋಡುತ್ತಲೇ ಇದ್ದಾರೆ. ಸ್ತಂಭದ್ವಾರದಿಂದ ಹೊರಹೊಮ್ಮಿದ ಉಗ್ರನಾರಸಿಂಹನ ಭಯಾನಕ ರೂಪು ಎದೆಯನ್ನು ತಲ್ಲಣಿಸುವಂತಿತ್ತು. ಹಿರಣ್ಯಕಶಿಪು ಆ ಕ್ಷಣವೇ ಭಯಚಕಿತನಾದರೂ ಖಡ್ಗವೆತ್ತುವುದರಲ್ಲಿ ಹಿಂಜರಿಯಲಿಲ್ಲ; ಆದರೇನು ? ಅದೇ ಗಳಿಗೆಯಲ್ಲಿ ಅವನು ನಾರಸಿಂಹನ ಕೈವಶನಾಗಿ ಮಿಲಿಮಿಲಿ ಗೊಳ್ಳುವನು. ಬ್ರಹ್ಮದೇವನ ವರಕ್ಕೆ ಮನ್ನಣೆಯಿತ್ತ ಶ್ರೀ ವಿಷ್ಣುವು ಪ್ರತ್ಯಕ್ಷನಾದುದು ಸಂಧ್ಯಾಸಮಯದಲ್ಲಿ. ಮನುಷ್ಯರೂಪಿಯೂ

ಅಲ್ಲದೆ ಮೃಗರೂಪಿಯೂ ಅಲ್ಲದೆ ನೃಸಿಂಹನಾಗಿ ಸಂಭವಿಸಿ ನಿರಾಯುಧನಾಗಿ ತನ್ನ ಉಗುರುಗಳಿಂದಲೇ ಹಿರಣ್ಯಕಶಿಪುವಿನ ಉದರ ಪ್ರದೇಶವನ್ನು ಬಗೆದು ಅರೆಚಣದಲ್ಲಿ ಯಮಧರ್ಮನಿಗೆ ಆಹುತಿಕೊಡುವನು.

ವಿಷ್ಣುವಿನ ಉಗ್ರರೂಪವನ್ನು ನೋಡಿ ಸಮಸ್ತ ಜೀವಕೋಟಿಯೂ ತಲ್ಲಣಿಸಿತು. ಬಾಲಕ ಪ್ರಹ್ಲಾದನು ನಾರಸಿಂಹನ ಪದತಲದಲ್ಲಿ ಮಂಡಿಸಿ ಭಕ್ತಿಯಿಂದ ಸ್ತುತಿಸಿ ನಮಿಸುವನು)

ಪ್ರಹ್ಲಾದ ಪ್ರಭುವೇ ಪ್ರಸನ್ನನಾಗು. ನಿನ್ನನ್ನು ಕೈಮುಗಿದು ಬೇಡಿ ಕೊಳ್ಳುವೆ.

ನಾರಸಿಂಹ—ಮಗೂ, ಪ್ರಹ್ಲಾದ! ಇಂದಿಗೆ ನಿನ್ನ ಭಂಗ ಹರಿಯಿತು. ನೀನಿನ್ನು ನೆಮ್ಮದಿಯಿಂದ ಲೋಕಕ್ಕೆ ಬೆಳಕಾಗುವಂತೆ ಬಾಳು. ನಿನಗೆ ಮಂಗಳ ವಾಗಲಿ.

ಪ್ರಹ್ಲಾದ—ಮಹಾಪ್ರಭುವೆ! ನೀನು ಸೌಮ್ಯನಾಗಿ ನನ್ನ ತಾಯಿಗೆ ದರ್ಶನವನ್ನು ನೀಡಿ ಉದ್ಧರಿಸು. ನಿನ್ನನ್ನು ಕೈಮುಗಿದು ಬೇಡಿಕೊಳ್ಳುವೆ ಅನುಗ್ರಹಿಸು ತಂದೆಯೇ!

ನಾರಸಿಂಹ—ಆಗಲಿ ಮಗುವೇ.

ಪ್ರಹ್ಲಾದ—ಓಂ ನಾರಸಿಂಹಾಯ ನಮಃ

ನಾರಸಿಂಹ—ಮಗೂ, ನೀನು ರಾಜತ್ವವನ್ನು ಕೈಕೊಳ್ಳು. ನಿನ್ನ ಆಳ್ವಿಕೆ ಯಿಂದ ಲೋಕದಲ್ಲಿ ಧರ್ಮ ಸಂಸ್ಥಾಪನೆಯಾಗಲಿ.

ರಾಣಿ—ಸ್ವಾಮಿ, ಪ್ರಭುವೇ! ನನ್ನ ಪತಿಗೆ ಸದ್ಗತಿಯನ್ನು ಕರುಣಿಸಿ ಕಾಪಾಡು.

(ನಮಸ್ಕರಿಸಿ ಕಂಬನಿಯನ್ನು ಸೂಸುವಳು)

ಪ್ರಹ್ಲಾದ—ಪರಮಾತ್ಮ! ತಂದೆಯ ಆತ್ಮಕ್ಕೆ ಶಾಂತಿಯನ್ನು ದಯ ಪಾಲಿಸು.

ನಾರಸಿಂಹ—ತಥಾಸ್ತು.

ಪ್ರಹ್ಲಾದ—ಓಂ ನಾರಸಿಂಹಾಯ ನಮಃ

ತಾಯಿ—ಓಂ ನಾರಸಿಂಹಾಯ ನಮಃ

ಜನ—(ಒಕ್ಕೊರಲಿನಿಂದ) ಜಯ ಜಯ ನಾರಸಿಂಹ. ಜಯ ಜಯ ಪ್ರಹ್ಲಾದ ರಕ್ಷಕ ಜಯ ಜಯ ಜಯಹೇ !

(ಆಕ್ಷಣವೇ ನಾರಸಿಂಹಮೂರ್ತಿಯು ಅಂತರ್ಧಾನವಾಗುವುದು)

—ಮಂಗಳಂ—

ಮಲ್ಲಿಕಾ ಕೃತಿಗಳು

1	ಜೀವನ ಗಂಗಾ	(ಕಾದಂಬರಿ)	30	00
2	ಡಾ|| ಅಘೋರ	,,	30	00
3	ಡಾ|| ಕಮಲೇಶ್	,,	30	00
4	ವಂದೇ ಮಾತರಂ	,,	30	00
5	ಅನಂತಾನಂತದೆಡೆಗೆ	,,	20	00
6	ರತ್ನಗರ್ಭಾವಸುಂಧರಾ	(ಕಥಾ ಸಂಕಲನ)	15	00
7	ಬಹುರತ್ನಾವಸುಂಧರಾ	,,	15	00
8	ಲಿಯೋನಾ	,,	15	00
9	ಶ್ರೀಮುಖಿ	,,	15	00
10	ವೈಶಾಖೀಪರ್ವ	,,	15	00
11	ಫಾಲ್ಗುಣೀ ಪರ್ವ	,,	12	00
12	ಪೂಜಾವಸಾನ ಸಮಯೇ....!	(ಕವಿತಾಸಂಕಲನ)	8	00
13	ಧ್ಯಾನಾವಸಾನ ಸಮಯೇ....!	,,	8	00
14	ಗಾನ ತೀರ್ಥ	,,	8	00
15	ನಾದ ಬಿಂದು	,,	8	00
16	ಗಗನ ಕುಸುಮ	,,	8	00
17	ಜೀವನ ಕುಸುಮ		8	00
18	ವಿಜಯ ಗಾಥಾ	(ದೇಶಭಕ್ತಿ ಗೀತೆ)	6	00
19	ಪುಣ್ಯಪಯೋನಿಧಿ	(ನಾಟಕ)	12	00
20	ಪುಣ್ಯಾಭಿಸಾರ	,,	12	00
21	ತರಂಗಿಣಿ	(ಸಾನೆಟ್ಟುಗಳು)	10	00
22	ಕೃತಂ ಸ್ಮರ ಕ್ರತುಂ ಸ್ಮರ	(ಉಪನಿಷತ್ಕಥಾ)	15	00
23	ಐಂದ್ರ ಕೀರ್ತಿ ಕೇತನಂ	(ಗದ್ಯ ಕಾವ್ಯ)	22	00
24	ಉತ್ತರೋತ್ತರಣಿ		12	00
25	ರಾಗಾನುರಾಗಿಣಿ		12	00

ಲಕ್ಷ್ಮೀ ಪ್ರಕಾಶನ

7, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು–560 025